Swabhimani Sahakari
Pages : 46/12₹

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 18
Issue - 10
October - 2021

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸಹಕಾರ ಸಂಘಗಳು ಬಲಗೊಳ್ಳಬೇಕಾದರೆ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ಸಂಸ್ಥೆ ಸ್ಥಾಪಿಸುವ ಅವಶ್ಯ ಇದೆ.



ಸಹಕಾರ ಕ್ಷೇತ್ರದ ಸಮಗ್ರ ಅಧ್ಯಯನಕ್ಕಾಗಿ ಹೊಸ ವಿಶ್ವವಿದ್ಯಾಲಯ ಸ್ಥಾಪಿಸುವ ಅಗತ್ಯವಿದೆ





## ಸಹಕಾರದಿಂದ ಸಮೃದ್ಧಿ

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಸಂಖ್ಯೆಯನ್ನು 3 ಲಕ್ಷಕ್ಕೆ ಏರಿಸಲಾಗುವುದು



ಕೇಂದ್ರ ಸರ್ಕಾರ ಶೀಘ್ರವಲ್ಲೇ ಹೊಸ ಸಹಕಾರಿ ನೀತಿಯನ್ನು ಹೊರತರಲಿದೆ

## ಸಹಕಾರ ವಿಚಾರದಲ್ಲಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳೊಂದಿಗೆ ಸಹಕರಿಸುತ್ತದೆ

ಸೌಹಾರ್ದ ಸಹಕಾರಿಗಳ ಸಂಖ್ಯೆ : 5381

ಇ–ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1424



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

ಆತ್ಮೀಯ ಸಹಕಾರಿ ಬಂಧುಗಳಿಗೆ ನಾಡಹಬ್ಬ ದಸರಾ ವಿಜಯದಶಮಿಯ ಹಾಗೂ ವಾಲ್ಮಿಕಿ ಜಯಂತಿಯ ಮತ್ತು ಈದ್–ಮಿಲಾದ್ ಹಬ್ಬಗಳ ಶುಭಾಶಯಗಳು. ಶಕ್ತಿದೇವತೆ ಚಾಮುಂಡಿದೇವಿ ನಮ್ಮೆಲ್ಲರ ವೈಯಕ್ತಿಕ ಹಾಗು ಕೌಟುಂಬಿಕ ಜೀವನದಲ್ಲಿ ಹಾಗೂ ಸಹಕಾರಿ ಕ್ಷೇತ್ರದಲ್ಲಿ ಸುಖ ಶಾಂತಿ ನೆಮ್ಮದಿಯನ್ನು ದಯಪಾಲಿಸಲಿ. ನಮ್ಮ ನಿಮ್ಮೆಲ್ಲರ ಇಷ್ಟಾರ್ಥಗಳನ್ನು ನೆರವೇರಿಸಲಿ ಎಂದು ಪ್ರಾರ್ಥಿಸುತ್ತೇನೆ.

# ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ "ಸೌಹಾರ್ದ ಸಹಕಾರಿಗಳು ಸೌಹಾರ್ದ ಸಹಕಾರಿ ಸಂಘಗಳೆಂದು" ತಿದ್ದುಪಡಿಗಳನ್ನು ಮಾಡಿಕೊಟ್ಟಿರುವ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರಿಗೆ, ಮಾನ್ಯ ಸಹಕಾರ ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ ರವರಿಗೆ, ಶಾಸಕರುಗಳಿಗೆ, ವಿಧಾನ ಪರಿಷತ ಸದಸ್ಯರುಗಳಿಗೆ, ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ಹಾಗೂ ಸಹಕಾರ ಸಂಘಗಳ ನಿಬಂಧಕರಿಗೆ ಸಂಯುಕ್ತ ಸಹಕಾರಿಯ ಹಾಗೂ ರಾಜ್ಯದ ಸೌಹಾರ್ದ ಸಹಕಾರಿ ಸಂಘಗಳಿಂದ ಕೃತಜ್ಞತೆ.

**ಮಾನ್ಯ ಸಹಕಾರಿಗಳೇ,**

ಸೌಹಾರ್ದ ಸಹಕಾರಿ ಕ್ಷೇತ್ರದ ಆಡಳಿತಾತ್ಮಕ ತೊಂದರೆಗಳನ್ನು ನಿವಾರಿಸಿಕೊಂಡು ಅಭಿವೃದ್ಧಿಯತ್ತ ಸಾಗುವುದಕ್ಕಾಗಿ ಕಳೆದ 3–4 ವರ್ಷಗಳಿಂದ ಅವಶ್ಯಕವಾಗಿದ್ದ ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿ ಕೊನೆಗೂ ವಿಧಾನ ಮಂಡಳದಲ್ಲಿ ಅಂಗೀಕಾರವಾಗಿರುವುದು ಎಲ್ಲ ಸೌಹಾರ್ದ ಸಹಕಾರಿಗಳಿಗೆ, ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಗೆ ವೈಯಕ್ತಿಕವಾಗಿ ನನಗೆ ಹೆಚ್ಚಿನ ಸಂತೋಷವನ್ನುಂಟುಮಾಡಿದೆ. ವಿಶೇಷವಾಗಿ ಕೇಂದ್ರದ ಆದಾಯ ತೆರಿಗೆ ಇಲಾಖೆಯವರ ತಗಾದೆಯಿಂದ ಹೊರಬರಲು ಈ ತಿದ್ದುಪಡಿ ಅಗತ್ಯವಾಗಿತ್ತು. ಕಳೆದ 3–4 ವರ್ಷಗಳಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ನೀವು ಸಹಕಾರಿ ಸಂಘಗಳಲ್ಲ ನಿಮ್ಮ ಹೆಸರಲ್ಲಿ ಸಹಕಾರ ಸಂಘವೆಂಬುದಿಲ್ಲ ಎಂಬುದಾಗಿ ವ್ಯಾಖ್ಯಾನಿಸಿ ನೀವು ತೆರಿಗೆ ಕಟ್ಟುವ ವ್ಯಾಪ್ತಿಗೆ ಸೇರುತ್ತೀರಿ ಆದ್ದರಿಂದ ತೆರಿಗೆ ಕಟ್ಟುವಂತೆ ನೋಟೀಸು ಬರುವುದು ಸೌಹಾರ್ದ ಸಹಕಾರಿಗಳು ಹೈಕೋರ್ಟ್ ಹೋಗುವುದು ಲಕ್ಷಾಂತರ ರೂ ವೆಚ್ಚ ಮಾಡುವುದು. ಸಂಯುಕ್ತ ಸಹಕಾರಿಯ ವತಿಯಿಂದ ಹಲವಾರು ಬಾರಿ ಕೇಂದ್ರದ ಸಿ.ಬಿ.ಡಿ.ಟಿ ಅಧಿಕಾರಿಗಳನ್ನು ಕೇಂದ್ರ ಹಣಕಾಸು ಸಚಿವರನ್ನು ಭೇಟಿ ಮಾಡಿ ವಿಷಯ ಮನವರಿಕೆ ಮಾಡಿದಾಗ್ಯೂ ಈ ತೊಂದರೆ ತಪ್ಪಿರಲಿಲ್ಲ. ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಗೆ ತಿದ್ದುಪಡಿ ಮಾಡುವುದು ಅಗತ್ಯವಾಗಿತ್ತು. ನಿರಂತರ ಹೋರಾಟದ ಫಲವಾಗಿ ದಿನಾಂಕ 20.09.2021 ರಂದು ವಿಧಾನ ಸಭೆಯಲ್ಲಿ ಅಂಗೀಕಾರವಾಗಿದೆ. ಇದರ ಜೊತೆಗೆ ಇನ್ನು ಕೆಲವು ಅಗತ್ಯ ತಿದ್ದುಪಡಿಗಳನ್ನು ಕೂಡ ಅಂಗೀಕಾರ ನೀಡಲಾಗಿದೆ. ಪರಿಣಾಮವಾಗಿ ಸೌಹಾರ್ದ ಸಹಕಾರಿಗಳನ್ನು ಸೌಹಾರ್ದ ಸಹಕಾರಿ ಸಂಘಗಳು ಎಂದು ಕರೆಯಲಾಗುತ್ತದೆ. ಕಾಯ್ದೆಯ ತಿದ್ದುಪಡಿ ಪ್ರಕ್ರೀಯೆಯಲ್ಲಿ ಸಹಕಾರ ಸಚಿವರ ಕಾರ್ಯಾಲಯದ, ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ, ಸಹಕಾರಿ ಸಂಘಗಳ ನಿಬಂಧಕರ ಕಛೇರಿಯ ಅಧಿಕಾರಿಗಳು ಸಹಕಾರ ನೀಡಿದ್ದಾರೆ. ಅನೇಕ ಸಹಕಾರಿ ಮುಖಂಡರೂ ಹಾಗೂ ಸಂಯುಕ್ತ ಸಹಕಾರಿಯ ಅಧಿಕಾರಿಗಳು ಸಹಕಾರ ನೀಡಿದ್ದಾರೆ ಎಲ್ಲರಿಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಕೃತಜ್ಞತೆಯನ್ನು ಸಲ್ಲಿಸುತ್ತದೆ.

ಆತ್ಮೀಯ ಸಹಕಾರಿ ಬಂಧುಗಳಿಗೆ ನಾಡಹಬ್ಬ ದಸರಾ ವಿಜಯದಶಮಿಯ ಹಾಗೂ ವಾಲ್ಮಿಕಿ ಜಯಂತಿಯ ಮತ್ತು ಈದ್–ಮಿಲಾದ್ ಹಬ್ಬಗಳ ಶುಭಾಶಯಗಳು. ಶಕ್ತಿದೇವತೆ ಚಾಮುಂಡಿದೇವಿ ನಮ್ಮೆಲ್ಲರ ವೈಯಕ್ತಿಕ ಹಾಗು ಕೌಟುಂಬಿಕ ಜೀವನದಲ್ಲಿ ಹಾಗೂ ಸಹಕಾರಿ ಕ್ಷೇತ್ರದಲ್ಲಿ ಸುಖ ಶಾಂತಿ ನೆಮ್ಮದಿಯನ್ನು ದಯಪಾಲಿಸಲಿ. ನಮ್ಮ ನಿಮ್ಮೆಲ್ಲರ ಇಷ್ಟಾರ್ಥಗಳನ್ನು ನೆರವೇರಿಸಲಿ ಎಂದು ಪ್ರಾರ್ಥಿಸುತ್ತೇನೆ.

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾನ ಭವನ", ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು–560010.
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

## ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ........................................ 2
ಸಂಪಾದಕೀಯ........................................ 3
ಜ್ಞಾನ ಜ್ಯೋತಿ........................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................ 05–19
ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ 2021 .................... 20–25
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... ........................................ 33–40
**ಲೇಖನಗಳು :**
Loan / Credit Appraisal ....... 41–44
ಮೈಸೂರು ದಸರಾ ಎಷ್ಟೊಂದು ಸುಂದರ.. 45
ರಾಜಕೀಯ ಮತ್ತು ಆರ್ಥಿಕ ಸ್ವಾತಂತ್ರ್ಯ ಎರಡಕ್ಕೂ ಬುನಾದಿ ಸಹಕಾರ ಚಳುವಳಿ . 46

# ಸಂಪಾದಕೀಯ

## ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿಗಳ ಬಗ್ಗೆ ಸಹಕಾರಿಗಳಿಗೆ ಮಾಹಿತಿ ನೀಡುವ ಕಾರ್ಯಕ್ಕೆ ಆದ್ಯತೆ ಇರಲಿ.

ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಗೆ ಇದೇ ದಿನಾಂಕ 20.09.2021 ರಂದು ವಿಧಾನ ಸಭೆಯಲ್ಲಿ ಹಾಗೂ ದಿನಾಂಕ 22.09.2021 ರಂದು ವಿಧಾನ ಪರಿಷತನಲ್ಲಿ ತಿದ್ದುಪಡಿ ಅಂಗೀಕಾರವಾಗಿದೆ. ಇನ್ನು ಕೆಲವೇ ದಿನಗಳಲ್ಲಿ ಸರಕಾರದ ಅಧಿಕೃತ ಗೆಝೆಟ್‌ನಲ್ಲಿ ಪ್ರಕಟಣೆಯಾಗುತ್ತದೆ. ಅಧಿಕೃತ ಪ್ರಕಟಣೆಯನ್ನು ಸಂಯುಕ್ತ ಸಹಕಾರಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು ಮತ್ತು ಸ್ವಾಭಿಮಾನಿ ಸಹಕಾರಿ ಪತ್ರಿಕೆಯ ಡಿಜಿಟಲ್ ಪ್ರತಿಯಲ್ಲಿ ಪ್ರಕಟಿಸಲಾಗುವುದು. ಈ ಬಗ್ಗೆ ರಾಜ್ಯ ಸರಕಾರದ ಮುಖ್ಯ ಮಂತ್ರಿಯವರು, ಕಾನೂನು ಸಚಿವರು, ಸಹಕಾರ ಸಚಿವರು, ಸಹಕಾರಿ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು, ಸಹಕಾರ ಸಂಘಗಳ ನಿಬಂಧಕರು ಎಲ್ಲರಿಗೂ ಸೌಹಾರ್ದ ಸಹಕಾರಿ ಕ್ಷೇತ್ರ ಕೃತಜ್ಞತೆಯನ್ನು ಸಲ್ಲಿಸುತ್ತದೆ.

ಈ ತಿದ್ದುಪಡಿಯಲ್ಲಿ ಬಹುಮುಖ್ಯವಾಗಿ ರಾಜ್ಯದ ಸೌಹಾರ್ದ ಸಹಕಾರಿಗಳು ಸಹಕಾರಿ ಸಂಘಗಳೇ ಅಲ್ಲ ಎಂಬ ಆದಾಯ ತೆರಿಗೆ ಇಲಾಖೆಯ ನಿಲುವಿನಿಂದಾಗಿ ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಪಾವತಿಸುವಂತೆ ಆದಾಯ ತೆರಿಗೆ ಇಲಾಖೆಯಿಂದ ನಿರಂತರ ನೋಟೀಸ್/ಆದೇಶಗಳಿಗೆ ಪರಿಹಾರ ಕಂಡುಕೊಳ್ಳುವ ಪ್ರಕರಣದ ಕಿರುಕುಳಗಳಿಗೆ ಪ್ರಕರಣ 2ಇ ತಿದ್ದುಪಡಿ ಮಾಡಿ ಸೌಹಾರ್ದ ಸಹಕಾರಿ ಎಂಬುವುದರ ಬದಲಾಗಿ ಸೌಹಾರ್ದ ಸಹಕಾರಿ ಸಂಘವೆಂದು ತಿದ್ದುಪಡಿ ಮಾಡಲಾಗಿದೆ. ಇದರ ಜೊತೆಗೆ ಪ್ರಕರಣ 20ಬಿ – ಸದಸ್ಯರ ಮತದಾನದ ಹಕ್ಕಿಗೆ ಸಂಬಂಧಿಸಿದ, 41ನೇ ಪ್ರಕರಣದ 1ಎ ವಿಷಯವನ್ನು ಹೊಸದಾಗಿ ಸೇರಿಸಿ ಸಹಕಾರಿಯ ನೌಕರರು ತಮ್ಮ ಸಹಕಾರಿಯಲ್ಲಿ ತಾವು ಹೊಂದಿರುವ ವೃಂದದಿಂದ ಮುಂಬಡ್ತಿ ಪಡೆಯುವುದಕ್ಕಾಗಿ ಸೌಹಾರ್ದ ಸಹಕಾರಿ ಕಾಯ್ದೆ ಪ್ರಕರಣ 53 ಉಪಪ್ರಕರಣ (7) ರಡಿಯಲ್ಲಿ ಸರಕಾರವು ರಚಿಸುವ ನಿಯಮಗಳಿಗೆ ಅನುಸಾರವಾಗಿ ಸಂಯುಕ್ತ ಸಹಕಾರಿಯು ನಿರ್ವಹಿಸುವ ಕೋರ್ಸಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸದ ಹೊರತು ಮುಂಬಡ್ತಿಗೆ ಅವಕಾಶವಿರುವುದಿಲ್ಲ.

ಇದರ ಜೊತೆಗೆ ಸದಸ್ಯನು ಹೊಂದಿರಬೇಕಾದ ಷೇರುಗಳ ಬಗ್ಗೆ, ಸಹಕಾರಿಯ ನಿಧಿಗಳ ಸಂಗ್ರಹಣೆಯ ಬಗ್ಗೆ ಪದಾಧಿಕಾರಿಗಳ ಚುನಾವಣೆಯ ಬಗ್ಗೆ, ನಿರ್ದೇಶಕರ ಅನರ್ಹತೆಗಳ ಬಗ್ಗೆ, ವಿಚಾರಣೆಗೆ ಸಂಬಂಧಿಸಿದ, ಸಮಾಪನೆಗೆ ಹಾಗೂ ಸಂಯುಕ್ತ ಸಹಕಾರಿಯ ರಚನೆಗೆ ಸಂಬಂಧಿಸಿದ ಹಾಗೂ ಸಹಕಾರಿ ಚುನಾವಣಾ ಆಯೋಗವನ್ನು ಇನ್ನು ಸಹಕಾರಿ ಚುನಾವಣಾ ಪ್ರಾಧಿಕಾರ ಎಂಬುದಾಗಿ ಹೀಗೆ ಕೆಲವು ಪ್ರಕರಣಗಳಲ್ಲಿ ಹಾಲಿ ಇರುವ ಆಡಳಿತಾತ್ಮಕ ತೊಂದರೆಗಳು ನಿವಾರಣೆಯಾಗಿ ಸ್ಪಷ್ಟತೆಯನ್ನು ಈ ತಿದ್ದುಪಡಿಗಳು ಹೊಂದಿರುತ್ತವೆ. ಆದ್ದರಿಂದ ಇವುಗಳ ಬಗ್ಗೆ ರಾಜ್ಯದ ಸೌಹಾರ್ದ ಸಹಕಾರಿಗಳು ಪೂರ್ಣ ಮಾಹಿತಿಯನ್ನು ಪಡೆದು ಕಾರ್ಯನಿರ್ವಹಿಸುವುದು ಅವಶ್ಯಕ. ಸಂಯುಕ್ತ ಸಹಕಾರಿಯ ವತಿಯಿಂದಲೂ ಮುಂಬರುವ ಎಲ್ಲ ತರಬೇತಿ ಕಾರ್ಯಕ್ರಮಗಳಲ್ಲಿ ಈ ತಿದ್ದುಪಡಿಗಳ ಮಾಹಿತಿಯನ್ನು ಒದಗಿಸಲು ಕ್ರಮವಿಡಲಾಗುವುದು. ಸೌಹಾರ್ದ ಸಹಕಾರಿಗಳಿಗೆ ಈ ಬಗ್ಗೆ ಹೆಚ್ಚಿನ ವಿವರಗಳು ಅಗತ್ಯ ಎನಿಸಿದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಲು ತಿಳಿಸಿದೆ.

## “ನಿರಂತರ ಸೃಷ್ಟಿಕಾರ್ಯದಲ್ಲಿ ನಿರತವಾದ ಪರಬ್ರಹ್ಮ”

ಶ್ರೇಣಿ 66



### ಜ್ಞಾನ ಜ್ಯೋತಿ

ಎಂ. ಬಸಪ್ಪ, ಸಹಕಾರ ಸಂಘಗಳ
ನಿವೃತ್ತ ಉಪನಿಬಂಧಕರು, ಬೆಂಗಳೂರು.

ಕನ್ನಡಿಯ ಮುಂದೆ ನಿಂತ ಸುಂದರ ಯುವತಿ ಹಾಗೂ ಧ್ವನಿವರ್ಧಕದ ಮುಂದೆ ನಿಂತ ವಾಗ್ಮಿಗೆ ಹೇಗೆ ಸಮಯದ ಅರಿವಿಲ್ಲದೆ ತಮ್ಮ ಸೌಂದರ್ಯ ವರ್ಧನೆಯಲ್ಲಿ ಹಾಗೂ ಪ್ರತಿಭಾ ಪ್ರದರ್ಶನಗಳಲ್ಲಿ ಏಕರಸ ಸ್ಥಿತಿಯಲ್ಲಿ ತನ್ಮಯರಾಗಿರುತ್ತಾರೋ ಹಾಗೆಯೇ ವಿಶ್ವದ ಉತ್ಪತ್ತಿಕಾರ ಭಗವಂತ ಸಹ ತನ್ನ ಸೃಷ್ಟಲೀಲಾ ವಿನೋದಗಳಲ್ಲಿ ತೊಡಗಿಸಿಕೊಂಡು ತನ್ನ ಮನಸ್ಸನ್ನು ಕೇಂದ್ರೀಕರಿಸಿಕೊಂಡು ಸೃಷ್ಟಿಸ್ಥಿತಿಲಯ ಕಾರ್ಯಗಳು ನಿರ್ವಹಣೆಯಲ್ಲಿ ತೊಡಗಿಸಿಕೊಂಡ ಭಗವಂತನಿಗೆ ಆದಿ ಮಧ್ಯ ಅಂತ್ಯಗಳ ಪರಿವೆಯೇ ಇಲ್ಲದಂತಾಗಿ ಈ ಜಗತ್ತು ಅನಂತವಾಗಿದೆಯೆಂದು ಮತ್ತು ನಿರಂತರ ಮುಂದುವರಿಕೆಗೊಳಪಟ್ಟಿದೆಯೆಂಬ ಅಂಶವನ್ನು ನಿರೂಪಿಸುತ್ತದೆ. ಈ ಕಗ್ಗ ಪದ್ಯದಲಹರಿಯನ್ನು ಗಮನಿಸಿ

ತರುಣೆ ತನ್ನೊಡವೆಗಳ ತೆಳೆಯತ್ತ ತೆಗೆಯುತ್ತೆ
ಪರಕಿಸುತೆ ಮುಕುರದಲಿ ಸೊಗಸುಗಳ ಪರಿಯ
ಮರೆತೆಲ್ಲವನು ವಿಲಸಿಪಂತೆ ತಾಂ ವಿಶ್ವದಲಿ
ಮರೆಯುವನು ಪರಬೊಮ್ಮ ||ಮಂಕುತಿಮ್ಮ||

ಸಿರಿವಂತ ಮನೆತನದ ಪ್ರಾಯದ ಸುಂದರವಾದ ಯುವತಿಗೆ ತನ್ನ ದೇಹಸೌಷ್ಟವದ ಬಗ್ಗೆ ಅತೀವ ಹೆಮ್ಮೆಯಿರುತ್ತದೆಯೆಂಬ ಸ್ವಾಭಾವಿಕ ಅಂಶವನ್ನು ಇಲ್ಲಿ ಉದಾಹರಣೆಯಾಗಿ ತಂದು ಅವಳು ತನ್ನ ಒಡವೆ ವಸ್ತುಗಳನ್ನು ಹಾಕಿಕೊಳ್ಳುತ್ತಾ ಮತ್ತೆ ತೆಗೆಯುತ್ತಾ ಹಾಗೂ ಈ ಪ್ರಕ್ರಿಯೆಯನ್ನು ಎಷ್ಟು ಸಾರಿ ಪುನರಾವರ್ತಿಸಿದರೂ ಅವಳಿಗೆ ತೃಪ್ತಿಬಾರದೆಂಬ ಅಂಶವನ್ನು ಈ ಪದ್ಯದಲ್ಲಿ ಕಣ್ಮುಂದೆ ನಡೆಯುತ್ತಿರುವಂತೆ ನೈಜವಾಗಿ ಚಿತ್ರೀಕರಿಸಲಾಗಿದೆ.

ಆಕಾಶ. ಭೂಮಿ, ಬೆಂಕಿ, ನೀರು ಹಾಗೂ ಗಾಳಿಗಳೆಂಬ ಪಂಚಭೂತಗಳನ್ನು ಸೃಷ್ಟಿಸಿದ ಭಗವಂತ ಸಮುದ್ರ, ಪರ್ವತಗಳು, ಸರೋವರ, ಕೊಳಗಳು ಹಾಗೂ ಆಕರ್ಷಣೆಯ ದೃಷ್ಟಜಾಲಗಳನ್ನು ಸೃಷ್ಟಿಸಿ, ಈ ಬಹುಸುಂದರ ವಿಶ್ವದ ನಿರ್ಮಾತೃತ್ವದ ಕಾರ್ಯದಲ್ಲಿ ಸಂಪೂರ್ಣವಾಗಿ ಲೀನವಾಗಿ ತನ್ನನ್ನೇ ತಾನು ಮರೆತಿದ್ದಾನೆಂದು ಆಧ್ಯಾತ್ಮ ಕವಿ ಡಿ.ವಿ.ಜಿಯವರು ಉದಾಹರಿಸಿರುತ್ತಾರೆ. ಸೃಷ್ಟಿಕರ್ತನ ಅಸದಳ ಹಾಗೂ ಅವರ್ಣನೀಯ ಕಾರ್ಯವನ್ನು ವೀಕ್ಷಿಸುತ್ತಾ ಭಗವಂತನ ತನ್ಮಯತೆಯನ್ನು ಅರಿಯುತ್ತಾ ಆ ಮಹಾದೇವ ಭಗವಂತನ ಬೃಹತ್ತತೆಯನ್ನು ಮನಸ್ಸಿನಲ್ಲಿ ಚಿತ್ರಿಸಿಕೊಳ್ಳುತ್ತಾ ಸದಾ ಅವನ ಮಕ್ಕಳಾಗಿರೋಣವೆಂಬುದೇ ಈ ಪದ್ಯದ ಸಾರಾಂಶವಾಗಿದೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 18027 ಆಗಿರುತ್ತದೆ. ಇವುಗಳ ಪೈಕಿ 9958 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 8069

**ಸೆಪ್ಟೆಂಬರ್ ತಿಂಗಳ ಪ್ರಕರಣಗಳು :** ಒಟ್ಟು ದಾವಾಪ್ರಕರಣ 525, ಒಟ್ಟು ಇತ್ಯರ್ಥಗೊಂಡ ಪ್ರಕರಣಗಳು 162.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 33163 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 353ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 170 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 2,811 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 1023 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 104 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 477 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 441 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸೆಪ್ಟೆಂಬರ್ ತಿಂಗಳಿನಲ್ಲಿ 106 ಪ್ರಕರಣ ದಾಖಲಾಗಿರುತ್ತವೆ.



## ಕೇಂದ್ರ ಸಹಕಾರ ಸಚಿವಾಲಯದ ಕಾರ್ಯದರ್ಶಿಯಾಗಿ ದೇವೇಂದ್ರ ಕುಮಾರ್ ಸಿಂಗ್ ಅಧಿಕಾರ ಸ್ವೀಕಾರ

**ನವದೆಹಲಿ :** ಕೇಂದ್ರ ಸಹಕಾರ ಸಚಿವಾಲಯದ ಕಾರ್ಯದರ್ಶಿಯಾಗಿ ಕೇರಳ ಕೇಡರ್‌ನ 1989 ಬ್ಯಾಚ್‌ನ ಐಎಎಸ್ ಅಧಿಕಾರಿ ದೇವೇಂದ್ರ ಕುಮಾರ್ ಸಿಂಗ್ ಇವರು ಅಧಿಕಾರ ವಹಿಸಿಕೊಂಡಿದ್ದಾರೆ.

## “ಸಹಕಾರದಿಂದ ಸಮೃದ್ಧಿ”ಯ ಮುನ್ನುಡಿ ಬರೆದ ಬೃಹತ ಸಮಾವೇಶ ದೇಶದ ಪ್ರಥಮ ಸಹಕಾರ ಸಚಿವ ಶ್ರೀ ಅಮಿತ ಶಾ ಸಹಕಾರಿಗಳನ್ನುದ್ದೇಶಿಸಿ ಭಾಷಣ ಪ್ರಧಾನ ಮಂತ್ರಿ ಮೋದಿ ನೇತೃತ್ವದ ಸರಕಾರ ಸಮಗ್ರ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಸಂಕಲ್ಪ. ಹಲವು ಯೋಜನೆಗಳ ಕ್ಷಿಪ್ರ ಅನುಷ್ಠಾನದ ಘೋಷಣೆ.

### 2000 ಪ್ರತಿನಿಧಿಗಳು ಪ್ರತ್ಯಕ್ಷ ಹಾಜರಿ ಹಾಗೂ ಆನ್‌ಲೈನ್ ಸೇರಿ ಒಟ್ಟಾರೆ 5.42 ಕೋಟಿ ಸಹಕಾರಿಗಳು ಸಮಾವೇಶದಲ್ಲಿ ಭಾಗಿ.




**ನವದೆಹಲಿ :** ಕೇಂದ್ರದಲ್ಲಿ “ಸಹಕಾರ ದಿಂದ ಸಮೃದ್ಧಿ” ಎಂಬ ಘೋಷಣೆಯೊಂದಿಗೆ ನೂತನ ಸಹಕಾರ ಸಚಿವಾಲಯ ಪ್ರಾರಂಭಿಸಿದ ನಂತರ ಪ್ರಪ್ರಥಮವಾಗಿ ಇಫ್ಕೋ ಹಾಗೂ ಎನ್.ಸಿ.ಯು.ಐ ಜಂಟಿ ಆಶ್ರಯದಲ್ಲಿ ಆಯೋಜಿಸಿದ ಬೃಹತ ಸಮಾವೇಶದ ಮುಖ್ಯ ಅತಿಥಿಯಾಗಿ ಮಾತನಾಡಿದ ಕೇಂದ್ರ ಸಹಕಾರ ಸಚಿವ ಶ್ರೀ ಅಮಿತ ಶಾರವರು 75ನೇ ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ಸಹಕಾರ ಕ್ಷೇತ್ರದಿಂದ ಸಮೃದ್ಧಿ ಎಂಬ ಘೋಷಣೆಯೊಂದಿಗೆ ನೂತನ ಸಹಕಾರ ಸಚಿವಾಲಯವನ್ನು ಪ್ರಾರಂಭಿಸಿರುವುದಕ್ಕೆ ಪ್ರಧಾನ ಮಂತ್ರಿ ನರೇಂದ್ರಮೋದಿಯವರಿಗೆ ಎಲ್ಲ ಸಹಕಾರಿಗಳು ಎದ್ದುನಿಂತು ಬೃಹತ ಚಪ್ಪಾಳೆಯೊಂದಿಗೆ ಕೃತಜ್ಞತೆಗಳನ್ನು ಸಲ್ಲಿಸಬೇಕು ಎಂಬ ವಿನಂತಿಗೆ ಎಲ್ಲ ಸಹಕಾರಿಗಳು ಎದ್ದುನಿಂತು ಚಪ್ಪಾಳೆಯೊಂದಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು. ಶ್ರೀ ಪಂಡಿತ ದೀನದಯಾಳ ಉಪಾಧ್ಯಾಯರವರ ಜನ್ಮದಿನದಂದು ಆಯೋಜಿಸಿರುವ ಈ ಸಮಾವೇಶ ಅತ್ಯಂತ ಸಮಯೋಚಿತವಾಗಿದೆ. ಶ್ರೀ ಪಂಡಿತ ದೀನ ದಯಾಳ ಉಪಾಧ್ಯಾಯರವರು ಅಂತ್ಯೋದಯಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟವರು ಎಂದರು. ನಾನು ಕಳೆದ 25 ವರ್ಷಗಳಿಂದ ಈ ಕ್ಷೇತ್ರದಲ್ಲಿ ಕೆಳಮಟ್ಟದಿಂದ ಹಿಡಿದು ರಾಜ್ಯಮಟ್ಟದವರೆಗೆ ಕಾರ್ಯನಿರ್ವಹಿಸಿರುವ ಅನುಭವವಿರುವುದನ್ನು ಗುರುತಿಸಿ ಪ್ರಧಾನ ಮಂತ್ರಿ ಶ್ರೀ ನರೇಂದ್ರಮೋದಿಯವರು ನನಗೆ ಈ ಖಾತೆಯನ್ನು ವಹಿಸಿಕೊಟ್ಟಿರುವುದು ನನಗೆ ಹೆಚ್ಚು ಸಂತೋಷವನ್ನು ನೀಡಿದೆ ಎಂದರು.

ನಮ್ಮ ದೇಶದ ಜನರಲ್ಲಿ ಸಹಕಾರ ಮನೋಭಾವ ಅವರ ಜನ್ಮದಿಂದಲೆ ಬರುತ್ತದೆ. ಅವರ ರಕ್ತದಲ್ಲಿಯೇ ಸಹಕಾರದ ಸಂಸ್ಕೃತಿ ಇದೆ. ನಮಗೆ ಸಂಖ್ಯಾಬಲ ಹೆಚ್ಚಿದೆ. ಆದರೆ ಆರ್ಥಿಕ ಹಾಗೂ ಕೆಲವು ದೌರ್ಬಲ್ಯಗಳಿವೆ. ಹೀಗಾಗಿ ನಮ್ಮಲ್ಲಿ ಶಕ್ತಿ ಕಡಿಮೆ ಇದೆ ಎನಿಸುತ್ತದೆ. ನಾವೆಲ್ಲ ಒಟ್ಟಾರೆ ಸೇರಿ ಕಾರ್ಯನಿರ್ವಹಿಸಿದರೆ ಎಲ್ಲ ಸಮಸ್ಯೆಗಳನ್ನು ಪರಿಹರಿಸಬಹುದಾಗಿದೆ ಎಂದು ತಿಳಿಸಿದರು. ದೇಶದಲ್ಲಿ ಸಹಕಾರ ಕ್ಷೇತ್ರವನ್ನು ಇಷ್ಟು ಬೃಹದಾಕಾರವಾಗಿ ಬೆಳಸಲು ಕಾರಣರಾದ ಮಾಧವರಾದ ಗೋಡಬೋಲೆ, ವೈ.ಬಿ.ಚವಾಣ, ಲಕ್ಷ್ಮಣರಾವ ಇನಾಮದಾರ, ವೈಕುಂಠಮೆಹತಾ, ತ್ರಿಭುವನ ಭಾಯಿ ಪಟೇಲ್ ಮುಂತಾದವರನ್ನು ಸ್ಮರಿಸಿದರು. ಹಿಂದಿನವರು ನಮಗೆ ಒಂದು ಉತ್ತಮ ವೇದಿಕೆಯನ್ನು ಬಿಟ್ಟು ಹೋಗಿದ್ದಾರೆ. ನಾವು ಒಂದು ಭವ್ಯವಾದ ಕಟ್ಟಡವನ್ನು ಕಟ್ಟೋಣ ಇದಕ್ಕೆ ಸಂಕಲ್ಪ ಮಾಡೋಣ ಎಂದರು. ನಾವು ಆತ್ಮ ನಿರ್ಭರರಾಗಲು ಸಾಧ್ಯವಾಗುತ್ತದೆ ಎಂದು ತಿಳಿಸಿ ದೇಶದ ಅಮೂಲ್ಯ ಸಹಕಾರ ಸಂಸ್ಥೆ, ಲಿಜ್ಜತ ಪಾಪಡ ಸಹಕಾರಿ ಸಂಸ್ಥೆ, ಇಫ್ಕೋ ಸಹಕಾರ ಸಂಸ್ಥೆ, ಕ್ರಿಭ್ಕೋ ಸಹಕಾರ ಸಂಸ್ಥೆ, ನೆಫೆಡ್, ಹೀಗೆ ಹಲವಾರು ಸಂಸ್ಥೆಗಳ ಹೆಸರು ಹಾಗೂ ಸಾಧನೆಗಳ ವಿವರ ನೀಡಿದರು. ಇಫ್ಕೋ ರೈತರ ಜೀವನ ಶೈಲಿಯಲ್ಲಿ ಮಹತ್ವದ ಬದಲಾವಣೆ ತಂದಿದೆ. ಅಮೂಲ್ ಪ್ರಸ್ತುತ 36 ಲಕ್ಷ ರೈತರಿಗೆ ನೆರವಾಗುತ್ತಿದೆ. ಲಿಜ್ಜತ ಪಾಪಡದಲ್ಲಿ ಪ್ರಸ್ತುತ 45000 ಮಹಿಳೆಯರು ಕಾರ್ಯ ನಿರ್ವಹಿಸುತ್ತಿದ್ದಾರೆ. ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಕಾರಣವಾಗಿದೆ. ಇದು ನಮ್ಮ ಸಹಕಾರ ಕ್ಷೇತ್ರದ ಸಾಧನೆ ಎಂದು ತಿಳಿಸುತ್ತ ಸಹಕಾರ ಕ್ಷೇತ್ರ ಸಾಧಿಸಬೇಕಾದುದು ಸಾಕಷ್ಟಿದೆ. ಸಹಕಾರ ಕ್ಷೇತ್ರಕ್ಕೆ ಬಹಳ ದೊಡ್ಡ ಜವಾಬ್ದಾರಿ ಇದೆ. ಈ ಜವಾಬ್ದಾರಿಗಳನ್ನು ನಿರ್ವಹಿಸಿ ಶ್ರೀ ನರೇಂದ್ರಮೋದಿಯವರ ಆತ್ಮ ನಿರ್ಭರ ಭಾರತ ಕನಸು ಸಾಕಾರವಾಗಲು ಸಹಕಾರ ಕ್ಷೇತ್ರ ಮಹತ್ವದ ಕೊಡುಗೆಯನ್ನು ನೀಡಬೇಕಿದೆ. ಇದಕ್ಕಾಗಿ ನಾವೆಲ್ಲ ಸಹಕಾರಿಗಳು ಒಕ್ಕಟ್ಟಾಗಿ ಹಿಂದಿನಕ್ಕಿಂತಲೂ ಹೆಚ್ಚು ಸಾಮರ್ಥ್ಯವುಳ್ಳವರಾಗಿ ಸಂಕಲ್ಪ ಹಾಗೂ ಪರಿಶ್ರಮಗಳಿಂದ ಕಾರ್ಯನಿರ್ವಹಿಸೂಣ ಎಂದು ತಿಳಿಸಿದರು.

ಕೇಂದ್ರದಲ್ಲಿ ನೂತನ ಸಹಕಾರ ಸಚಿವಾಲಯ ಪ್ರಾರಂಭಿಸಿರುವುದರಿಂದ ಕೆಲವರು ಇದು ರಾಜ್ಯಗಳ ವಿಷಯ ಇದು ಅಗತ್ಯವಿರಲಿಲ್ಲ ಎಂಬ ಭಾವನೆ ಇರಬಹುದು. ಆದರೆ ಕೇಂದ್ರದ ನೂತನ ಸಹಕಾರ ಸಚಿವಾಲಯ ಎಲ್ಲ ರಾಜ್ಯಗಳ ಎಲ್ಲ ಸಹಕಾರ ಕಾಯ್ದೆಗಳೊಂದಿಗೆ ಸ್ಪಂದಿಸುವ ಕೆಲಸ ಮಾಡುತ್ತದೆ. ಎಲ್ಲರ ಸಹಕಾರದಿಂದಲೇ ಎಲ್ಲರ ಜೊತೆಗೂಡಿ ಕೆಲಸ ನಿರ್ವಹಿಸುತ್ತದೆ ಎಂದರು.

ದೇಶದಲ್ಲಿ ಸಹಕಾರ ಕ್ಷೇತ್ರದ ಸಾಧನೆಗಳ ಹಾಗೂ ಬೆಳವಣಿಗೆಗಳ ಬಗ್ಗೆ ಮಾತನಾಡಿದ ಶ್ರೀಯುತರು ದೇಶದಲ್ಲಿ 8.54 ಲಕ್ಷ ವಿವಿಧ ರೀತಿಯ ಸಹಕಾರಿ ಸಂಸ್ಥೆಗಳಿವೆ. 31 ಕೋಟಿ ಜನ ಸದಸ್ಯರಿದ್ದಾರೆ. ಸಹಕಾರ ಕ್ಷೇತ್ರದ ಮೂಲಕ ಪ್ರತಿಶತ ರೈತರಿಗೆ 29% ಸಾಲ ನೀಡಿಕೆಯಾಗುತ್ತದೆ. 35% ರಸಗೊಬ್ಬರ ಉತ್ಪಾದನೆಯಾಗುತ್ತಿದೆ. 31% ಸಕ್ಕರೆ ಈ ಕ್ಷೇತ್ರದಿಂದ ಉತ್ಪಾದನೆಯಾಗುತ್ತಿದೆ

93 ಸಾವಿರ ಕೃಷಿ ಸಹಕಾರ ಸಂಘಗಳಿವೆ. ಹೀಗೆ ದೇಶದ ಅರ್ಥವ್ಯವಸ್ಥೆಯಲ್ಲಿ ಉತ್ತಮ ಪಾಲನ್ನು ಈ ಸಹಕಾರ ಕ್ಷೇತ್ರ ನೀಡುತ್ತಿದೆ. 2010 ರಲ್ಲಿ ಕೃಷಿ ಕ್ಷೇತ್ರಕ್ಕೆ ಸರಕಾರ ತನ್ನ ಆಯವ್ಯಯದಲ್ಲಿ ನೀಡಿದ ಮೊತ್ತ 12000 ಕೋಟಿ ರೂಗಳು. ನರೇಂದ್ರಮೋದಿ ಸರಕಾರ ಕೃಷಿ ಕ್ಷೇತ್ರಕ್ಕೆ 1,31,000 ಕೋಟಿ ರೂಗಳ ಅವಕಾಶ ಮಾಡಿದೆ. ದೇಶದಲ್ಲಿ 10,000 ರೈತರ ಉತ್ಪಾದನಾ ಹಾಗೂ ಮಾರಾಟ ಸಂಸ್ಥೆಗಳನ್ನು ಎಫ್.ಪಿ.ಓ (ಫಾರ್ಮರ್ಸ್ ಪ್ರಾಡ್ಯೂಸ್ ಆರ್ಗನೈಸೇಶನ್) ಗಳನ್ನು ಪ್ರಾರಂಭಿಸಲಾಗಿದೆ. ಕೃಷಿ ಸಹಕಾರ ಸಂಘಗಳಿಂದಲೂ ಎಫ್.ಪಿ.ಓ ಗಳನ್ನು ಪ್ರಾರಂಭಿಸುವ ಚಿಂತನೆ ಇದೆ. ಸ್ವಸಹಾಯ ಗುಂಪುಗಳಿಂದಲೂ ಎಫ್.ಪಿ.ಓ ಗಳನ್ನು ಪ್ರಾರಂಭಿಸುವ ಬಗ್ಗೆ ಅವರಿಂದ ಉತ್ಪಾದಿತವಾಗುವ ವಸ್ತುಗಳಿಗೆ ಮಾರುಕಟ್ಟೆ ಒದಗಿಸುವ ಬಗ್ಗೆ ಚಿಂತನೆ ಇದೆ. ಪ್ರತಿ ಎರಡು ಹಳ್ಳಿಗಳಿಗೆ ಒಂದು ಕೃಷಿ ಪತ್ತಿನ ಸಹಕಾರ ಸಂಘವನ್ನು ಪ್ರಾರಂಭಿಸುವ ಬಗ್ಗೆ ಚಿಂತನೆ ನಡೆಯುತ್ತಿದೆ. ಕೃಷಿ ಸಹಕಾರ ಸಂಘಗಳಿಗೆ, ಡಿಸಿಸಿ ಬ್ಯಾಂಕು ಹಾಗೂ ನಬಾರ್ಡಗಳಿಗೆ ಅನ್ವಯಿಸುವ ಕಾಮನ್ ಸಾಫ್ಟವೇರ ಸಿದ್ಧಪಡಿಸಲಾಗುವುದು. ಅರಣ್ಯ ವಸ್ತುಗಳ ಸಂಗ್ರಹ ಹಾಗೂ ಮಾರಾಟದ ಹಾಗೂ ಅಲ್ಲಿನ ಕಾರ್ಮಿಕರಿಗೆ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ಯೋಜನೆಗಳನ್ನು ಜಾರಿ ಮಾಡಲಾಗುವುದು ಮೀನುಗಾರರ ಸಹಕಾರ ಸಂಘಗಳನ್ನು ಬಲಪಡಿಸುವ ಬಗ್ಗೆ ಯೋಜನೆಗಳನ್ನು ಹಾಕಲಾಗುತ್ತಿದೆ. ಸಹಕಾರ ಶಿಕ್ಷಣ ತರಬೇತಿಗಳನ್ನು ಪರಿಣಾಮಕಾರಯಾಗಿ ನಿರ್ವಹಿಸುವ ಬಗ್ಗೆ ಚಿಂತನೆ ನಡೆಸುತ್ತಿದ್ದೇವೆ.

ಸಹಕಾರ ಕ್ಷೇತ್ರದಲ್ಲಿ ಒಂದು ಸಹಕಾರ ವೃತ್ತಿಪರ ವಿಶ್ವವಿದ್ಯಾಲಯವನ್ನು ಪ್ರಾರಂಭಿಸುವ ಕೌಶಲ್ಯಾಭಿವೃದ್ಧಿ ಯೋಜನೆ ಗಳನ್ನು ಜಾರಿಮಾಡಲಾಗುವುದು. ಸಹಕಾರ ಕ್ಷೇತ್ರದಲ್ಲಿ ಪ್ರಾಮಾಣಿಕತೆ, ಪಾರದರ್ಶಕತೆ ಹಾಗೂ ಮುಕ್ತ ವಾತಾವರಣದಲ್ಲಿ ಆಡಳಿತ ಮಂಡಳಿಯ ಚುನಾವಣೆಗಳು ನಡೆಯಬೇಕು.


ಪಟ್ಟಣ ಸಹಕಾರ ಬ್ಯಾಂಕುಗಳ ಹಾಗು ಕ್ರೆಡಿಟ್ ಸಹಕಾರ ಸಂಘಗಳ ಸಮಸ್ಯೆಗಳ ಬಗ್ಗೆ ನನಗೆ ತಿಳಿದಿದೆ. ವಿಶೇಷವಾಗಿ ತೆರಿಗೆ ವಿಷಯಗಳು. ಯಾವುದೇ ಸಮಸ್ಯೆಗಳಿದ್ದರೂ ನನ್ನ ಗಮನಕ್ಕೆ ನೇರವಾಗಿ ಪತ್ರ ಬರೆದು ತಿಳಿಸಿ. ನಿಮ್ಮ ಪತ್ರಗಳಿಗೆ ಸ್ಪಂದಿಸುತ್ತೇನೆ. ಈ ಕ್ಷೇತ್ರಕ್ಕೆ ಅನ್ಯಾಯವಾಗದಂತೆ ಈ ನೂತನ ಸಹಕಾರ ಸಚಿವಾಲಯ ಹಾಗೂ ಕೇಂದ್ರದ ಮೋದಿಯವರ ಸರಕಾರ ಸಂಕಲ್ಪ ಮಾಡಿದೆ. ಸಮಾಜದ ಕಟ್ಟ ಕಡೆಯ ವ್ಯಕ್ತಿಯ ಅಭಿವೃದ್ಧಿಯೇ ಸಹಕಾರ ಕ್ಷೇತ್ರದ ಗುರಿಯಾಗಿದೆ. ಸರಕಾರದ ಅರ್ಥ ವ್ಯವಸ್ಥೆಯಲ್ಲಿ ಸಹಕಾರ ಕ್ಷೇತ್ರದ ಮಹತ್ವದ ಪಾತ್ರ ಇರಬೇಕೆಂಬುದು ಮೋದಿ ಸರಕಾರದ ಮಹತ್ವಾಂಕಾಂಕ್ಷೆಯಾಗಿದೆ. ನಾವೆಲ್ಲರೂ ಈ ಕಾರ್ಯದಲ್ಲಿ ಹೆಚ್ಚಿನ ಆಸಕ್ತಿಯಿಂದ ಭಾಗಿಯಾಗೋಣ

ಕಾರ್ಯಕ್ರಮದಲ್ಲಿ ಕೇಂದ್ರ ಸರಕಾರದ ಸಹಕಾರ ಇಲಾಖೆಯ ರಾಜ್ಯ ಸಚಿವ ಶ್ರೀ ಬಿ.ಎಲ್.ವರ್ಮರವರು, ಅಂತರ ರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯ ಅಧ್ಯಕ್ಷರು, ರಾಷ್ಟ್ರೀಯ ಸಹಕಾರ ಯೂನಿಯನ್ ಅಧ್ಯಕ್ಷರು, ಕರ್ನಾಟಕ ರಾಜ್ಯದ ಸಹಕಾರ ಸಚಿವ ಶ್ರೀ ಎಸ್.ಟಿ.ಸೋಮಶೇಖರರವರು, ಸೇರಿದಂತೆ ಅನೇಕ ರಾಜ್ಯಗಳ ಸಹಕಾರ ಸಚಿವರು, ಇಫ್ಕೋ ಸಂಸ್ಥೆಯ ಅಧ್ಯಕ್ಷರು ಅನೇಕ ರಾಷ್ಟ್ರ ಮಟ್ಟದ ಹಾಗು ರಾಜ್ಯ ಮಟ್ಟದ ಸಹಕಾರ ಸಂಸ್ಥೆಗಳ ಅಧ್ಯಕ್ಷರು, ರಾಷ್ಟ್ರೀಯ ಸಹಕಾರ ಭಾರತಿ ಅಧ್ಯಕ್ಷರಾದ ಶ್ರೀ ರಮೇಶ ವೈದ್ಯರವರು, ಬೇರೆ ದೇಶಗಳ ಸಹಕಾರಿ ಗಣ್ಯರು ಭಾಗವಹಿಸಿದ ಈ ಸಮಾವೇಶದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು, ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ರವರು ನಿರ್ದೇಶಕರುಗಳಾದ ಶ್ರೀ ಗುರುನಾಥ ಜಾಂತಿಕರ, ಶ್ರೀ ಹೆಚ್.ವಿ. ರಾಜೀವ, ಶ್ರೀ ಸಂಜೀವ ಮಹಾಜನ, ಶ್ರೀ ಶ್ರೀಧರ, ಶ್ರೀ ನಂಜನಗೌಡ, ಶ್ರೀ ಪ್ರಸನ್ನಕುಮಾರ ಶ್ರೀ ಬಿ.ಎಸ್.ಗುಂಡೂರಾವ, ಶ್ರೀ ತಿಮ್ಮಯ್ಯ ಶೆಟ್ಟಿ ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ರವರುಗಳು ಭಾಗವಹಿಸಿದ್ದರು.



ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಶ್ರೀ ಸಂತೋಷ ರವರಿಗೆ ಕರ್ನಾಟಕದಲ್ಲಿ ಅಪೆಕ್ಸ್ ಬ್ಯಾಂಕ್ ಮಾದರಿ ರಾಜ್ಯ ಸೌಹಾರ್ದ ಸಹಕಾರಿಗಳ ಬ್ಯಾಂಕ ಸ್ಥಾಪನೆಗೆ ಸಹಕಾರ ಕೋರಿ ಮನವಿ

## ರಾಷ್ಟ್ರೀಯ ಸಹಕಾರ ಸಮಾವೇಶದ ನಂತರ ಗಣ್ಯರ ಅಭಿಪ್ರಾಯಗಳು



ರಾಷ್ಟ್ರೀಯ ಸಹಕಾರ ಯೂನಿಯನ್ ಮಾಜಿ ಅಧ್ಯಕ್ಷ ಹಾಗೂ ಐ.ಸಿ.ಎ ಏಶಿಯಾ ಫೆಸಿಫಿಕ್ ನಿರ್ದೇಶಕ ಶ್ರೀ **ಚಂದ್ರಪಾಲಸಿಂಗರವರು** ಕೇಂದ್ರ ಸಚಿವ ಶ್ರೀ ಅಮಿತ ಶಾ ರವರಿಗೆ ಸಹಕಾರ ಸಂಘಗಳ ಆದಾಯ ತೆರಿಗೆ ತೊಂದರೆಗಳ ನಿವಾರಣೆಗಾಗಿ ಸಲ್ಲಿಸಿದ ಮನವಿಗೆ ಶ್ರೀ ಅಮಿತ ಶಾರವರು ಸಕಾರಾತ್ಮಕವಾಗಿ ಸ್ಪಂದಿಸಿದರು.



**ರಾಷ್ಟ್ರೀಯ ಸಹಕಾರ ಯೂನಿಯನ್ ಅಧ್ಯಕ್ಷ ಶ್ರೀ ದಿಲೀಪ ಸಂಘಾನಿ :**

ಸಹಕಾರ ಸಚಿವ ಶ್ರೀ ಅಮಿತ ಶಾ ರವರು ಸಹಕಾರ ಕ್ಷೇತ್ರವನ್ನು ಮುಖ್ಯವಾಹಿನಿಗೆ ತರಲು ಬದ್ಧರಾಗಿದ್ದಾರೆ.



**ನ್ಯಾಫ್ಕಾಬ್ ಅಧ್ಯಕ್ಷ ಶ್ರೀ ಜ್ಯೋತೀಂದ್ರಭಾಯಿ ಮೆಹತಾ :**

ಸಹಕಾರ ಕ್ಷೇತ್ರದ ಮೂಲಕ ಗ್ರಾಮಸ್ವರಾಜದ ಸರದಾರ ವಲ್ಲಭಾಯಿ ಪಟೇಲರವರ ಕನಸನ್ನು ಕೇಂದ್ರ ಸಹಕಾರ ಸಚಿವ ಶ್ರೀ ಅಮಿತ ಶಾ ಪೂರೈಸಲಿದ್ದಾರೆ

## ಆದಾಯ ತೆರಿಗೆ ಸಮಸ್ಯೆ ನಿವಾರಣೆಗೆ ಮನವಿ ಹಾಗೂ ಸಂಯುಕ್ತ ಸಹಕಾರಿ ಕಟ್ಟಡ ಉದ್ಘಾಟನೆಗೆ ಆಹ್ವಾನ



**ನವದೆಹಲಿ :** ಕೇಂದ್ರ ಗೃಹ ಹಾಗೂ ಸಹಕಾರ ಸಚಿವರಾದ ಶ್ರೀ ಅಮಿತ್ ಶಾ ಅವರನ್ನು ನವದೆಹಲಿಯಲ್ಲಿ ಕರ್ನಾಟಕ ರಾಜ್ಯ ಸಹಕಾರ ಸಚಿವ ಶ್ರೀ ಎಸ್.ಟಿ. ಸೋಮಶೇಖರ್ ರವರು, ಸಹಕಾರ ಭಾರತೀಯ ರಾಷ್ಟ್ರೀಯ & ರಾಜ್ಯ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ಅಧ್ಯಕ್ಷರು, ನಿರ್ದೇಶಕರು ದಿನಾಂಕ 25.09.2021 ಶನಿವಾರ ಸಂಜೆ 7 ಗಂಟೆಗೆ ಭೇಟಿ ಮಾಡಿ ಅಭಿನಂದನೆ ಸಲ್ಲಿಸಿ ಸನ್ಮಾನಿಸಿದರು.

ಭೇಟಿ ಸಂದರ್ಭದಲ್ಲಿ ಸಹಕಾರ ಕ್ಷೇತ್ರ ಎದುರಿಸುತ್ತಿರುವ ಆದಾಯ ತೆರಿಗೆ ಸಮಸ್ಯೆ ನಿವಾರಣೆಗೆ ಮನವಿ ಸಲ್ಲಿಸಲಾಯಿತು. ಹಾಗೂ ನವೆಂಬರ್ ಅಥವಾ ಡಿಸೆಂಬರ್ 2021ರಲ್ಲಿ ಸಂಯುಕ್ತ ಸಹಕಾರಿಯ ಕಟ್ಟಡ ಉದ್ಘಾಟನೆಗೆ ಸಂಯುಕ್ತ ಸಹಕಾರಿಯಿಂದ ಆಹ್ವಾನಿಸಲಾಗಿದೆ. ಹಾಗೂ ರಾಜ್ಯದಲ್ಲಿ ನಡೆಸಲು ಉದ್ದೇಶಿಸಲಾಗಿರುವ ರಾಜ್ಯ ಮಟ್ಟದ ಸಹಕಾರ ಸಮ್ಮೇಳನದಲ್ಲಿ ಭಾಗವಹಿಸುವಂತೆ ರಾಜ್ಯ ಸಹಕಾರ ಸಚಿವರು ಆಹ್ವಾನಿಸಿರುತ್ತಾರೆ. ಅಮಿತ್ ಶಾ ಅವರು ಸಕಾರಾತ್ಮಕವಾಗಿ ಸ್ಪಂದಿಸಿರುತ್ತಾರೆ.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ. ಹೆಚ್ ಕೃಷ್ಣಾರೆಡ್ಡಿ, ಉಪಾಧ್ಯಕ್ಷರಾದ ಶ್ರೀ ಜಗದೀಶ್ ಕವಟಗಿಮಠ, ಸಹಕಾರ ಭಾರತೀಯ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ರಮೇಶ್ ವೈದ್ಯ, ರಾಜ್ಯ ಅಧ್ಯಕ್ಷರಾದ ಶ್ರೀ ಎಸ್ ಆರ್ ಸತೀಶ್ಚಂದ್ರ, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ತಿಮ್ಮಯ್ಯ ಶೆಟ್ಟಿ ರವರು, ಶ್ರೀ ಬಿ ಎಸ್ ಗುಂಡುರಾವ್ ರವರು, ಹಾಗೂ ವ್ಯವಸ್ಥಾಪಕ ನಿರ್ದೇಶಕರು ಉಪಸ್ಥಿತರಿದ್ದರು.

## ರಾಷ್ಟ್ರೀಯ ಸಹಕಾರಿ ಯೂನಿಯನ್ ವಾರ್ಷಿಕ ಮಹಾಸಭೆ

### ಯುವಕರು ಸಹಕಾರ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಲು ಎನ್.ಸಿ.ಯು.ಐ ಅಧ್ಯಕ್ಷ ಸಂಘಾನಿ ಕರೆ




**ನವದೆಹಲಿ :** ದಿನಾಂಕ 24–9–2021 ರಂದು ರಾಷ್ಟ್ರೀಯ ಸಹಕಾರ ಯೂನಿಯನ್ ನವದೆಹಲಿ ಇದರ ವಾರ್ಷಿಕ ಸಾಮಾನ್ಯ ಸಭೆಯು ಎನ್.ಸಿ.ಯು.ಐ ಅಧ್ಯಕ್ಷರಾದ ಶ್ರೀ ದಿಲೀಪ ಸಂಘಾನಿ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಯುಕ್ತ ಸಹಕಾರಿಯ ವತಿಯಿಂದ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಪ್ರತಿನಿಧಿಗಳಾಗಿ ಭಾಗವಹಿಸಿದ್ದರು. ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಪ್ರೇಕ್ಷಕರಾಗಿ ಭಾಗವಹಿಸಿದ್ದರು

ಸಹಕಾರ ಕ್ಷೇತ್ರ ಸಾಧನೆಗಳನ್ನು ಹಿಂದಿನ ಸರಕಾರಗಳು ಗುರುತಿಸಲಿಲ್ಲ. ಹಾಲಿ ಸರಕಾರವು ಸರಕಾರ ಕ್ಷೇತ್ರದ ಸಾಧನೆಯನ್ನು ಗುರುತಿಸಿದೆ ಈ ಕ್ಷೇತ್ರದ ಮಹತ್ವವನ್ನು ಅರಿತು ಈ ಕ್ಷೇತ್ರಕ್ಕೆ ಪ್ರತ್ಯೇಕ ಸಚಿವರನ್ನು ನೇಮಕ ಮಾಡಿದೆ. ಅದರಲ್ಲೂ ಶ್ರೀ ಅಮಿತ ಶಾ ರವರಂತಹ ಹಿರಿಯ ಅನುಭವಿ ಸಹಕಾರಿಯನ್ನು ಪ್ರಥಮ ಸಹಕಾರಿ ಸಚಿವರನ್ನಾಗಿ ನೇಮಕ ಮಾಡಿರುವುದು ನಮ್ಮೆಲ್ಲರಿಗೂ ವಿಶೇಷವಾಗಿ ಈ ದೇಶದ ಸಹಕಾರಿಗಳಿಗೆ ಗೌರವವನ್ನು ತಂದು ಕೊಟ್ಟಿದೆ. ಯುವಕರು ಈ ಕ್ಷೇತ್ರದಲ್ಲಿ ಹೆಚ್ಚಾಗಿ ಬರಬೇಕು. ತಮ್ಮ ಜೀವನವನ್ನು ರೂಪಿಸಿಕೊಳ್ಳುವಲ್ಲಿ ಸಹಕಾರ ಕ್ಷೇತ್ರದ ಸದುಪಯೋಗವನ್ನು ಪಡೆಯಬೇಕು ಎಂದು ತಿಳಿಸಿದಾಗ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಈ ಬಗ್ಗೆ ಸರ್ವಾನುಮತದಿಂದ ನಿರ್ಣಯವನ್ನು ತೆಗೆದುಕೊಳ್ಳಲಾಯಿತು.

ಮಾಜಿ ಅಧ್ಯಕ್ಷ ಹಾಗೂ ಐ.ಸಿ.ಎ ಏಶಿಯಾ ಫೆಸಿಫಿಕ್‌ನ ಶ್ರೀ ಚಂದ್ರಪಾಲಸಿಂಗರವರು ಮಾತನಾಡಿ ಸಹಕಾರ ಕ್ಷೇತ್ರದಲ್ಲಿ ಪಾರದರ್ಶಕತೆ ಪ್ರಾಮಾಣಿಕತೆಯ ಅಗತ್ಯತೆ ಇದೆ. ಸಹಕಾರಿಗಳಿಗೆ ನೀತಿ ಸಂಹಿತೆ ಇರುವುದು ಅಗತ್ಯ ಎಂದರು.

ಎನ್.ಸಿ.ಯು.ಐ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಸುಧೀರ ಮಹಾಜನರವರು ವಿಷಯಗಳ ಮಂಡನೆ ಮಾಡಿದರು. ನಿರ್ದೇಶಕ ಶ್ರೀ ಜಿ.ಹೆಚ್.ಅಮೀನ್ರವರು ವಂದನಾರ್ಪಣೆ ಸಲ್ಲಿಸಿದರು.

## ಸಮಾಲೋಚನಾ ಸಭೆ



**ಮಂಡ್ಯ :** ದಿನಾಂಕ 09.09.2021 ರಂದು ಮಂಡ್ಯ ಜಿಲ್ಲೆಯ ಸೌಹಾರ್ದ ಸಹಕಾರಿ ಅಧ್ಯಕ್ಷರುಗಳ "ಸಮಾಲೋಚನೆ ಸಭೆ" ಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿ ರವರು ಉದ್ಘಾಟನೆ ಮಾಡಿದರು. ಶ್ರೀ ಎಸ್. ನಾಗರಾಜು, ಮಾಜಿ ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು ಇವರು ಸಹ ಹಾಜರಿದ್ದರು. ಸದರಿ ಸಭೆಯಲ್ಲಿ ಜಿಲ್ಲೆಯ 09 ಸಹಕಾರಿಗಳಿಂದ 12 ಪ್ರತಿನಿಧಿಗಳು, ಉದ್ದೇಶಿತ 07 ಸಹಕಾರಿಗಳಿಂದ 14 ಪ್ರತಿನಿಧಿಗಳು, ಇತರೇ 07 ಜನರು ಸೇರಿ ಒಟ್ಟು 33 ಪ್ರತಿನಿಧಿಗಳು ಭಾಗವಹಿಸಿ ಯಶಸ್ವಿಗೊಳಿಸಿದರು.

# ಅಪೆಕ್ಸ್ ಮಾದರಿಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಬ್ಯಾಂಕ ರಚನೆಗೆ : ಪೂರ್ವಭಾವಿ ಸಮಾಲೋಚನಾ ಸಭೆ.

## ದಿನಾಂಕ 13-9-2021 ರಂದು ನಡೆದ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳ ಸಭೆಯ ನಡುವಳಿಕೆಗಳು

### ಅಪೆಕ್ಸ್ ಬ್ಯಾಂಕ್ ಮಾದರಿ ರಾಜ್ಯ ಸೌಹಾರ್ದ ಸಹಕಾರಿ ಬ್ಯಾಂಕ್ ಸ್ಥಾಪನೆಗೆ ಸಂಯುಕ್ತ ಸಹಕಾರಿಯ ಪ್ರಯತ್ನಕ್ಕೆ ಸೌಹಾರ್ದ ಸಹಕಾರಿಗಳ ಒಕ್ಕೊರಳಿನ ಬೆಂಬಲ : ಸಾಧಕ ಬಾಧಕಗಳ ಪರಾಮರ್ಶೆಗೆ ಸಲಹೆ

ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯ ವೇಗದ ಬೆಳವಣಿಗೆ, ಸೌಹಾರ್ದ ಸಹಕಾರಿಗಳಿಗೆ ಹಣಕಾಸು ನೀಡುವ ವ್ಯವಸ್ಥೆ, ಎಲ್ಲದಕ್ಕೂ ಮೇಲಾಗಿ ಸೌಹಾರ್ದ ಸಹಕಾರಿ ಚಳುವಳಿಯ ಆರೋಗ್ಯಕರ ಬೆಳವಣಿಗೆ ಹಿನ್ನೆಲೆಯಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಪ್ರತ್ಯೇಕ ಕೇಂದ್ರ ಹಣಕಾಸಿನ ವ್ಯವಸ್ಥೆಯನ್ನು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು ಮನಗಂಡು ಅಪೆಕ್ಸ್ ಬ್ಯಾಂಕ್ ಮಾದರಿಯಲ್ಲಿ ಸೌಹಾರ್ದ ಸಹಕಾರಿ ಬ್ಯಾಂಕನ್ನು ಸ್ಥಾಪಿಸಲು ಕಳೆದ ಹಲವು ವರ್ಷಗಳ ಕನಸನ್ನು ನನಸಾಗಿಸುವ ದೃಷ್ಟಿಯಿಂದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಯವರ ನೇತೃತ್ವದಲ್ಲಿ ದಿನಾಂಕ 13–9–2021 ರಂದು ರಾಜ್ಯದ ಸೌಹಾರ್ದ ಸಹಕಾರಿಗಳ ಸಭೆಯನ್ನು ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕಿನವರ ಏರ್‌ಮೀಟ್ ಆ್ಯಪ್ ನ ಸಹಕಾರ ದೊಂದಿಗೆ ಆನ್‌ಲೈನ್ ನಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಈ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ, ನಿರ್ದೇಶಕರುಗಳಾದ ಶ್ರೀ ಲಕ್ಷ್ಮೀಕಾಂತ ರೆಡ್ಡಿಯವರು ಶ್ರೀ ಬಿ.ಎಸ್. ಗುಂಡೂರಾವರವರು, ಶ್ರೀ ಪ್ರಸನ್ನಕುಮಾರರವರು, ಶ್ರೀಮತಿ ಸರಸ್ವತಿ ಎನ್. ರವಿ, ಶ್ರೀ ಗಂಗಾಧರಯ್ಯನವರು, ಶ್ರೀ ಸಂಜೀವ ಮಹಾಜನರವರು, ಶ್ರೀ ಶ್ರೀಧರರವರು, ಶ್ರೀ ನಾಗರಾಜ ದೇಶಪಾಂಡೆಯವರು, ಮಾಜಿ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶಚಂದ್ರರವರು, ಅನೇಕ ಹಿರಿಯ ಸಹಕಾರಿಗಳು ಸೇರಿದಂತೆ ಒಟ್ಟಾರೆ 325 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಹಾಗೂ ಸಂಯುಕ್ತ ಸಹಕಾರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಮಾನ್ಯ ಅಧ್ಯಕ್ಷರನ್ನು, ಉಪಾಧ್ಯಕ್ಷರನ್ನು, ಎಲ್ಲ ನಿರ್ದೇಶಕರನ್ನು ಹಿರಿಯ ಸಹಕಾರಿಗಳನ್ನು ಹಾಗೂ ಎಲ್ಲ ಪ್ರತಿನಿಧಿಗಳನ್ನು ಸ್ವಾಗತ ಮಾಡಿದರು. ನಂತರ ಪ್ರಸ್ತಾವಿಕ ಭಾಷಣ ಮಾಡುತ್ತ ರಾಜ್ಯ ಮಟ್ಟದ ಸೌಹಾರ್ದ ಸಹಕಾರಿಗಳ ಬ್ಯಾಂಕ ಸ್ಥಾಪಿಸುವುದು ಸಂಯುಕ್ತ ಸಹಕಾರಿಯ ಹಲವು ವರ್ಷಗಳ ಕನಸು. ಹಲವು ಬಾರಿ ಈ ಬಗ್ಗೆ ಪ್ರಯತ್ನಿಸಿದ್ದಾಗಿದೆ. ಆದರೆ ಪ್ರತಿ ರಾಜ್ಯಕ್ಕೆ ಒಂದೇ ಅಪೆಕ್ಸ್ ಬ್ಯಾಂಕ್ ಇರಬೇಕು ಎಂಬುವ ಆರ್.ಬಿ.ಐ.ನ ಕಟ್ಟುನಿಟ್ಟಾದ ನೀತಿ ನಿಯಮಗಳಿಗನುಸಾರವಾಗಿ ಪ್ರಯತ್ನ ಸಾಧಿಸುತ್ತಿಲ್ಲ. ಆದರೆ ಈ ಬಾರಿ ಕೇಂದ್ರದಲ್ಲಿ ವಾತಾವರಣ ಅನುಕೂಲವಿರುವುದರಿಂದ ಬೇರೆ ದಾರಿಯಿಂದ ಮತ್ತೂಮ್ಮೆ ಈ ಬ್ಯಾಂಕ್ ಸ್ಥಾಪಿಸುವುದಕ್ಕಾಗಿ ಈ ಪ್ರಯತ್ನ ಹಾಗೂ ಈ ಸಭೆ ಎಂದು ತಿಳಿಸಿದರು.

**ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಸಭೆಗೆ ನೀಡಿರುವ ವಿವರಗಳು :**

ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಮಾತನಾಡಿ ಮತ್ತೂಮ್ಮೆ ಎಲ್ಲರಿಗೂ ಸ್ವಾಗತಿಸಿ ಮಾತನಾಡುತ್ತ, ಸೌಹಾರ್ದ ಸಹಕಾರಿ ಕ್ಷೇತ್ರದ ಆರೋಗ್ಯಕರ ಬೆಳವಣಿಗೆಯ ದೃಷ್ಟಿಯಿಂದ, ಪ್ರಾಥಮಿಕ ಸೌಹಾರ್ದ ಸಹಕಾರಿಗಳಿಗೆ ಹಣಕಾಸಿನ ನೆರವನ್ನು ಒದಗಿಸುವ ದೃಷ್ಟಿಯಿಂದ, ಸೌಹಾರ್ದ ಸಹಕಾರಿ ಕ್ಷೇತ್ರವನ್ನು ಬಲಪಡಿಸುವ ಹಿನ್ನೆಲೆಯಲ್ಲಿ ಈ ಬ್ಯಾಂಕಿನ ಸ್ಥಾಪನೆ ಅವಶ್ಯಕವಾಗಿದೆ.. ಈ ಬಗ್ಗೆ ಆರ್.ಬಿ.ಐ ನವರಿಗೆ 2017 ರಲ್ಲಿ ಹಾಗೂ 2018 ರಲ್ಲಿ ಎರಟು ಬಾರಿ ನಮ್ಮ ಅಹವಾಲನ್ನು ಸಲ್ಲಿಸಿ ಪತ್ರ ಬರೆಯಲಾಗಿತ್ತು. ಆದರೆ ಅವರು ಎರಡು ಬಾರಿಯೂ ಪ್ರತಿ ರಾಜ್ಯಕ್ಕೆ ಒಂದೇ ಅಪೆಕ್ಸ್ ಬ್ಯಾಂಕ ಇರಬೇಕು ಎಂಬ ನಿಯಮದಡಿಯಲ್ಲಿ ನಮ್ಮ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದಿಲ್ಲ ಎಂದು ತಿಳಿಸಿದ್ದಾರೆ.

ಆದರೆ ಸೌಹಾರ್ದ ಸಹಕಾರಿಗಳಿಗೆ ಈ ಬ್ಯಾಂಕಿನ ಸ್ಥಾಪನೆ ಮಾಡುವುದು ಅಗತ್ಯವಿದೆ. ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ಸಹ ಕಳೆದ 10 ವರ್ಷಗಳಿಂದ ಅಂದರೆ ಶ್ರೀ ಎಸ್.ಆರ್. ಸತೀಶ್ಚಂದ್ರ ರವರು ಅಧ್ಯಕ್ಷರಾದಾಗಿನಿಂದ ಈ ಕನಸು ಕಾಣುತ್ತ ಬಂದಿದ್ದೇವೆ. ಹೇಗೆ ಮಾಡಿದರೆ ಈ ಬ್ಯಾಂಕಿನ ಸ್ಥಾಪನೆ ಸಾಧ್ಯವಾಗುತ್ತದೆ ಎಂಬ ನಿಟ್ಟಿನಲ್ಲಿ ನಿರಂತರ ಆಲೋಚನೆಗಳು ನಡೆಯುತ್ತಲೇ ಇವೆ. ಶ್ರೀ ಸತೀಶ ಮರಾಠೆಯವರು ಈಗ ಆರ್.ಬಿ.ಐ ನಿರ್ದೇಶಕರಾಗಿದ್ದಾರೆ. ಅವರ ಮೂಲಕ ಅವರು ಸೂಚಿಸುವ ದಾರಿಯಲ್ಲಿ ಈ ಬ್ಯಾಂಕ ಸ್ಥಾಪನೆಗಾಗಿ ಪ್ರಯತ್ನ ಮುಂದುವರೆಸಿದ್ದೇವೆ. ಈ ಬ್ಯಾಂಕ ಸ್ಥಾಪನೆ ಬಗ್ಗೆ ಸಹಕಾರಿಗಳಿಂದಲೂ ಸಹಕಾರ ಹಾಗೂ ಮಾರ್ಗದರ್ಶನ ಮತ್ತು ಸಲಹೆಗಳನ್ನು ಅಪೇಕ್ಷಿಸಿ ಈ ಸಭೆಯನ್ನು ವ್ಯವಸ್ಥೆಮಾಡಲಾಗಿದೆ ಎಂದು ತಿಳಿಸಿದರು. ನಂತರದಲ್ಲಿ ಈ ಬ್ಯಾಂಕ ಪ್ರಾರಂಭಿಸುವುದಕ್ಕಾಗಿ ಅನುಸರಿಸಬಹುದಾದ ಕ್ರಮಗಳ ಬಗ್ಗೆ ವಿಚಾರಗಳನ್ನು ಪ್ರಸ್ತಾಪಿಸಿದರು.

1. ಈ ಬ್ಯಾಂಕು ಸೌಹಾರ್ದ ಸಹಕಾರಿಗಳ ಕೇಂದ್ರ ಬ್ಯಾಂಕ್ ಆಗಿ ಕಾರ್ಯನಿರ್ವಹಿಸುತ್ತದೆ.
2. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ತನ್ನ ಶಾಖೆಗಳನ್ನು ಹೊಂದಿರುತ್ತದೆ.
3. ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಈ ಬ್ಯಾಂಕಿನ ಷೇರು ಪಡೆಯುವುದು ಅವಶ್ಯಕ
4. ಪ್ರಾರಂಭದಲ್ಲಿ 10 ಕೋಟಿ ಅಥವಾ ಈ ಮೊತ್ತದ ಆಸು ಪಾಸಿನಲ್ಲಿ ವ್ಯವಹಾರ ಇರುವ ಸೌಹಾರ್ದ ಸಹಕಾರಿಗಳು ಕನಿಷ್ಟ 10 ಲಕ್ಷ ಷೇರುಗಳನ್ನು ಪಡೆಯುವುದು ಅವಶ್ಯಕವಾಗುತ್ತದೆ.
5. ಈ ಬ್ಯಾಂಕಿನ ಸ್ಥಾಪನೆಗಾಗಿ ರಾಜ್ಯ ವ್ಯಾಪ್ತಿಯ ಒಂದು ವೀಕ ಬ್ಯಾಂಕನ್ನು ಸೌಹಾರ್ದ ಸಹಕಾರಿಗಳು ಸೇರಿ ಅದರ ಆಡಳಿತವನ್ನು ವಹಿಸಿಕೊಳ್ಳುವ ವ್ಯವಸ್ಥೆಯನ್ನು ಮಾಡುವುದು.

6. ಈ ಆಡಳಿತ ಮಂಡಳಿಯಯಲ್ಲಿ ಸಮಾನ ಮನಸ್ಕ ಸಹಕಾರಿಗಳು ಬ್ಯಾಂಕಿನ ಸ್ಥಾಪನೆಗಾಗಿ ತಮ್ಮ ವ್ಯಯಕ್ತಿಕ ಅನುಭವ, ಸಲಹೆ ಮತ್ತು ಮಾರ್ಗದರ್ಶನ ನೀಡಲು ಸಿದ್ಧರಿರುವವರನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ.
7. ಒಂದು ಬ್ಯಾಂಕನ್ನು ಪ್ರಾರಂಭಿಸಿದ ನಂತರ ರಾಜ್ಯವ್ಯಾಪಿ ಹಲವಾರು ಬ್ಯಾಂಕುಗಳು ವಿಲೀನ ಪ್ರಕ್ರೀಯೆಯತ್ತ ಒಲವನ್ನು ತೊರಿಸುತ್ತಿವೆ. ಪ್ರಸಕ್ತ ವಾತಾವರಣದಲ್ಲಿ ಆರ್.ಬಿ.ಐ ಕಠಿಣ ನೀತಿ ನಿಯಮಗಳಡಿಯಲ್ಲಿ ಕಾರ್ಯನಿರ್ವಹಿಸುವುದು ಕಷ್ಟವಾಗಿದೆ. ಆದ್ದರಿಂದ ಯಾವುದಾದರೊಂದು ಬ್ಯಾಂಕಿಗೆ ಬಿಲೀನವಾಗುವುದಕ್ಕೆ ಸಮ್ಮತಿಸುತ್ತಿವೆ. ಈ ಬ್ಯಾಂಕುಗಳನ್ನು ವಿಲೀನ ಮಾಡಿಕೊಂಡು ಅವುಗಳನ್ನು ಶಾಖೆಗಳನ್ನಾಗಿ ಕಾರ್ಯನಿರ್ವಹಿಸುವಂತೆ ವ್ಯವಸ್ಥೆ ಮಾಡುಲಾಗುತ್ತದೆ.
8. ಪ್ರಾರಂಭದಲ್ಲಿ ಒಂದು ವೀಕ ಬ್ಯಾಂಕಿನ ಆಡಳಿತವನ್ನು ವಹಿಸಿಕೊಂಡನಂತರ ಸದರಿ ಬ್ಯಾಂಕಿನ ಬೈಲಾ ತಿದ್ದುಪಡಿಮಾಡುವ ವರೆಗೆ ಸೌಹಾರ್ದ ಸಹಕಾರಿಗಳನ್ನು ಸಹ ಸದಸ್ಯರನ್ನಾಗಿ ಮಾಡಿಕೊಂಡು ನಂತರ ಪೂರ್ಣ ಪ್ರಮಾಣದ ಸದಸ್ಯತ್ವವನ್ನು ನೀಡಲು ಕ್ರಮವಿಡಲಾಗುವುದು.

**ಶ್ರೀ ಜಗದೀಶ ಕವಟಗಿಮಠರವರ ಅಭಿಪ್ರಾಯ :**

ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ರವರು ಈ ಬ್ಯಾಂಕ ಸ್ಥಾಪನೆ ಸಂಯುಕ್ತ ಸಹಕಾರಿಯ ಹಲವಾರು ವರ್ಷದ ಅಪೇಕ್ಷೆಯಾಗಿದ್ದು ಈ ಬ್ಯಾಂಕ್ ಸ್ಥಾಪನೆಯಿಂದಾಗಿ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಬಲ ಬಂದಂತಾಗುತ್ತದೆ. ಸೌಹಾರ್ದ ಸಹಕಾರಿಗಳಿಗೆ ಹಣಕಾಸಿನ ನೆರವು ಸಿಗುತ್ತದೆ. ಸೌಹಾರ್ದ ಸಹಕಾರಿ ಕ್ಷೇತ್ರ ಆರೋಗ್ಯಕರವಾಗಿ ಬೆಳೆಯಲು ಸಾಧ್ಯವಾಗುತ್ತದೆ. ಈ ಬ್ಯಾಂಕ ಸ್ಥಾಪನೆಯಿಂದ ಸಾಧಕ ಬಾಧಕಗಳ ಬಗ್ಗೆ ಸಂಪೂರ್ಣ ಅಧ್ಯಯನ ಮಾಡಿ ಮುಂದಿನ ಕ್ರಮವಿಡುವುದು ಸೂಕ್ತ. ಈ ಬಗ್ಗೆ ಒಂದು ತಜ್ಞರ ಸಮಿತಿಯನ್ನು ಮಾಡಿ ಅಧ್ಯಯನ ಮಾಡಿ ವರದಿಯನ್ನು ಪಡೆದು ಮುಂದುವರೆಯುವುದು ಸೂಕ್ತ ಎಂದು ತಿಳಿಸಿದರು. ಮುಖ್ಯವಾಗಿ ಸೌಹಾರ್ದ ಸಹಕಾರಿಗಳ ಸ್ವಾಯತ್ತತೆಗೆ ಧಕ್ಕೆ ಬರದಂತೆ ಕ್ರಮವಿಡುವುದು ಅಗತ್ಯ. ಈ ಬ್ಯಾಂಕ್ ಸ್ಥಾಪನೆಗೆ ತಮ್ಮ ಸಂಪೂರ್ಣ ಬೆಂಬಲವಿರುವುದಾಗಿ ತಿಳಿಸಿದರು.

**ಶ್ರೀ ಸಂಜೀವ ಮಹಾಜನ, ನಿರ್ದೇಶಕರು ಸಂಯುಕ್ತ ಸಹಕಾರಿ ನಿ., ಬೆಂಗಳೂರು**

ಸಂಯುಕ್ತ ಸಹಕಾರಿಯ ಯೋಚನೆ ಮತ್ತು ಯೋಜನೆ ತುಂಬಾ ಒಳ್ಳೆಯದು, ಬೇರೆ ಸಹಕಾರಿ ಬ್ಯಾಂಕನ್ನು ಟೇಕ್ ಓವರ ಮಾಡುವುದಕ್ಕಿಂತ, ಈ ಹಿಂದೆ ಸಂಯುಕ್ತ ಸಹಕಾರಿಯು ಸಂಯುಕ್ತ ಸಹಕಾರಿ ಬ್ಯಾಂಕ ಸ್ಥಾಪಿಸಲು ನಿರ್ಣಯಿಸಿತು. ಅದರಂತೆ ಸಂಯುಕ್ತ ಸಹಕಾರಿ ಬ್ಯಾಂಕ್ ಪ್ರಾರಂಭಿಸುವುದು ಸೂಕ್ತವೆಂದು ತಿಳಿಸಿದರು. ಈಗಾಗಲೇ ಬೇರೆ ಸಹಕಾರಿ ಬ್ಯಾಂಕನ್ನು ಟೇಕ್ ಓವರ ಮಾಡಿದ್ದಲ್ಲಿ ಅ ಬ್ಯಾಂಕಿನ ಅಗು-ಹೋಗುಗಳನ್ನು ತಿಳಿದುಕೊಂಡು ಬ್ಯಾಂಕ ತಜ್ಞರ ಸಮಿತಿಯನ್ನು ರಚಿಸುವುದು ಸೂಕ್ತವೆಂದು ತಿಳಿಸಿದರು.

**ಶ್ರೀ ಪ್ರಸನ್ನಕುಮಾರ, ನಿರ್ದೇಶಕರು, ಸಂಯುಕ್ತ ಸಹಕಾರಿ ನಿ., ಬೆಂಗಳೂರು**

ಮಾನ್ಯ ಅಧ್ಯಕ್ಷರು ಮತ್ತು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಸೌಹಾರ್ದ ಸಹಕಾರಿ ಬ್ಯಾಂಕ ಪ್ರಾರಂಭಿಸಲು ತಗೆದುಕೊಂಡ ನಿರ್ಣಯ ಸೂಕ್ತವಾದ್ದದ್ದು. ಸಂಯುಕ್ತ ಸಹಕಾರಿಯ ಸಂಪೂರ್ಣ ಆಡಳಿತ ಮಂಡಲಿಯ ಮಾನ್ಯ ಅಧ್ಯಕ್ಷರ ನಿರ್ಧಾರಕ್ಕೆ ಸಿದ್ಧವಿರುತ್ತದೆ. ಮತ್ತು ಮುಂದೆಯು ಅಧ್ಯಕ್ಷರಿಗೆ ಈ ವಿಷಯದಲ್ಲಿ ಬೆಂಬಲಿಸುತ್ತೇವೆಂದು ತಿಳಿಸಿದರು. ಸೌಹಾರ್ದ ಸಹಕಾರಿ ಬ್ಯಾಂಕನ ಕುರಿತು ಸಾಧಕ-ಭಾದಕಗಳನ್ನು ಕುರಿತು ಚರ್ಚಿಸಿ ಸೂಕ್ತವಾಗಿ ನಿರ್ಣಯ ತೆಗೆದುಕೊಳ್ಳಬೇಕೆಂದು ತಿಳಿಸಿದರು.

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ಮತ್ತೊಮ್ಮೆ ಎಲ್ಲ ವಿವರಗಳನ್ನು ಪರಿಶೀಲಿಸಿ ತಜ್ಞರೊಡನೆ ಸಮಾಲೋಚಿಸಿ ಮುಂದಿನ ಕ್ರಮವಿಡಲಾಗುವುದೆಂದು ತಿಳಿಸುತ್ತ ಸಭೆಯಲ್ಲಿ ಭಾಗವಹಿಸಿದ ಎಲ್ಲರಿಗೂ ಧನ್ಯವಾದಗಳನ್ನು ತಿಳಿಸಿದರು.

ಸಂಯುಕ್ತ ಸಹಕಾರಿಯ ಉಪವ್ಯವಸ್ಥಾಪಕರಾದ ಶ್ರೀ ಆರ್. ರಘುನಂದನ್‌ರವರು ಕಾರ್ಯಕ್ರಮದ ನಿರ್ವಹಣೆಯನ್ನು ಮಾಡಿದರು.



## ಸಂಯುಕ್ತ ಸಹಕಾರಿಯ ನೂತನ ನಿರ್ದೇಶಕರಾದ ಶ್ರೀ ರವೀಂದ್ರ ರಾಮಚಂದ್ರ ಯಲಿಗಾರ ಹಾಗೂ ಶ್ರೀ ನಾಗರಾಜು ಆರ್. ದೇಶಪಾಂಡೆ ಇವರಿಗೆ ಸನ್ಮಾನ

**ಬೆಂಗಳೂರು** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೂತನ ನಿರ್ದೇಶಕರಾದ ಶ್ರೀ ರವೀಂದ್ರ ರಾಮಚಂದ್ರ ಯಲಿಗಾರ ಮತ್ತು ಶ್ರೀ ನಾಗರಾಜು ಆರ್. ದೇಶಪಾಂಡೆ ಇವರಿಗೆ ಆಡಳಿತ ಮಂಡಳಿಯ ಸಭೆಯಲ್ಲಿ ಸ್ವಾಗತಿಸಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಂಯಕ್ತ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಹಾಗೂ ವ್ಯವಸ್ಥಾಪಕ ನಿರ್ದೇಶಕರು ಉಪಸ್ಥಿತರಿದ್ದರು.

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಶಾಸನಬದ್ಧ ಸಹಕಾರಿ ಸಂಸ್ಥೆ

ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010

www.souharda.coop, Ph: 080–23378375–80, Email:souharda@souharda.coop

ಸಂಖ್ಯೆ : ಸಂಸ/68ನೇ ಅ.ಭಾ.ಸ.ಸ./2021–22 ದಿನಾಂಕ : 01.10.2021

ಮಾನ್ಯರೇ,

**ವಿಷಯ : 68ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆಯ ಕುರಿತು.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪ್ರತಿ ವರ್ಷ ರಾಷ್ಟ್ರಾದ್ಯಂತ ನವೆಂಬರ್ 14ರಿಂದ 20ರ ವರೆಗೆ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆ ನಡೆಯುತ್ತದೆ. ಅದರಂತೆ ಕನಾಟಕ ರಾಜ್ಯದಾದ್ಯಂತ ಒಂದು ವಾರಗಳ ಕಾಲ ಸಹಕಾರ ಸಪ್ತಾಹದ ಒಂದೊಂದು ದಿನಕ್ಕೂ ಒಂದೊಂದು ವಿಷಯಗಳಿಗೆ ಸಂಬಂಧಿಸಿದಂತೆ, ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಚರಿಸಲಾಗುತ್ತಿದೆ.

ಪ್ರಸ್ತುತ ರಾಷ್ಟ್ರೀಯ ಸಹಕಾರ ಯೂನಿಯನ್ ನವದೆಹಲಿ ಇವರು ದಿನಾಂಕ 14 ರಿಂದ 20ನೇ ನವೆಂಬರ್ 2021ರ ವರೆಗೆ 68ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆಯನ್ನು ಆಚರಿಸಲು ಸೂಚಿಸಲಾಗಿದ್ದು, ಪ್ರತಿ ದಿನದ ವಿಷಯವು ಕೆಳಕಂಡಂತಿದೆ.

**68ನೇ ಅಖಿಲ ಭಾರತ ಸಹಕಾರ ಸಪ್ತಾಹದ ಧ್ಯೇಯ :**

**"ಸಹಕಾರದ ಮೂಲಕ ಸಮೃದ್ಧಿ"**

**"Prosperity through Cooperation"**

| ದಿನಾಂಕ | ವಿಷಯ |
|---|---|
| 14.11.2021 | ಕೊರೋನಾ ಸೋಂಕನ್ನು ನಿಭಾಯಿಸುವಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಮತ್ತು ಆರೋಗ್ಯ ಸಹಕಾರಿ ಸಂಸ್ಥೆಗಳನ್ನು ಬಲಪಡಿಸುವುದು. |
| | Role of Cooperatives in Tackling Covid Pandemic and Strengthening Health Cooperatives. |
| 15.11.2021 | ಸಹಕಾರಿ ಮಾರಾಟ, ಗ್ರಾಹಕ ರೂಪಾಂತರ ಮತ್ತು ಮೌಲ್ಯವರ್ಧನೆ. |
| | Cooperative Marketing, Consumers, Processing and Value Addition. |
| 16.11.2021 | ಸಹಕಾರ ಸಂಸ್ಥೆಗಳಿಗೆ ವ್ಯಾಪರ ಸುಲಭೀಕರಣ. |
| | Ease of doing Business for Cooperatives. |
| 17.11.2021 | ಅನ್ವೇಷಣೆಯನ್ನು ತ್ವರಿತಗೊಳಿಸುವಲ್ಲಿ ಸಹಕಾರ ಸಂಸ್ಥೆಗಳ ಪಾತ್ರ, ಉದ್ಯೋಗ ಸೃಷ್ಟಿ ಮತ್ತು ವೃತ್ತಿಪರತೆ |
| | Role of Cooperatives in Fostering Innovation, Employment Generation and Bringing in Professionalism. |
| 18.11.2021 | ಉದ್ಯಮಶೀಲತೆ ಅಭಿವೃದ್ಧಿ ಮತ್ತು ಸಾರ್ವಜನಿಕ/ಖಾಸಗಿ ಸಹಕಾರಿ ಪಾಲುದಾರಿಕೆ ಬಲಪಡಿಸುವುದು. |
| | Entrepreneurship Development and Strengthening Public /Private Cooperative Partnership. |
| 19.11.2021 | ಯುವಜನ, ಮಹಿಳೆ ಮತ್ತು ಅಬಲವರ್ಗದವರಿಗೆ ಸಹಕಾರ ಸಂಸ್ಥೆಗಳು. |
| | Cooperatives for Youth, Women and Weaker sections. |
| 20.11.2021 | ಸಹಕಾರ ಸಂಸ್ಥೆಗಳ ಮೂಲಕ ಆರ್ಥಿಕ ಸೇರ್ಪಡೆ, ಡಿಜಿಟಲೀಕರಣ ಮತ್ತು ಸಾಮಾಜಿಕ ಜಾಲತಾಣ. |
| | Financial Inclusion, Digitalization and Social Media through Cooperatives. |

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಅವಗಾಹನೆಗಾಗಿ ಹಾಗೂ ವ್ಯವಸ್ಥಿತವಾಗಿ ಸಹಕಾರ ಸಪ್ತಾಹವನ್ನು ಅರ್ಥಪೂರ್ಣವಾಗಿ ಆಚರಿಸಲು ವಿನಂತಿಯೊಂದಿಗೆ ಕಳುಹಿಸಲಾಗಿದೆ.

ಸಹಿ/–
(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕರು

## ಸಹಕಾರ ಹಾಗೂ ಬ್ಯಾಂಕಿಂಗ್ ಮೆನೇಜ್‌ಮೆಂಟ್ ಡಿಪ್ಲೋಮಾ ಕೋರ್ಸ್‌ನ ಮೂರನೇ ತಂಡದ ತಡೆಹಿಡಿಯಲಾದ ಅಭ್ಯರ್ಥಿಗಳ ಫಲಿತಾಂಶ

**ಉತ್ತೀರ್ಣರಾದ ಅಭ್ಯರ್ಥಿಗಳ ಪಟ್ಟಿ**

| Roll No | Grade | Roll No | Grade | Roll No | Grade | Roll No | Grade |
|---|---|---|---|---|---|---|---|
| B3-0308 | B | B3-0459 | C+ | B3-0542 | B | B3-0606 | B |
| B3-0443 | C+ | B3-0472 | C+ | B3-0545 | B | B2-0240 | B+ |

**ಅನುತ್ತೀರ್ಣರಾದ ಅಭ್ಯರ್ಥಿಗಳ ಪಟ್ಟಿ**

| Roll No | Roll No | Roll No | Roll No | Roll No | Roll No | Roll No | Roll No |
|---|---|---|---|---|---|---|---|
| B3-0386 | B3-0387 | B3-0397 | B3-0420 | B3-0428 | B3-0450 | B3-0476 | B3-0518 |
| B3-0523 | B3-0530 | B3-0540 | B2-0294 | B2-0439 | | | |

## ಸೌಹಾರ್ದ ಸಹಕಾರಿಗಳ ಸಮಸ್ಯೆಗಳ ಕುರಿತು ಸಭೆ

### ಠೇವಣಿದಾರರ ಹಿತ ರಕ್ಷಣೆಗೆ ಆದ್ಯತೆ ನೀಡಲು ಸೂಚನೆ : ವಿಫಲರಾದಲ್ಲಿ ಕಾನೂನು ಕ್ರಮ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

ದಿನಾಂಕ 06.09.2021ರಂದು ಬೆಂಗಳೂರು ಪ್ರಾಂತದ ಸೌಹಾರ್ದ ಸಹಕಾರಿಗಳ ಸಮಸ್ಯೆಗಳ ಕುರಿತು ಚರ್ಚಿಸಲು ಕೇಂದ್ರ ಕಛೇರಿಯಲ್ಲಿ ಆಡಳಿತ ಮಂಡಳಿ ಸದಸ್ಯರ ವಿಶೇಷ ಸಭೆಯನ್ನು ಆಯೋಜಿಸಲಾಗಿತ್ತು. ಸದರಿ ಸಭೆಯು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀಯುತ ಬಿ.ಹೆಚ್ ಕೃಷ್ಣಾರೆಡ್ಡಿ ಇವರು ವಹಿಸಿದ್ದರು. ಸಭೆಯಲ್ಲಿ ಶ್ರೀ ಬಿ.ಎಸ್ ಗುಂಡುರಾವ್, ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು, ಶ್ರೀ ಪ್ರಸನ್ ಕುಮಾರ, ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು, ಶ್ರೀ ಶರಣಗೌಡ ಜಿ. ಪಾಟೀಲ, ವ್ಯವಸ್ಥಾಪಕ ನಿರ್ದೇಶಕರು, ಶ್ರೀ ನಾರಾಯಣ ಹೆಗಡೆ, ಉಪ ಪ್ರಧಾನ ವ್ಯವಸ್ಥಾಪಕರು ಹಾಗೂ ಮುಖ್ಯಸ್ಥರು, ಟಾಸ್ಕ್ ಫೋರ್ಸ್, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ಹಾಗೂ ಶ್ರೀ ಸಂಜಯ ಕೋರಟಕರ, ಪ್ರಾಂತೀಯ ವ್ಯವಸ್ಥಾಪಕರು, ಬೆಂಗಳೂರು ಪ್ರಾಂತ, ಇವರುಗಳು ಉಪಸ್ಥಿತರಿದ್ದರು.

**ಬೆಂಗಳೂರು ಪ್ರಾಂತದ ಸೌಹಾರ್ದ ಸಹಕಾರಿಗಳ ವಿಶೇಷ ಸಭೆಗೆ ಹಾಜರಾದ ಸೌಹಾರ್ದ ಸಹಕಾರಿಗಳು :**

1. ವೈರಮುಡಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಬೆಂಗಳೂರು (ಬಿಜಿಯು–0213)
2. ಶ್ರೀ ಪಂಚ ಐಶ್ವರ್ಯ ಮಲ್ಟಿಪರ್ಪಸ್ ಸೌಹಾರ್ದ ಕೋ–ಆಪರೇಟಿವ್ ಲಿ., ಬೆಂಗಳೂರು (ಬಿಜಿಯು–0239)
3. ಸೌತ್ ಬೆಂಗಳೂರು ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ, ಬೆಂಗಳೂರು (ಬಿಜಿಯು–0281)
4. ಕಲ್ಪನ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಬೆಂಗಳೂರು (ಬಿಜಿಯು–0301)
5. ವಿ.ಗೋಲ್ಡ್ ಸೌಹಾರ್ದ ಕೋ–ಆಪರೇಟಿವ್ ಲಿ., ಬೆಂಗಳೂರು (ಬಿಜಿಯು–0306)
6. ಶ್ರೀ ಮುನೇಶ್ವರ ಸೌಹಾರ್ದ ಕ್ರೆಡಿಟ್ ಕೋ–ಆಪ್‌ರೇಟಿವ್ ಲಿಮಿಟೆಡ್, ಬೆಂಗಳೂರು (ಬಿಜಿಯು–0313)

ಸಭೆಯಲ್ಲಿ ಸೌಹಾರ್ದ ಸಹಕಾರಿಗಳ ಸಮಸ್ಯೆಗಳು, ಠೇವಣಿದಾರರ ದೂರುಗಳ ಕುರಿತು, ಹಣಕಾಸಿನ ವ್ಯವಹಾರಗಳ ಕುರಿತು ಚರ್ಚಿಸಲಾಯಿತು. ಸಂಬಂಧಪಟ್ಟ ಸಮಸ್ಯೆಗಳಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಬಿ.ಹೆಚ್. ಕೃಷ್ಣಾರೆಡ್ಡಿ ಇವರು ಮಾರ್ಗದರ್ಶನ ನೀಡಿದರು. ಠೇವಣಿದಾರರ ಸಮಸ್ಯೆಗಳಿಗೆ ಸಂಬಂಧಿಸಿದಂತೆ, ಯಾವುದೇ ಸೌಹಾರ್ದ ಸಹಕಾರಿಯು ಸದಸ್ಯರ ಠೇವಣಿ ಹಣವನ್ನು ಮರುಪಾವತಿಸುವಲ್ಲಿ ವಿಳಂಬ ಮಾಡಿದಲ್ಲಿ ಸೌಹಾರ್ದ ಕಾಯ್ದೆ ಅನ್ವಯ ನಿರ್ದಾಕ್ಷಣ್ಯವಾಗಿ ಕಾನೂನು ಕ್ರಮವನ್ನು ತೆಗೆದುಕೊಳ್ಳಲಾಗುವುದೆಂದು ಹಾಗೂ ಠೇವಣಿದಾರರ ದೂರುಗಳಿಗೆ ಸಂಬಂಧಿಸಿದಂತೆ ಠೇವಣಿದಾರರ ಹಣವನ್ನು ಆದಷ್ಟು ಬೇಗನೇ ಹಣವನ್ನು ಮರುಪಾವತಿಸತಕ್ಕದ್ದೆಂದು ಸೂಚಿಸಲಾಯಿತು. ಸಹಕಾರಿಗಳು ಸೌಹಾರ್ದ ಸಹಕಾರಿಯ ಕಾಯ್ದೆ ಅನ್ವಯ ನಿರ್ದಿಷ್ಟಪಡಿಸಿದ ಹಣಕಾಸು ಸಂಸ್ಥೆಗಳಲ್ಲಿ ಹೂಡಿಕೆ ಮಾಡುವಂತೆ ಸೂಚನೆ ನೀಡಲಾಯಿತು. ರಾಜ್ಯಾಂದ್ಯಂತ ಸೌಹಾರ್ದ ಸಹಕಾರಿಗಳ ಪರಿವೀಕ್ಷಣೆಗಳನ್ನು ಕೈಗೊಳ್ಳಲಾಗುತ್ತಿದೆ. ಪರಿವೀಕ್ಷಣೆಗೆ ಸಂಬಂಧಿಸಿದಂತೆ ಸಹಕಾರಿಗಳು ಪರಿವೀಕ್ಷಣಾಧಿಕಾರಿಗಳಿಗೆ ಪರಿವೀಕ್ಷಣೆಗೆ ಸಂಬಂಧಿಸಿದ ದಾಖಲೆಗಳನ್ನು ವಿಳಂಬ ಮಾಡದೆ ಒದಗಿಸಿ ಸಹಕರಿಸಲು ನಿರ್ದೇಶನ ನೀಡಿದರು. ಸಹಕಾರಿಗಳು ಸಂಯುಕ್ತ ಸಹಕಾರಿಯ ಕಾಯ್ದೆ, ನಿಯಮ ಮತ್ತು ಸುತ್ತೋಲೆಗಳನ್ನು ಅನುಸರಿಸಲು ತಿಳಿಸಿದರು. ದ್ರವ್ಯಾಸ್ಥಿ ನಿರ್ವಹಣೆಯನ್ನು ಕಡ್ಡಾಯವಾಗಿ ಪಾಲಿಸಲು ಸಹಕಾರಿಗಳಿಗೆ ಸೂಚನೆ ನೀಡಿದರು.

# ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳು

## ಸಂಪರ್ಕ ಸಭೆಗಳು



**ವಿಜಯಪುರ :** ದಿನಾಂಕ 29.09.2021 ರಂದು ವಿಜಯಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಶ್ರೀ ನೀಲಕಂಠೇಶ್ವರ ಮಂಗಲ ಕಾರ್ಯಾಲಯ, ವಿಜಯಪುರ. ಇಲ್ಲಿ ಸಂಪರ್ಕ ಸಭೆಯು ಜರುಗಿತು. ಸಭೆಯ ಉದ್ಘಾಟನೆಯನ್ನು ಮಾನ್ಯ ವಿಜಯಪುರ ನಗರ ಶಾಸಕರಾದ ಶ್ರೀಯುತ ಬಸವನಗೌಡ ಪಾಟೀಲ ಯತ್ನಾಳ ಇವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀಯುತ ಬಿ.ಹೆಚ್.ಕೃಷ್ಣಾರೆಡ್ಡಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀಯುತ ಸಿದ್ರಾಮಪ್ಪ ಚ.ಉಪ್ಪಿನ, ಶ್ರೀಯುತ ಜಿ.ಶ್ರೀಧರ ಹಾಗೂ ಸಹಕಾರ ಭಾರತಿಯ ಮಾನ್ಯ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀಯುತ ರಮೇಶ ವೈದ್ಯ, ಇವರುಗಳು ಉಪಸ್ಥಿತರಿದ್ದರು. ಸಭೆಯಲ್ಲಿ ಅತಿಥಿಗಳಾಗಿ ಶ್ರೀ ಶಾಂತೇಶ್ವರ ವಿವಿಧೋದ್ದೇಶ ಸಹಕಾರ ಸಂಘದ ಸಂಸ್ಥಾಪಕ ಉಪಾಧ್ಯಕ್ಷರಾದ ಶ್ರೀಯುತ ಶ್ರೀಮಂತ ಜೆ. ಇಂಡಿ, ಮಾನ್ಯ ಸನ್ನದು ಲೆಕ್ಕ ಪರಿಶೋಧಕರು ಹಾಗೂ ಸಂಪನ್ಮೂಲ ವ್ಯಕ್ತಿಗಳಾದ ಶ್ರೀಯುತ ಕಮಲಕರ ಕದಂ ಇವರು ಭಾಗವಹಿಸಿದ್ದರು. ಟಾಸ್ಕಫೋರ್ಸನ ಮಾನ್ಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀಯುತ ಶ್ರೀಕಾಂತ ಬರುವೆ, ಮಾನ್ಯ ಪ್ರಾಂತೀಯ ವ್ಯವಸ್ಥಾಪರಾದ ಶ್ರೀಯುತ ಬಸವರಾಜ ಹೊಂಗಲ ಇವರು ಸಭೆಯಲ್ಲಿ ಉಪಸ್ಥಿತರಿದ್ದರು. ಸಭೆಯಲ್ಲಿ 176 ಸೌಹಾರ್ದ ಸಹಕಾರಿಗಳಿಂದ 250 ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು. ಸಭೆಯಲ್ಲಿ ಸಂಪನ್ಮೂಲ ವ್ಯಕ್ತಗಳಾದ ಶ್ರೀ ಕಮಲಕರ ಕದಂ ಇವರಿಂದ ಜಿ. ಎಸ್.ಟಿ ಹಾಗೂ ಆದಾಯ ತೆರಿಗೆ ವಿಷಯದ ಕುರಿತು ಉಪನ್ಯಾಸ ಕಾರ್ಯಕ್ರಮ ಜರುಗಿತು. ಟಾಸ್ಕಫೋರ್ಸನ ಮಾನ್ಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಇವರಿಂದ ಆಡಳಿತ ಮಂಡಲಿ ಸಭೆಗಳನ್ನು ವಿಧಾನಗಳ ಕುರಿತು ಉಪನ್ಯಾಸ ಕಾರ್ಯಕ್ರಮ ಜರುಗಿತು. ಸಭೆಯಲ್ಲಿ ಸಹಕಾರಿಗಳು ಸಕ್ರೀಯವಾಗಿ ಪಾಲ್ಗೊಂಡು ತಾವು ಎದುರಿಸುತ್ತಿರುವ ಸಮಸ್ಯೆಗಳಿಗೆ ಮಾನ್ಯ ಅಧ್ಯಕ್ಷರಿಂದ ಸಮರ್ಪಕವಾದ ಉತ್ತರಗಳನ್ನು ಪಡೆದುಕೊಂಡರು.

ಕೊನೆಯಲ್ಲಿ ಮಾನ್ಯ ಅಧ್ಯಕ್ಷರ ನೇತೃತ್ವದಲ್ಲಿ ಕೆಲವು ಸಮಸ್ಯಾತ್ಮಕ ಸಹಕಾರಿಗಳೊಂದಿಗೆ ಸಭೆ ಜರುಗಿತು. ಈ ಸಂದರ್ಭದಲ್ಲಿ ಠೇವಣಿದಾರರಾದ ಶ್ರೀ ಪಿ.ಐ.ರುದ್ರಮುನಿ ಇವರು ಶ್ರೀ ಸಾಯಿನಿಧಿ ಸೌಹಾರ್ದ ಸಹಕಾರಿಯಲ್ಲಿ ತೊಡಗಿಸಿರುವ ಠೇವಣಿ ಮೊತ್ತದ ಮರುಪಾವತಿಯಾಗದ ಕುರಿತು ಚರ್ಚಿಸಿದ ತರುವಾಯ ಮಾನ್ಯ ಅಧ್ಯಕ್ಷರು ಸಹಕಾರಿಯೊಂದಿಗೆ ಮಾತುಕತೆ ನಡೆಸಿದ ಹಿನ್ನಲೆಯಲ್ಲಿ ಸಹಕಾರಿಯಿಂದ ಠೇವಣಿದಾರನಿಗೆ 50,000/– ಮರುಪಾವತಿಯಾಗಿರುತ್ತದೆ. ಹಣ ಸ್ವೀಕರಿಸಿದ ಠೇವಣಿದಾರ ಸಂಯುಕ್ತ ಸಹಕಾರಿಗೆ ಪತ್ರದ ಮುಖೇನ ಧನ್ಯವಾದವನ್ನು ಸಲ್ಲಿಸಿರುತ್ತಾರೆ.

ಸಭೆಯಲ್ಲಿ ಸಂಯುಕ್ತ ಸಹಕಾರಿಯ ವತಿಯಿಂದ ಮಾನ್ಯ ವಿಜಯಪುರ ನಗರ ಶಾಸಕರಾದ ಶ್ರೀಯುತ ಬಸವನಗೌಡ ಪಾಟೀಲ ಯತ್ನಾಳ ಇವರನ್ನು ಸನ್ಮಾನಿಸಲಾಯಿತು.



**ಬಾಗಲಕೋಟೆ :** ದಿನಾಂಕ 30.09.2021 ರಂದು ಬಾಗಲಕೋಟೆ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಶ್ರೀ ಸಾಯಿ ಮಂದಿರ ವಿದ್ಯಾಗಿರಿ ಬಾಗಲಕೋಟೆ. ಇಲ್ಲಿ ಸಂಪರ್ಕ ಸಭೆಯು ಜರುಗಿತು. ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರು ನೆರವೇ–ರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಯುತ ಜಿ.ಎನ್. ಪಾಟೀಲ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಯುತ ಜಿ.ಶ್ರೀಧರ ಮತ್ತು ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕ ರಾದ ಶ್ರೀ ಸಾಗರ ಚವಜ ಹಾಗೂ ಪಿ. ಎಲ್. ಡಿ ಬ್ಯಾಂಕ್ ನಿರ್ದೇಶಕರಾದ ಮಹಾಂತೇಶ ಮಮದಪುರ ಇವರುಗಳು ಉಪಸ್ಥಿತರಿದ್ದರು. ಟಾಸ್ಕಫೋರ್ಸನ ಮಾನ್ಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀಯುತ ಶ್ರೀಕಾಂತ ಬರುವೆ, ಮಾನ್ಯ ಪ್ರಾಂತೀಯ ವ್ಯವಸ್ಥಾಪರಾದ ಶ್ರೀಯುತ ಬಸವರಾಜ ಹೊಂಗಲ ಇವರು ಸಭೆಯಲ್ಲಿ ಪಾಲ್ಗೊಂಡಿದ್ದರು. ಸಭೆಯಲ್ಲಿ 290 ಸೌಹಾರ್ದ ಸಹಕಾರಿಗಳಿಂದ 400 ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು.

ಸಭೆಯಲ್ಲಿ ಸಹಕಾರಿಗಳು ಸಕ್ರೀಯವಾಗಿ ಪಾಲ್ಗೊಂಡು ತಾವು ಎದುರಿಸುತ್ತಿರುವ ಸಮಸ್ಯೆಗಳಿಗೆ ಮಾನ್ಯ ಅಧ್ಯಕ್ಷರಿಂದ ಸಮರ್ಪಕವಾದ ಉತ್ತರಗಳನ್ನು ಪಡೆದುಕೊಂಡರು. ಕೊನೆಯಲ್ಲಿ ಮಾನ್ಯ ಅಧ್ಯಕ್ಷರ ನೇತೃತ್ವದಲ್ಲಿ 4 ಸಮಸ್ಯಾತ್ಮಕ ಸಹಕಾರಿಗಳೊಂದಿಗೆ ಸಭೆ ಜರುಗಿತು.



**ಹಾವೇರಿ :** ದಿನಾಂಕ 01.10.2021 ರಂದು ಹಾವೇರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಸಂತೃಪ್ತಿ ಹೋಟೆಲ್ ಡಿ ಸಿ ಆಫೀಸ್ ರೋಡ್ ಹಾವೇರಿ ಜಿಲ್ಲೆ.* ಇಲ್ಲಿ ಸಂಪರ್ಕ ಸಭೆಯು ಜರುಗಿತು. ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕಷ್ಣಾರೆಡ್ಡಿ ಇವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎಂ.ಬಿ. ಕಲಾಲ್ ರವರು ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಜಿ.ಕೆ.ರಾಮಪ, ಮಾನ್ಯ ಉಪನಿರ್ದೇಶಕರ(ನಿವೃತ್ತ), ಲೆಕ್ಕಪರಿಶೋಧನಾ ಇಲಾಖೆ, ಉತ್ತರಕನ್ನಡ ಇವರು ಉಪಸ್ಥಿತರಿದ್ದರು ಟಾಸ್ಕಫೋರ್ಸನ ಮಾನ್ಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀಯುತ ಶ್ರೀಕಾಂತ ಬರುವೆ, ಮಾನ್ಯ ಪ್ರಾಂತೀಯ ವ್ಯವಸ್ಥಾಪರಾದ ಶ್ರೀಯುತ ಬಸವರಾಜ ಹೊಂಗಲ ಇವರು ಸಭೆಯಲ್ಲಿ ಪಾಲ್ಗೊಂಡಿದ್ದರು. ಹಾವೇರಿ ಜಿಲ್ಲೆಯಲ್ಲಿ ಒಟ್ಟು 141 ಸಹಕಾರಿಗಳಿಂದ ಸಭೆಯಲ್ಲಿ 210 ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು. ಸಭೆಯಲ್ಲಿ ಸಹಕಾರಿಗಳು ಸಕ್ರೀಯವಾಗಿ ಪಾಲ್ಗೊಂಡು ತಾವು ಎದುರಿಸುತ್ತಿರುವ ಸಮಸ್ಯೆಗಳಿಗೆ ಮಾನ್ಯ ಅಧ್ಯಕ್ಷರಿಂದ ಸಮರ್ಪಕವಾದ ಉತ್ತರಗಳನ್ನು ಪಡೆದುಕೊಂಡರು.

## ಪತ್ರಿಕಾ ಗೋಷ್ಠಿ



**ಬಾಗಲಕೋಟ :** ದಿನಾಂಕ 30.09.2021 ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರ ನೇತೃತ್ವದಲ್ಲಿ ಪತ್ರಿಕಾಗೋಷ್ಠಿ ಜರುಗಿತು. ಪತ್ರಿಕಾಗೋಷ್ಠಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀಯುತ ಜಿ.ಎನ್. ಪಾಟೀಲ ಮತ್ತು ಶ್ರೀ ಜಿ. ಶ್ರೀಧರ್ ಹಾಗೂ ಬಾದಾಮಿ ವಿಕಾಸ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಎಸ್.ಎಸ್. ಹಲಕುರ್ಕಿ ಮತ್ತು ಬಾಗಲಕೋಟೆ ಬಸವಶ್ರೀ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಸಂಜಯ್ ಪಲ್ಲೆದ ಇವರು ಉಪಸ್ಥಿತರಿದ್ದರು.



**ಹಾವೇರಿ :** ದಿನಾಂಕ 01.10.2021 ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀಯತ ಬಿ.ಹೆಚ್. ಕೃಷ್ಣಾರೆಡ್ಡಿ ಇವರ ಸಮ್ಮುಖದಲ್ಲಿ ಪತ್ರೀಕಾಗೋಷ್ಠಿಯು ಜರುಗಿತು. ಪತ್ರೀಕಾಗೋಷ್ಠಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಹಾವೇರಿ ಜಿಲ್ಲೆಯ ಜಿಲ್ಲಾ ನಿರ್ದೇಶಕರಾದ ಶ್ರೀಯುತ ಎಂ.ಬಿ. ಕಲಾಲ ಹಾಗೂ ಚನ್ನೇಶ್ ಪತ್ತಿನ ಅಧ್ಯಕ್ಷರಾದ ಶ್ರೀಯುತ ಕೆ. ಶಿವಲಿಂಗಪ್ಪ, ಗಾಯತ್ರಿ ಸೌಹಾರ್ದ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಮತ್ತು ಟಾಸ್ಕ್ ಫೋರ್ಸ್‌ನ ಮಾನ್ಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ ಮತ್ತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರುಗಳು ಭಾಗವಹಿಸಿದ್ದರು.

## 13ನೇ ವಾರ್ಷಿಕ ಸಾಮಾನ್ಯ ಸಭೆ



**ಕೊಪ್ಪಳ :** ದಿನಾಂಕ 26.09.2021 ರಂದು ರವಿವಾರ ಬೆಳಗ್ಗೆ 11:30 ಘಂಟೆಗೆ ಶ್ರೀ ಬಸವೇಶ್ವರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ.,ಕೊಪ್ಪಳ ಇದರ 13ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಬಸವೇಶ್ವರ ವೃತ್ತ (ಗಂಜ್ ಸರ್ಕಲ್) ಹತ್ತಿರ ತಾಲೂಕಾ ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘ ಕೊಪ್ಪಳ ಸಭಾಂಗಣದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ವೀರೇಶ ಎನ್ ಹತ್ತಿ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಸಹಕಾರಿಯು ದಿನಾಂಕ: 31.3.2021 ಕ್ಕೆ 894 ಸದಸ್ಯರನ್ನು ಹೊಂದಿದ್ದು 121.53 ಲಕ್ಷದಷ್ಟು ಶೇರು ಬಂಡವಾಳವನ್ನು ಹೊಂದಿದೆ ಹಾಗೂ ಸಹಕಾರಿಯು 31.03.2021 ಕ್ಕೆ 45.70 ಲಕ್ಷದಷ್ಟು ಲಾಭ ಹೊಂದಿದ್ದು ಸಹಕಾರಿಯ ಸದಸ್ಯರಿಗೆ 20% ಡಿವಿಡೆಂಡ ವಿತರಿಸಲಾಯಿತು ಸಭೆಯಲ್ಲಿ ಸಹಕಾರಿಯ ಉಪಾಧ್ಯಕ್ಷರು ಹಾಗೂ ನಿರ್ದೇಶಕರು ಮತ್ತು ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಹನುಮರೆಡ್ಡಿ ಹಾಗೂ ಸಿಬ್ಬಂದಿ ವರ್ಗದವರು, ಪಿಗ್ಮೀ ಏಜೆಂಟರು ಮತ್ತು ಸಹಕಾರಿಯ ಸದಸ್ಯರು ಭಾಗವಹಿಸಿ ಯಶ್ವಸಿಗೊಳಿಸಿದರು.

## “ಮಾನವ ಸಂಪನ್ಮೂಲ ಅಭಿವೃದ್ಧಿ ತರಬೇತಿ ಕಾರ್ಯಕ್ರಮ”



**ಬೆಳಗಾವಿ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ ಬೆಳಗಾವಿ ಹಾಗೂ ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ಇವರುಗಳ ಸಂಯುಕ್ತ ಆಶ್ರಯದಲ್ಲಿ ಸಹಕಾರಿಯ ಸಿಬ್ಬಂದಿಗಳಿಗಾಗಿ “ಮಾನವ ಸಂಪನ್ಮೂಲ ಅಭಿವೃದ್ಧಿ ತರಬೇತಿ” ಕಾರ್ಯಕ್ರಮವನ್ನು ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಸಭಾ ಭವನ, ಚಿಕ್ಕೋಡಿಯಲ್ಲಿ ಆಯೋಜಿಸಲಾಗಿರುತ್ತದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಮಾನ್ಯ ಸಂಸ್ಥಾಪಕ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಇವರು ವಹಿಸಿದ್ದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಷಡಕ್ಷರಿ ಮೂಗೇರಿಯವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಟಾಸ್ಕ್ ಫೋರ್ಸ್‌ನ ಮಾನ್ಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಮತ್ತು ಸಂಪನ್ಮೂಲ ವ್ಯಕ್ತಿಗಳಾದ ಡಾ॥ ನಂದೀಶ ಹಿರೇಮಠ ಇವರು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲಾ ಗಣ್ಯ ಮಾನ್ಯರು ಸಹಕಾರಿಯ ಸ್ಮರಣ ಸಂಚಿಕೆಯನ್ನು ಅನಾವರಣಗೊಳಿಸಿದರು.

ನೂತನ ಹುದ್ದೆಗಳ ಪ್ರಭಾರ ವಹಿಸಿಕೊಂಡಿರುವ ಸಂಯುಕ್ತ ಸಹಕಾರಿಯ ಮಾನ್ಯ ಅಧಿಕಾರಿಗಳಾದ ಶ್ರೀ ಶ್ರೀಕಾಂತ್ ಬರುವೆ ಮತ್ತು ಶ್ರೀ ಬಸವರಾಜ ಹೊಂಗಲ ಇವರಿಗೆ ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಆಡಳಿತ ಮಂಡಲಿ ವತಿಯಿಂದ ಸನ್ಮಾನ ಕಾರ್ಯಕ್ರಮ ಜರುಗಿತು. ಸಂಪನ್ಮೂಲ ವ್ಯಕ್ತಿಗಳಾದ ಡಾ. ನಂದೀಶ ಹಿರೇಮಠ ಇವರಿಗೂ ಸಹಕಾರಿಯ ವತಿಯಿಂದ ಸನ್ಮಾನಿಸಲಾಯಿತು.

ಅದೇ ರೀತಿ ಇವತ್ತು ಪತ್ರಿಕಾ ವಿತರಕರ ದಿನಾಚರಣೆಯ ಅಂಗವಾಗಿ ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ವತಿಯಿಂದ ಪತ್ರಿಕಾ ವಿತರಕರಿಗೆ ಶುಭಾಶಯಗಳನ್ನು ಕೋರಲಾಯಿತು ಮತ್ತು ಸಹಕಾರಿಯ ವತಿಯಿಂದ ಪತ್ರಿಕಾ ವಿತರಕರಿಗೆ ಸನ್ಮಾನ ಕಾರ್ಯಕ್ರಮ ಜರುಗಿತು.

ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಹಾಗೂ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಇವರು ಮಾತನಾಡುತ್ತಾ ಪತ್ರಿಕಾ ವಿತರಕರಿಗೆ ಇರುವ ಕಾರ್ಯಕ್ಷಮತೆ, ಕಾರ್ಯಬದ್ಧತೆಗಳನ್ನು ಸಹಕಾರಿಯ ಸಿಬ್ಬಂದಿಗಳೂ ಸಹಿತ ಅವರಂತೆ ಕಾರ್ಯಕ್ಷಮತೆ, ಕಾರ್ಯಬದ್ಧತೆಗಳನ್ನು ಅಳವಡಿಸಿಕೊಂಡು ತಮ್ಮ ಕಾರ್ಯಕ್ಷೇತ್ರಗಳಲ್ಲಿ ಕೆಲಸ ನಿರ್ವಹಿಸಬೇಕು ಎಂದು ಹೇಳಿದರು. ತರಬೇತಿಯಲ್ಲಿ ಒಟ್ಟು 71 ಸಿಬ್ಬಂದಿಗಳು ಭಾಗವಹಿಸಿದ್ದರು.

ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಡಾ॥ ನಂದೀಶ ಹಿರೇಮಠ ಇವರು ಸಿಬ್ಬಂದಿಗಳಿಗೆ SLM (Successful life management), PBD (Professional Business Development), CRM (customer Relationship management) ಮತ್ತು TW&L (Team Work and Leadership) ವಿಷಯಗಳ ಕುರಿತು ಉಪನ್ಯಾಸ ನೀಡಿರುತ್ತಾರೆ.

## “ಸೌಹಾರ್ದ ಸಹಕಾರಿಗಳಿಗೆ ನಷ್ಟದಿಂದ ಹೊರಬರಲು ಇರುವ ಮಾರ್ಗೋಪಾಯಗಳು” ಮತ್ತು “ಲೆಕ್ಕಪರಿಶೋಧನೆಯನ್ನು ಕೈಗೊಳ್ಳದಿರಲು ಎದುರಿಸುತ್ತಿರುವ ಅಡತಡೆಗಳು ಮತ್ತು ಅವುಗಳ ಪರಿಹಾರೋಪಾಯಗಳ ಕುರಿತು ತರಬೇತಿ ಕಾರ್ಯಕ್ರಮ”



**ವಿಜಯಪುರ :** ದಿನಾಂಕ 17 ಸೆಪ್ಟೆಂಬರ್ 2021 ರಂದು ವಿಜಯಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಸೌಹಾರ್ದ ಸಹಕಾರಿಗಳಿಗೆ ನಷ್ಟದಿಂದ ಹೊರಬರಲು ಇರುವ ಮಾರ್ಗೋಪಾಯಗಳು” ಮತ್ತು “ಲೆಕ್ಕಪ–ರಿಶೋಧನೆಯನ್ನು ಕೈಗೊಳ್ಳದಿರಲು ಎದುರಿಸುತ್ತಿರುವ ಅಡತಡೆಗಳು ಮತ್ತು ಅವುಗಳ ಪರಿಹಾರೋಪಾಯಗಳು ವಿಷಯದ ಕುರಿತು ಶುಭಶ್ರೀ ಸಾಗರ ಹೋಟೆಲ್, ವಿಜಯಪುರದಲ್ಲಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ತರಬೇತಿಯಲ್ಲಿ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿದ್ರಾಮಪ್ಪ ಉಪ್ಪಿನ್ ಇವರು ವಹಿಸಿದ್ದರು. ಮುಖ್ಯ ಅತಿಥಿಗಳು ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಸುನೀಲ ಪತ್ತಾರ, ಮಾನ್ಯ ಸಹಾಯಕ ನಿರ್ದೇಶಕರು, ಲೆಕ್ಕಪರಿಶೋಧನಾ

ಇಲಾಖೆ, ಮುಧೋಳ. ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ(ಪ್ರ) ಹಾಗೂ ಶ್ರೀ ರಾಚಯ್ಯಾ ಹಿರೇಮಠ, ಸಹಾಯಕರು, ದಾವಾ ಪಂಚಾಯತ ನ್ಯಾಯಾಲಯ, ಜಿಲ್ಲಾ ಸಂಯೋಜಕರಾದ ಶ್ರೀ ಶಿವಕಾಂತ ಎನ್. ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 71 ಸೌಹಾರ್ದ ಸಹಕಾರಿಗಳಿಂದ 85 ಪ್ರತಿನಿಧಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಸುನೀಲ ಪತ್ತಾರ, ಇವರು ಹಾಗೂ ಶ್ರೀ ರಾಚಯ್ಯಾ ಹಿರೇಮಠ, ಇವರು ದಾವಾ ದಾಖಲಾತಿ ವಿಷಯದ ಕುರಿತು ಉಪನ್ಯಾಸ ನೀಡಿದರು.



**ಉತ್ತರ ಕನ್ನಡ :** ದಿನಾಂಕ 17 ಸೆಪ್ಟೆಂಬರ್ 2021 ರಂದು ಉತ್ತರ ಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಸೌಹಾರ್ದ ಸಹಕಾರಿಗಳಿಗೆ ನಷ್ಟದಿಂದ ಹೊರಬರಲು ಇರುವ ಮಾರ್ಗೋಪಾಯಗಳು" ಮತ್ತು "ಲೆಕ್ಕಪರಿಶೋಧನೆಯನ್ನು ಕೈಗೊಳ್ಳದಿರಲು ಎದುರಿಸುತ್ತಿರುವ ಅಡತಡೆಗಳು ಮತ್ತು ಅವುಗಳ ಪರಿಹಾರೋಪಾಯಗಳು ವಿಷಯದ ಕುರಿತು ಟಿ.ಎಂ.ಸಿ. ಸಭಾಭವನ, ಶಿರಸಿಯಲ್ಲಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ತರಬೇತಿಯಲ್ಲಿ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಸರಸ್ವತಿ ಎನ.ರವಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳು ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಮಂಜುನಾಥ ಶೆಟ್ಟಿ, ಮಾನ್ಯ ಸನ್ನದು ಲೆಕ್ಕಪರಿಶೋಧಕರು, ಶಿರಸಿ. ಮಾನ್ಯ ವ್ಯಸ್ಥಾಪಕರಾದ ಶ್ರೀ ಗಂಗಾರಾಮ ಕೋಳಾಪ್ಪೆ ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಸಂತೋಷಕುಮಾರ ಎಂ.ಜೆ. ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 43 ಸಹಕಾರಿ ಪ್ರತಿನಿಧಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಮಂಜುನಾಥ ಶೆಟ್ಟಿ ಇವರು ಉಪನ್ಯಾಸ ನೀಡಿದರು.



**ಬಾಗಲಕೋಟ :** ದಿನಾಂಕ 18 ಸೆಪ್ಟೆಂಬರ್ 2021 ರಂದು ಬಾಗಲಕೋಟ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಸೌಹಾರ್ದ ಸಹಕಾರಿಗಳಿಗೆ ನಷ್ಟದಿಂದ ಹೊರಬರಲು ಇರುವ ಮಾರ್ಗೋಪಾಯಗಳು" ಮತ್ತು "ಲೆಕ್ಕಪ–ರಿಶೋಧನೆಯನ್ನು ಕೈಗೊಳ್ಳದಿರಲು ಎದುರಿಸುತ್ತಿರುವ ಅಡತಡೆಗಳು ಮತ್ತು ಅವುಗಳ ಪರಿಹಾರೋಪಾಯಗಳು ವಿಷಯದ ಕುರಿತು ಬಾಗಲಕೋಟ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ನವನಗರ, ಬಾಗಲಕೋಟದಲ್ಲಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ತರಬೇತಿಯಲ್ಲಿ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಎನ್.ಪಾಟೀಲ ಇವರು ವಹಿಸಿದ್ದರು. ಮುಖ್ಯ ಅತಿಥಿಗಳು ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಸುನೀಲ ಪತ್ತಾರ, ಮಾನ್ಯ ಸಹಾಯಕ ನಿರ್ದೇಶಕರು, ಲೆಕ್ಕಪರಿಶೋಧನಾ ಇಲಾಖೆ, ಮುಧೋಳ. ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ(ಪ್ರ) ಹಾಗೂ ಶ್ರೀ ರಾಚಯ್ಯಾ ಹಿರೇಮಠ, ಸಹಾಯಕರು, ದಾವಾ ಪಂಚಾಯತ ನ್ಯಾಯಾಲಯ, ಜಿಲ್ಲಾ ಸಂಯೋಜಕರಾದ ಶ್ರೀ ನಾಗರಾಜ ಜಿ.ಹೆಚ್. ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 60 ಸೌಹಾರ್ದ ಸಹಕಾ–ರಿಗಳಿಂದ 70 ಪ್ರತಿನಿಧಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಸುನೀಲ ಪತ್ತಾರ, ಇವರು ಹಾಗೂ ಶ್ರೀ ರಾಚಯ್ಯಾ ಹಿರೇಮಠ, ಇವರು ದಾವಾ ದಾಖಲಾತಿ ವಿಷಯದ ಕುರಿತು ಉಪನ್ಯಾಸ ನೀಡಿದರು.

## ನಿರ್ದೇಶಕರ ಹಕ್ಕು ಮತ್ತು ಕರ್ತವ್ಯಗಳ ಕುರಿತು ತರಬೇತಿ ಕಾರ್ಯಕ್ರಮ



**ಹಾಸನ :** ದಿನಾಂಕ 02.09.2021 ರಂದು ಹಾಸನ ಜಿಲ್ಲಾ ಸೌಹಾರ್ದ ಸಹಕಾರಿಗಳ ನಿರ್ದೇಶಕರಿಗಾಗಿ "ನಿರ್ದೇಶಕರ ಹಕ್ಕು ಮತ್ತು ಕರ್ತವ್ಯಗಳು" ತರಬೇತಿ ಕಾರ್ಯಕ್ರಮದ ಉದ್ಘಾಟನೆ ಸಂದರ್ಭದಲ್ಲಿ ವೇದಿಕೆ ಮೇಲೆ ಶ್ರೀ ಕೆ.ಟಿ ಕುಮಾರಪ್ಪ, ಅಧ್ಯಕ್ಷರು, ಶ್ರೀ ವಿಘ್ನೇಶ್ವರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಹಾಸನ, ಶ್ರೀ ರಮೇಶ್, ಅಧ್ಯಕ್ಷರು, ಸಹನಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಹಾಸನ, ಶ್ರೀ ವೈ.ವಿ ಗುಂಡೂರಾವ್, ಸಂಪನ್ಮೂಲ ವ್ಯಕ್ತಿಗಳು, ಶ್ರೀ ಶಿವಕುಮಾರ ಬಿರಾದರ್, ಪ್ರಾಂತೀಯ ವ್ಯವಸ್ಥಾಪಕರು ಉಪಸ್ಥಿತರಿದ್ದರು.

# ಲೆಕ್ಕ ಪರಿಶೋಧನೆ ವರದಿಯ ಪೂರ್ವ ತಯಾರಿ ಹಾಗೂ ಅನುಪಾಲನ ವರದಿ ಸಲ್ಲಿಸುವ ವಿಷಯದ ಕುರಿತು ತರಬೇತಿ ಕಾರ್ಯಕ್ರಮ

## ಸಹಕಾರಿಗಳ ಆರೋಗ್ಯ ಸದೃಡತೆಗೆ ತಿಳಿಯಲು ಲೆಕ್ಕ ಪರಿಶೋಧನೆ ಅವಶ್ಯಕ- ಗುರುನಾಥ ಜ್ಯಾಂತೀಕರ.



**ಬೀದರ :** ಸಹಕಾರಿಗಳು ಪ್ರತಿ ವರ್ಷ ಮಾರ್ಚ ಮಾಹೆ ಪೂರ್ಣಗೊಂಡ ನಂತರ ಕಡ್ಡಾಯವಾಗಿ ಲೆಕ್ಕಪರಿಶೋಧನೆ ಕೈಗೊಂಡು ವರದಿಯನ್ನು ಮಹಾ ಸಭೆಯಲ್ಲಿ ಮಂಡಿಸಬೇಕು ಈ ಮೂಲಕ ಸಹಕಾರಿಯ ಆರೋಗ್ಯ ಸದೃಡತೆ ಕಂಡುಕೊಳ್ಳುವುದು ಅವಶ್ಯಕ ಎಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನಿರ್ದೇಶಕರಾದ ಗುರುನಾಥ ಜ್ಯಾಂತಿಕರ ತಿಳಿಸಿದರು. ನೌಬಾದ ಹತ್ತಿರದ ಶಾರದಾ ರೂಡಸೆಡ್ ನಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಪ್ರಾಂತೀಯ ಕಛೇರಿ ಕಲಬುರಗಿ ಹಾಗೂ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಬೀದರ ಇದರ ಸಂಯುಕ್ತ ಆಶ್ರೆಯದಲ್ಲಿ ಬೀದರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರ ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಆಯೋಜಿಸಿದ ಲೆಕ್ಕ ಪರಿಶೋಧನೆ ವರದಿಯ ಪೂರ್ವ ತಯಾರಿ ಹಾಗೂ ಅನುಪಾಲನ ವರದಿ ಸಲ್ಲಿಸುವ ವಿಷಯದ ಕುರಿತು ತರಬೇತಿಯನ್ನು ಉದ್ಘಾಟಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಸಹಕಾರ ಸಂಘಗಳ ಉಪ ನಿಬಂಧಕರಾದ ಸಿದ್ದನಗೌಡ ಎನ್.ನಿಲಪನೂರ ಮಾತನಾಡಿ ಸಹಕಾರಿಗಳು ಪ್ರತಿ ವರ್ಷ ಲೆಕ್ಕ ಪರಿಶೋಧನೆ ಮಾಡುವ ಜವಾಬ್ದಾರಿ ಆಡಳಿತ ಮಂಡಳಿಯದಾಗಿದೆ ಅಲ್ಲದೆ ಇದು ಮುಖ್ಯ ಕಾರ್ಯನಿರ್ವಾಹಕರ ಶಾಸನಬದ್ದ ಕರ್ತವ್ಯವಾಗಿದೆ ಎಂದರು.

ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಸಂಜೀವಕುಮಾರ ಪಾಟೀಲ ಮಾತನಾಡಿ ಜಿಲ್ಲೆಯಲ್ಲಿ ಸೌಹಾರ್ದ ಸಹಕಾರಿಗಳ ಚಳುವಳಿ ಗಟ್ಟಿಯಾಗಿದೆ ಸಹಕಾರಿಯ ಅಧಿಕಾರಿಗಳು ಸಹಕಾರ ಸಂಘಗಳ ಬೆಳವಣಿಗೆ ಮಾರ್ಗದರ್ಶನ ಮಾಡಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಒಕ್ಕೂಟದ ನಿರ್ದೇಶಕರಾದ ರಾಜಶೇಖರ ನಾಗಮುರ್ತಿ, ಶಿವಬಸಪ್ಪ ಚನ್ನಮಲ್ಲೆ, ಸಂಜಯ ಕ್ಯಾಸಾ, ಮುಖ್ಯ ಕಾರ್ಯನಿರ್ವಾಹಕ ಅಮೃತ ಹೊಸಮನಿ ಜಿಲ್ಲಾ ಸಂಯೋಜಕ ವೀರಶೆಟ್ಟಿ ಕಾಮಣ್ಣಾ, ರವಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರು ಇತರೆ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಸಂಯುಕ್ತ ಸಹಕಾರಿಯ ಶಾಸನಬದ್ಧ ಕಾರ್ಯಗಳು

## ಅಹನಾ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಹೊಸಪೇಟೆ,

ಸಹಕಾರಿಯು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ/ನಿಯಮಗಳು/ಉಪವಿಧಿಗಳು ಉಲ್ಲಂಘನೆ ಮಾಡಿರುವುದು ಹಾಗೂ ನಿರ್ದೇಶಕರುಗಳಿಗೆ ಸಂಬಂಧಿಸಿದ ಸಾಲಗಳಿಗೆ ಯಾವುದೇ ಭದ್ರತೆ ಪಡೆಯದೆ ಸಾಲಗಳು ನೀಡಿದ್ದು ಈ ಸಾಲಗಳು ಸುಸ್ತಿಯಾಗಿದ್ದು ಈ ಸಾಲಗಳಿಗೆ ಕಾನೂನಾತ್ಮಕವಾಗಿ ವಸೂಲಾತಿಗೆ ಯಾವುದೇ ಕ್ರಮವಿಟ್ಟಿರುವುದಿಲ್ಲ. ಇದಕ್ಕೆಲ್ಲ ಸಹಕಾರಿಯ ಆಡಳಿತ ಮಂಡಳಿ ಮತ್ತು ಮುಖ್ಯಕಾರ್ಯನಿರ್ವಾಹಕ ಜವಾಬ್ದಾರರಾಗಿರುವ ಹಿನ್ನಲೆಯಲ್ಲಿ ಸಹಕಾರಿಯ ಆಡಳಿತ ಮಂಡಳಿಯ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು, ನಿರ್ದೇಶಕರು ಮತ್ತು ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರು, ಇವರುಗಳ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 406, 415, 417, 419, 420, 465, 467, 470, 471, 477(ಎ) ಮತ್ತು ಸಹ ಕಲಂ 149 ಅನ್ವಯಿಸುವ ಇತರೆ ಕಲಂಗಳಡಿಯಲ್ಲಿ ಸೂಕ್ತ ಕಾನೂನು ಕ್ರಮ ಜರುಗಿಸುವುದರ ಮೂಲಕ ಸಹಕಾರಿಯಲ್ಲಿ ಠೇವಣಿ/ಹೂಡಿಕೆ ಮಾಡಿರುವ ಠೇವಣಿದಾರರಿಗೆ ನ್ಯಾಯ ಒದಗಿಸುವಂತೆ ಗ್ರಾಮೀಣ ಪೋಲೀಸ್ ಠಾಣೆ ಹೊಸಪೇಟೆ ಠಾಣೆಯಲ್ಲಿ ನೀಡಿರುವ ದೂರಿನನ್ವಯ ಗುನ್ನೆ ನಂ:–26/2021 ಪ್ರಕರಣ ದಾಖಲಾಗಿ ತನಿಖೆ ಜಾರಿಯಲ್ಲಿರುತ್ತದೆ.

ಮುಂದುವರೆದು ಕರ್ನಾಟಕ ಸೌಹಾರ್ದ ಸಹಕರಿ ಅಧಿನಿಯಮ ಕಲಂ 37ಎ ರಡಿ ಅಧಿಭಾರ ಪ್ರಕರಣವನ್ನು ದಾಖಲಿಸಲಾಗುವುದು ಎಂದು ಸಹಕಾರಿಯ ಹಾಲಿ ಆಡಳಿತ ಮಂಡಳಿಯ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು, ನಿರ್ದೇಶಕರು ಮತ್ತು ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರು, ಇವರುಗಳ ವಿರುದ್ಧ ಸಂಯುಕ್ತ ಸಹಕಾರಿಯಿಂದ ನೋಟಿಸ್ ನೀಡಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ಕಲಂ 37ಎ ರಡಿ ಸಹಕಾರಿಯ ಆಡಳಿತ ಮಂಡಲಿಯ 10 ಸದಸ್ಯರ ಒಟ್ಟು 19 ಸ್ಥಿರಾಸ್ತಿಗಳ ಮೇಲೆ ದಿನಾಂಕ 23.09.2021 ರಂದು ಸಹಕಾರಿಗಳ ಉಪ ನಿಬಂಧಕರು (ನಿ.441), ದಾವಾ ಪಂಚಾಯ್ತಿ ನ್ಯಾಯಾಲಯ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರಿಂದ ಆದೇಶ ಪೂರ್ವ ಜಪ್ತಿ ಆದೇಶವನ್ನು ಪಡೆಯಲಾಗಿರುತ್ತದೆ.

# ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರ ಹಾಗೂ ನಿರ್ದೇಶಕರುಗಳು ವಿವಿಧ ಸೌಹಾರ್ದ ಸಹಕಾರಿಗಳಿಗೆ ಭೇಟಿ



**ಹುಬ್ಬಳ್ಳಿ :** ಶ್ರೀ ಸಮರ್ಥ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಹುಬ್ಬಳ್ಳಿ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ ಭೇಟಿ ನೀಡಿ ಆಡಳಿತ ಮಂಡಳಿಯ ಸದಸ್ಯರೊಂದಿಗೆ ಸಹಕಾರಿಯ ಕಾರ್ಯಚಟುಚಟಿಕೆಯ ಕುರಿತು ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು.



**ರಾಮನಗರ :** ವೀರಶೈವ ಲಿಂಗಾಯಿತ ಸೌಹಾರ್ದ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಭೇಟಿ ನೀಡಿ ಆಡಳಿತ ಮಂಡಳಿಯ ಸದಸ್ಯರೊಂದಿಗೆ ಸಹಕಾರಿಯ ಕಾರ್ಯಚಟುಚಟಿಕೆಯ ಕುರಿತು ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು.



**ಬಳ್ಳಾರಿ :** ಬಳ್ಳಾರಿ ಜಿಲ್ಲೆಯ ಸಹಕಾರ ಇಲಾಖೆಗೆ ನೂತನವಾಗಿ ಉಪನಿಬಂಧಕರಾಗಿ ಬಂದಿರುವ ಶ್ರೀ ಪುಂಡಲೀಕ ಎಲ್ ಸಾದುರೆ ಹಾಗೂ ಸಹಾಯಕ ನಿಬಂಧಕರಾದ ಶ್ರೀ ವೀರಭದ್ರರವರನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ವಿಶ್ವನಾಥ. ಚ. ಹಿರೇಮಠರವರು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲೆಯ ಸಹಕಾರಿಗಳ ಅಧ್ಯಕ್ಷರುಗಳು ಹಾಗೂ ಜಿಲ್ಲಾ ಸಂಯೋಜಕರು ಭಾಗವಹಿಸಿದ್ದರು.



**ಹುಬ್ಬಳ್ಳಿ :** ಹೂಗಾರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಹುಬ್ಬಳ್ಳಿ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಭೇಟಿ ನೀಡಿ ಆಡಳಿತ ಮಂಡಳಿಯ ಸದಸ್ಯರೊಂದಿಗೆ ಸಹಕಾರಿಯ ಕಾರ್ಯಚಟುಚಟಿಕೆಯ ಕುರಿತು ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು.



**ಪಾವಗಡ :** ಬೆಳ್ಳಿಬಟ್ಲು ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಪಾವಗಡ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ ಭೇಟಿ ನೀಡಿ ಆಡಳಿತ ಮಂಡಳಿಯ ಸದಸ್ಯರೊಂದಿಗೆ ಸಹಕಾರಿಯ ಕಾರ್ಯಚಟುಚಟಿಕೆಯ ಕುರಿತು ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಪಾವಗಡ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ ಮುಖ್ಯಕಾರ್ಯನಿರ್ವಾಹಕರು ಸಭೆಯಲ್ಲಿ ಉಪಸ್ಥಿತರಿದರು.



**ಹೂವಿನಹಡಗಲಿ :** ನಿತ್ಯಶ್ರೀ ಸೌಹಾರ್ದ ಕ್ರೆಡಿಟ್ ಕೋ–ಆಪರೇಟೀವ್ ಲಿ. ಸಹಕಾರಿಗೆ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ವಿಶ್ವನಾಥ ಚ.ಹಿರೇಮಠ ರವರು ಭೇಟಿ ನೀಡಿ ಆಡಳಿತ ಮಂಡಳಿಯ ಸದಸ್ಯರೊಂದಿಗೆ ಸಹಕಾರಿಯ ಕಾರ್ಯಚಟುಚಟಿಕೆಯ ಕುರಿತು ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು.

# ಸಂಯುಕ್ತ ಸಹಕಾರಿ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳಲ್ಲಿ ಗಾಂಧಿ ಜಯಂತಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ದಿನಾಚರಣೆ

ಗಾಂಧಿ ಜಯಂತಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ದಿನಾಚರಣೆ ಅಂಗವಾಗಿ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಬೆಂಗಳೂರು ವಿಭಾಗ ಹಾಗೂ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ ಮತ್ತು ಬೆಳಗಾವಿ ವಿಭಾಗ, ಕಲಬುರಗಿ ವಿಭಾಗ, ಮೈಸೂರು ವಿಭಾಗದಲ್ಲಿ ಹಾಗೂ ಜಿಲ್ಲಾ ಸಂಪರ್ಕ ಕಛೇರಿಗಳಲ್ಲಿ ಆಚರಿಸಲಾಯಿತು.



ಕೇಂದ್ರ ಕಛೇರಿ



ಕಲಬುರಗಿ ಪ್ರಾಂತೀಯ ಕಛೇರಿ



ಮೈಸೂರು ಪ್ರಾಂತೀಯ ಕಛೇರಿ



ಬೆಳಗಾವಿ ಪ್ರಾಂತೀಯ ಕಛೇರಿ



ಬೀದರ ಜಿಲ್ಲಾ ಸಂಪರ್ಕ ಕಛೇರಿ



ಸೌಹಾರ್ದ ದಾವಾ ಪಂಚಾಯತಿ ನ್ಯಾಯಾಲಯ



ಕೋಲಾರ ಜಿಲ್ಲಾ ಸಂಪರ್ಕ ಕಛೇರಿ

## ಆಯ್ಕೆ

**ಶಿವಮೊಗ್ಗ :** ದಿನಾಂಕ 15.09.2021 ರಂದು ಮಲೆನಾಡು ಅಡಿಕೆ ಮಾರಾಟ ಸಹಕಾರ ಸಂಘ ನಿ, (ಮ್ಯಾಮ್ಕೋಸ್) ಶಿವಮೊಗ್ಗ, ಇದರ ಉಪಾಧ್ಯಕ್ಷರಾಗಿ ಆಯ್ಕೆಯಾದ ಶ್ರೀ ಹೆಚ್.ಎಸ್. ಮಹೇಶ್ ರವರನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಪ್ರಸನ್ನ ಕುಮಾರ್ ರವರು ಮತ್ತು ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರು ಹಾಗೂ ಸಹಕಾರ ಭಾರತಿಯ ರಾಜ್ಯಾಧ್ಯಕ್ಷರಾದ ಶ್ರೀ ಸತೀಶ್ಚಂದ್ರ ರವರು ಸನ್ಮಾನಿಸಿ ಅಭಿನಂದಿಸಿದರು.

# ಸಹಕಾರ ಹಾಗೂ ಬ್ಯಾಂಕಿಂಗ್ ಮೆನೆಜಮೆಂಟ್ ಡಿಪ್ಲೋಮಾ ಕೋರ್ಸ್‌ನ ನಾಲ್ಕನೇ ತಂಡದ ಪ್ರವೇಶಕ್ಕೆ ನೋಂದಾವಣಿ

## Admission Notice for the Fourth Batch Diploma in Cooperation and Banking Management Course.

**ಆತ್ಮೀಯ ಸಹಕಾರಿ ಬಂಧುಗಳೇ,**

ಕರ್ನಾಟಕ ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ತನ್ನದೇ ಆದ ವೈಶಿಷ್ಟತೆಯೊಂದಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಕಾಯ್ದೆ 1997ರ ಕಾಯ್ದೆಯಡಿಯಲ್ಲಿ ಸಂಯುಕ್ತ ಸಹಕಾರಿ ನೇತೃತ್ವದಲ್ಲಿ ರಾಜ್ಯದ 5367 ಸೌಹಾರ್ದ ಸಹಕಾರಿಗಳ ನೊಂದಣಿಯಾಗಿ ಕಾರ್ಯನಿರ್ವಹಿಸುವುದರೊಂದಿಗೆ ಈ ಸೌಹಾರ್ದ ಸಹಕಾರಿ ಕ್ಷೇತ್ರದ ಘನತೆ ಹಾಗೂ ಗೌರವವನ್ನು ಹೆಚ್ಚಿಸುತ್ತಿರುವುದು ನಮ್ಮೆಲ್ಲರಿಗೂ ಸಂತೋಷದ ವಿಷಯವಾಗಿದೆ. ಅನೇಕ ಸವಾಲುಗಳನ್ನು ಎದುರುಸುತ್ತ ನಮ್ಮ ಗುಣಮಟ್ಟವನ್ನು ಕಾಯ್ದುಕೊಳ್ಳುವುದರಲ್ಲಿ ಸೌಹಾರ್ದ ಸಹಕಾರಿಗಳ ನಿರಂತರ ಪರಿಶ್ರಮ ಶ್ಲಾಘನೀಯ.

ರಾಜ್ಯದ ಸೌಹಾರ್ದ ಸಹಕಾರಿಗಳ ಗುಣಮಟ್ಟ ಉತ್ತಮ ಪಡಿಸುವುದಕ್ಕಾಗಿ ಸಂಯುಕ್ತ ಸಹಕಾರಿಯ 17ನೇ ವಾರ್ಷಿಕ ಸಾಮಾನ್ಯ ಸಭೆಯ ಅನುಮೋದನೆಯಂತೆ 6 ತಿಂಗಳ "ಸಹಕಾರ ಬ್ಯಾಂಕಿಂಗ್ ಮತ್ತು ಮೆನೆಜ್‌ಮೆಂಟ್" ಕೋರ್ಸ್ 4ನೇ ತಂಡ 1ನೇ ಜನವರಿ 2022ರಿಂದ ಪ್ರಾರಂಭವಾಗುತ್ತದೆ.

ತಮ್ಮ ಸಹಕಾರಿಯ ಸಿಬ್ಬಂದಿಯವರು ತಮ್ಮ ತಮ್ಮ ಸಹಕಾರಿಯಲ್ಲಿ / ಬ್ಯಾಂಕಿಂಗ್‌ನಲ್ಲಿದ್ದುಕೊಂಡೆ ಈ 6 ತಿಂಗಳ ಕೋರ್ಸ್‌ನ್ನು ಮಾಡಬಹುದಾಗಿದೆ. ಈ ಕೋರ್ಸ್ ಸಹಕಾರಿ ಕ್ಷೇತ್ರ ಮತ್ತು ಬ್ಯಾಂಕಿಂಗ್ ಮೆನೆಜಮೆಂಟ್‌ಗೆ ಸಂಬಂದಿಸಿದ ವಿಷಯಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದಾಗಿದೆ. ಪ್ರಥಮ ತಂಡದಲ್ಲಿ 181 ಅಭ್ಯರ್ಥಿಗಳು, 2ನೇ ತಂಡದಲ್ಲಿ 272 ಅಭ್ಯರ್ಥಿಗಳು ಹಾಗೂ 3ನೇ ತಂಡದಲ್ಲಿ 404 ಅಭ್ಯರ್ಥಿಗಳು ಪ್ರವೇಶ ಪಡೆದು ಕೋರ್ಸ್‌ನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ. ಕೋರ್ಸಿನ ಬಗ್ಗೆ ತಮ್ಮ ಉತ್ತಮ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ.

1ನೇ ಜನವರಿ 2022 ರಿಂದ ಪ್ರಾರಂಭವಾಗಲಿರುವ 4ನೇ ತಂಡದ ಕೋರ್ಸಿಗೆ ನಿಮ್ಮ ಸೌಹಾರ್ದ ಸಹಕಾರಿ/ಸೌಹಾರ್ದ ಸಹಕಾರಿ ಬ್ಯಾಂಕಿನಿಂದ ಈ ಕೋರ್ಸ್‌ಗೆ ಸಿಬ್ಬಂದಿಗಳನ್ನು ನೊಂದಾಯಿಸಲು ಕೋರುತ್ತೇವೆ.

**ಕೋರ್ಸ್ ಶುಲ್ಕ :** ರೂ. 5000/– (ಪ್ರವೇಶ ಹಾಗೂ ವ್ಯವಸ್ಥಾಪನಾ ಶುಲ್ಕ ರೂ 2000/– ಕೋರ್ಸ ಮೆಟಿರಿಯಲ್ ರೂ 2000/– ಪರೀಕ್ಷಾ ಫೀ 1000/) ಅಧ್ಯಯನ ಸಾಹಿತ್ಯ ಕಲಿಕೆ ಹಾಗೂ ಪರೀಕ್ಷೆಗಳನ್ನು ಕನ್ನಡ ಅಥವಾ ಇಂಗ್ಲಿಷ್ ಭಾಷೆಯ ಆಯ್ಕೆಗೆ ಅವಕಾಶವಿರುತ್ತದೆ.

2 ದಿನಗಳ 3 ಸಂಪರ್ಕ ವರ್ಗಗಳ ವೆಚ್ಚ ತಲಾ ರೂ 500 ಗಳಂತೆ ಒಟ್ಟು ರೂ 1500/– ಸಂಪರ್ಕ ವರ್ಗಗಳನ್ನು ಅಭ್ಯರ್ಥಿಗಳ ಸಂಖ್ಯೆಯ ಆಧಾರದ ಮೇಲೆ ಬೆಂಗಳೂರು, ಮೈಸೂರು, ಬೆಳಗಾವಿ ಹಾಗೂ ಕಲಬುರಗಿ ವಿಭಾಗೀಯ ಕೇಂದ್ರಗಳಲ್ಲಿ ಮತ್ತು ಸಂಯುಕ್ತ ಸಹಕಾರಿಯು ನಿಗದಿಪಡಿಸುವ ರಾಜ್ಯದ ಇತರೆ ಕೇಂದ್ರಗಳಲ್ಲಿಯೂ ಸಹ ನಡೆಸಲಾಗುವುದು. ಸಂಪರ್ಕ ವರ್ಗ ಸಮಯದಲ್ಲಿ ಅಭ್ಯರ್ಥಿಗಳ ಊಟ, ವಸತಿ ವ್ಯವಸ್ಥೆಯನ್ನು ಮಾಡಲಾಗುವುದು. 3 ಸಂಪರ್ಕ ವರ್ಗ ವೆಚ್ಚ ರೂ 1500/– ಪ್ರತ್ಯೇಕ. **ಒಟ್ಟು ಕೋರ್ಸ್‌ನ ಶುಲ್ಕ ರೂ. 7670/– (6500 + 18% ಜಿಎಸ್‌ಟಿ)**

**ಡಿಸೆಂಬರ 20 ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನವಾಗಿರುತ್ತದೆ.**

ಪ್ರವೇಶ ಪತ್ರ ಹಾಗೂ ಕೋರ್ಸ ವಿವರಣಾ ಪತ್ರ ಪಡೆಯಲು ಸ್ವವಿವರ ಹಾಗೂ ರೂ. 100 ಗಳನ್ನು ಪೋಸ್ಟಲ್ ಆರ್ಡರ್‌ನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿ., ಬೆಂಗಳೂರು ಇವರ ಹೆಸರಿಗೆ ಪಡೆದು ಕೇಂದ್ರ ಕಛೇರಿಗೆ ಕಳುಹಿಸುವುದು.

ಹೆಚ್ಚಿನ ವಿವರಗಳಿಗೆ www.souharda.coop ಹಾಗೂ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳನ್ನು ಹಾಗೂ ಜಿಲ್ಲಾ ಸಂಯೋಜಕರನ್ನು ಸಂಪರ್ಕಿಸಬಹುದಾಗಿದೆ.

ಕೇಂದ್ರ ಕಛೇರಿ : 080–23378375–80, 23474408, 23573291, ಬೆಂಗಳೂರು ಪ್ರಾಂತೀಯ ಕಛೇರಿ: 080–23525546, ಮೈಸೂರು ಪ್ರಾಂತೀಯ ಕಛೇರಿ: 0821–2332299, ಬೆಳಗಾವಿ ಪ್ರಾಂತೀಯ ಕಛೇರಿ: 0831–2401551, ಕಲಬುರಗಿ ಪ್ರಾಂತೀಯ ಕಛೇರಿ: 08472–270222.

ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿಯೇ ಈ ಡಿಪ್ಲೋಮಾ ಕೋರ್ಸ್ ಪ್ರಾರಂಭಿಸಿದೆ. ಆದ್ದರಿಂದ ಸೌಹಾರ್ದ ಸಹಕಾರಿಗಳು ಸೌಹಾರ್ದ ಸಹಕಾರ ಕಾಯ್ದೆ ಇತ್ತೀಚಿನ ತಿದ್ದುಪಡಿಯಂತೆ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರು ತಮ್ಮ ಹುದ್ದೆಯಿಂದ ಮುಂಬಡ್ತಿ ಪಡೆಯಲು ಸಂಯುಕ್ತ ಸಹಕಾರಿಯ ನಿಗದಿತ ಕೋರ್ಸ್‌ಗಳನ್ನು ಮಾಡುವುದು ಕಡ್ಡಾಯವಾಗಿರುತ್ತದೆ. ಇದರ ಪೂರ್ಣ ಪ್ರಯೋಜನವನ್ನು ಪಡೆಯಲು ಕೋರಿದೆ.

**ವಂದನೆಗಳೊಂದಿಗೆ,**

ಸಹಿ/–

(ಶರಣಗೌಡ ಜಿ. ಪಾಟೀಲ)

**ವ್ಯವಸ್ಥಾಪಕ ನಿರ್ದೇಶಕರು**

# ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ 2021
## (2021ರ ಕರ್ನಾಟಕ ಅಧಿನಿಯಮ ಸಂಖ್ಯೆ 36)

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – ೪ ಎ<br>Part – IV A | ಬೆಂಗಳೂರು, ಗುರುವಾರ, ೦೭, ಅಕ್ಟೋಬರ್, ೨೦೨೧ (ಆಶ್ವಯುಜ, ೧೫, ಶಕವರ್ಷ, ೧೯೪೩)<br>BENGALURU, THURSDAY, 07, OCTOBER, 2021 (ASHWAYUJA , 15, SHAKAVARSHA, 1943) | ನಂ. ೮೨೫<br>No. 825 |

**ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ: ಸಂವ್ಯಶಾಇ 19 ಶಾಸನ 2021**

ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ, 2021 ಇದಕ್ಕೆ 2021ರ ಅಕ್ಟೋಬರ್ ತಿಂಗಳ 5ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2021 ರ ಕರ್ನಾಟಕ ಅಧಿನಿಯಮ ಸಂಖ್ಯೆ: 35 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ IV) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

**2021 ರ ಕರ್ನಾಟಕ ಅಧಿನಿಯಮ ಸಂಖ್ಯೆ: 35**

(2021ರ ಅಕ್ಟೋಬರ್ ತಿಂಗಳ 7ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ, 2021**

(2021ರ ಅಕ್ಟೋಬರ್ ತಿಂಗಳ 5ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ನ್ನು (2000ದ ಕರ್ನಾಟಕ ಅಧಿನಿಯಮ ಸಂಖ್ಯೆ 17) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ, 2021 ಎಂದು ಕರೆಯತಕ್ಕದ್ದು.

(2) ಇದು, ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 2ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ (2000ರ ಕರ್ನಾಟಕ ಅಧಿನಿಯಮ 17) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ,-

(i) (ಎ1) ಉಪಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎ1) "ಕಾರ್ಯಕ್ಷೇತ್ರ" ಎಂದರೆ ಸಹಕಾರಿಗಳ ನೋಂದಾಯಿತ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅಧಿಕಾರ ವ್ಯಾಪ್ತಿಯ ಪ್ರದೇಶ."

(ii) (ಇ) ಉಪಖಂಡದ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಮತ್ತು ಯಾವಾಗಲೂ ಪ್ರತಿಯೋಜಿಸಲಾಗಿದೆ ಎಂದು ಭಾವಿಸತಕ್ಕದ್ದು, ಎಂದರೆ:-

ಇ) "ಸಹಕಾರಿ" ಎಂದರೆ 5ನೇ ಪ್ರಕರಣದ ಅಡಿಯಲ್ಲಿ ನೋಂದಾಯಿಸಿದ ಅಥವಾ ನೋಂದಾಯಿಸಲಾಗಿದೆ ಎಂದು ಭಾವಿಸಲಾದ ಹಾಗೂ ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949ರ (1949ರ ಕೇಂದ್ರ ಅಧಿನಿಯಮ 10), ಭಾರತ ರಿಸರ್ವ್ ಬ್ಯಾಂಕ್ ಅಧಿನಿಯಮ, 1934ರ (1934ರ ಕೇಂದ್ರ ಅಧಿನಿಯಮ 2), ಠೇವಣಿ ವಿಮಾ ಮತ್ತು ಸಾಲ ಖಾತರಿ ನಿಗಮ ಅಧಿನಿಯಮ, 1961ರ (1961ರ ಕೇಂದ್ರ ಅಧಿನಿಯಮ 47), ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಅಧಿನಿಯಮ, 1981 (1981ರ ಕೇಂದ್ರ ಅಧಿನಿಯಮ 67), ಆದಾಯ ತೆರಿಗೆ ಅಧಿನಿಯಮ, 1961 (1961ರ ಕೇಂದ್ರ ಅಧಿನಿಯಮ 43), ಕರ್ನಾಟಕ ವೃತ್ತಿಗಳ, ಕಸುಬುಗಳ, ಆ ಜೀವಿಕೆಗಳ ಮತ್ತು ಉದ್ಯೋಗಗಳ ಮೇಲಿನ ತೆರಿಗೆ ಅಧಿನಿಯಮ, 1976ರ (1976ರ ಕರ್ನಾಟಕ ಅಧಿನಿಯಮ 35), ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕೇಂದ್ರ ಅಧಿನಿಯಮ 12), ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ಅಧಿನಿಯಮ, 2019ರ (2019ರ ಕೇಂದ್ರ ಅಧಿನಿಯಮ 21) ಉದ್ದೇಶಗಳಿಗಾಗಿ 'ಸೌಹಾರ್ದ ಸಹಕಾರಿ ಸಂಘ'ಎಂಬ ಹೆಸರಿನಲ್ಲಿ ಬ್ಯಾಂಕಿಂಗ್ ವ್ಯವಹಾರಗಳನ್ನು ನಡೆಸುವ ಸಹಕಾರಿ ಬ್ಯಾಂಕನ್ನು ಒಳಗೊಳ್ಳುವ ಸೌಹಾರ್ದ ಸಹಕಾರಿ ಸಂಘ ಮತ್ತು ಎಲ್ಲಾ ಕೇಂದ್ರ ಮತ್ತು ರಾಜ್ಯ ಶಾಸನಗಳಲ್ಲಿ ನಮೂದಿಸಿರುವ ಎಲ್ಲಾ ಉದ್ದೇಶಗಳಿಗಾಗಿ ಅದನ್ನು ಸಹಕಾರಿ ಸಂಘವೆಂದು ಭಾವಿಸತಕ್ಕದ್ದು."

**3. 5ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮ 5ನೇ ಪ್ರಕರಣದ (3)ನೇ ಉಪ ಪ್ರಕರಣದಲ್ಲಿ "ಉಪ ವಿಧಿಗಳ ಒಂದು ಪ್ರತಿಯೊಂದಿಗೆ ಸಂಯುಕ್ತ ಸಹಕಾರಿಗೆ ಸಹ ಕಳುಹಿಸತಕ್ಕದ್ದು" ಎಂಬ ಪದಗಳ ಬದಲಿಗೆ "ಉಪ ವಿಧಿಗಳ ಒಂದು ಪ್ರತಿಯೊಂದಿಗೆ ಮತ್ತು ಪ್ರವರ್ತಕರ ವಿವರಗಳನ್ನೂ ಸಹ ನೋಂದಣಿಯ ದಿನಾಂಕದಿಂದ ಅರವತ್ತು ದಿನಗಳ ಅವಧಿಯೊಳಗಾಗಿ ಸಂಯುಕ್ತ ಸಹಕಾರಿಗೆ ಕಳುಹಿಸತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**4. 17ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 17ನೇ ಪ್ರಕರಣದ ಪ್ರಾರಂಭದಲ್ಲಿ "ಯಾವುದೇ ಇತರ ಹಣಕಾಸು ಸಂಸ್ಥೆಗಳು ಮತ್ತು ಸಂಘಗಳಿಂದ ಠೇವಣಿಗಳನ್ನು ಹೊರತುಪಡಿಸಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

**5. 17ಎ ಹೊಸ ಪ್ರಕರಣದ ಸೇರ್ಪಡೆ.-** ಮೂಲ ಅಧಿನಿಯಮದ 17ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು ಎಂದರೆ:-

"**17-ಎ. ಷೇರುಗಳನ್ನು ಹೊಂದುವುದರ ಮೇಲಿನ ನಿರ್ಬಂಧ.-** ಯಾವುದೇ ಸಹಕಾರಿಯಲ್ಲಿ, ಯಾರೇ ಸದಸ್ಯನು ಸಹಕಾರಿಯ ಒಟ್ಟು ಷೇರು ಬಂಡವಾಳದ ಶೇಕಡ 5ರಷ್ಟನ್ನು ಮೀರಿ ನಿಯಮಿಸಬಹುದಾದಂಥ ಅದರ ಭಾಗಕ್ಕಿಂತ ಹೆಚ್ಚಿಗೆ ಷೇರುಗಳನ್ನು ಹೊಂದಿರತಕ್ಕದ್ದಲ್ಲ."

**6. 20ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 20ನೇ ಪ್ರಕರಣದಲ್ಲಿ,-

(i) (1)ನೇ ಉಪ ಪ್ರಕರಣದಲ್ಲಿ " ಸೇರಿಸಿಕೊಳ್ಳತಕ್ಕದ್ದಲ್ಲ" ಎಂಬ ಪದದ ತರುವಾಯ "ಅಥವಾ ಮುಂದುವರೆಸತಕ್ಕದ್ದಲ್ಲ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) (ಸಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಡಿ) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಮೊತ್ತ ಮತ್ತು ಅವಧಿಯನ್ನು ಮೀರಿ, ಸಹಕಾರಿಗೆ ಸಂದಾಯ ಮಾಡಬೇಕಾದ ಯಾವುದೇ ಪಾವತಿಗೆ ಸಂಬಂಧಿಸಿದಂತೆ ಸುಸ್ತಿದಾರನಾಗಿದ್ದಲ್ಲಿ;

(ಇ) ದಿವಾಳಿ ಎಂಬುದಾಗಿ ನ್ಯಾಯ ನಿರ್ಣಯಿಸಿದ್ದಲ್ಲಿ ಅಥವಾ ಅವಿಮುಕ್ತ ದಿವಾಳಿಯಾಗಿದ್ದಲ್ಲಿ; ಅಥವಾ

(ಎಫ್) ನೈತಿಕ ಅಧ:ಪತನವನ್ನು ಒಳಗೊಳ್ಳುವ ಯಾವುದೇ ಅಪರಾಧದಲ್ಲಿ ಶಿಕ್ಷೆಗೆ ಗುರಿಯಾಗಿದ್ದರೆ, ಅಂಥ ಶಿಕ್ಷೆಯನ್ನು ಹಿಂಪಡೆಯದಿದ್ದರೆ ಅಥವಾ ಅಪರಾಧವನ್ನು ಮನ್ನಿಸದಿದ್ದರೆ ಮತ್ತು ಶಿಕ್ಷೆಯ ದಿನಾಂಕದಿಂದ ಐದು ವರ್ಷಗಳ ಅವಧಿಯು ಪೂರ್ಣಗೊಳ್ಳದಿದ್ದರೆ; ಅಥವಾ

(ಜಿ) ಸಹಕಾರಿಯ ಅಥವಾ ಅದರ ಹಣಕಾಸು ಬ್ಯಾಂಕಿನ ಅಥವಾ ಅದರ ಒಕ್ಕೂಟದ ಅಥವಾ ಅದರ ಸಂಯುಕ್ತ ಸಹಕಾರಿಯ ವೇತನ ಪಡೆಯುವ ಉದ್ಯೋಗಿಯಾಗಿದ್ದರೆ;"

(iii) (2)ನೇ ಉಪ ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು.

**7. 20 ಬಿ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 20ಬಿ ಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

" **20ಬಿ. ಸದಸ್ಯರ ಮತದಾನದ ಹಕ್ಕು.-** ಯಾರೇ ಸದಸ್ಯನು,-

(ಎ) ಸಹಕಾರಿಯ ಮಹಾಸಭೆಯ ದಿನಾಂಕದಂದು ಅಥವಾ ಸಂದರ್ಭಾನುಸಾರ ಚುನಾವಣಾ ದಿನಾಂಕದಂದು ಸದಸ್ಯನಾಗಿ ಒಂದು ವರ್ಷ ಪೂರ್ಣಗೊಳ್ಳದಿದ್ದರೆ;

(ಬಿ) ಸಹಕಾರಿಯ ಯಾವುದೇ ಬಾಕಿಗಳಿಗಾಗಿ ಸುಸ್ತಿದಾರನಾಗಿದ್ದರೆ;

(ಸಿ) (i) ಹಿಂದಿನ ಐದು ವಾರ್ಷಿಕ ಮಹಾಸಭೆಗಳ ಪೈಕಿ ಯಾವುದೇ ಎರಡು ವಾರ್ಷಿಕ ಮಹಾಸಭೆಗಳಲ್ಲಿ ಹಾಜರಾಗುವ ಮೂಲಕ;

(ii) ಹಿಂದಿನ ಐದು ಸಹಕಾರಿ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರಿ ವರ್ಷಗಳಿಗಾಗಿ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಸಹಕಾರಿಯು ನೀಡಿದ ಅಂಥ ಕನಿಷ್ಠ ಸೇವೆಗಳು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳುವ ಮೂಲಕ;

- ವ್ಯವ್ಯವಸ್ಥಾಪನೆಯಲ್ಲಿ ಭಾಗವಹಿಸದಿದ್ದರೆ,

- ಸಹಕಾರಿಯ ಮಹಾಸಭೆಯಲ್ಲಿ ಭಾಗವಹಿಸಲು ಮತ್ತು ಮಂಡಳಿಯ ಚುನಾವಣೆಯಲ್ಲಿ ಮತದಾನ ಮಾಡಲು ಒಂದು ವರ್ಷದವರೆಗೆ ಅನರ್ಹಗೊಳಿಸತಕ್ಕದ್ದು:

ಪರಂತು ಸಹಕಾರಿಯು ಹೊಸದಾಗಿ ನೋಂದಣಿಗೊಂಡ ತರುವಾಯ ಕೂಡಲೇ ನಡೆಯುವ ಸಹಕಾರಿಯ ಆಡಳಿತ ಮಂಡಳಿಯ ಮೊದಲ ಚುನಾವಣೆಯಲ್ಲಿ ಭಾಗವಹಿಸುವ ಸದಸ್ಯನಿಗೆ ಮತ್ತು ಪ್ರಥಮ ಮಹಾಸಭೆಯಲ್ಲಿ ಭಾಗವಹಿಸುವ ಸದಸ್ಯನಿಗೆ (ಎ) ಖಂಡದಲ್ಲಿನ ನಿರ್ಬಂಧವು ಅನ್ವಯವಾಗತಕ್ಕದ್ದಲ್ಲ.

**8. 24ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 24ನೇ ಪ್ರಕರಣದ (2)ನೇ ಉಪ ಪ್ರಕರಣದಲ್ಲಿನ ಪರಂತುಕದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಪರಂತು ಸಂಯುಕ್ತ ಸಹಕಾರಿಯ ನಿರ್ದೇಶಕನ ಅಧಿಕಾರಾವಧಿಯು, ಆತನು ಪ್ರತಿನಿಧಿಸುವ ಸಹಕಾರಿಯ ನಿರ್ದೇಶಕನಾಗಿರುವುದು ನಿಂತು ಹೋದಲ್ಲಿ, ಮುಕ್ತಾಯಗೊಳ್ಳತಕ್ಕದ್ದು."

**9. 25ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 25ನೇ ಪ್ರಕರಣದಲ್ಲಿ,-

(i) (1)ನೇ ಉಪ ಪ್ರಕರಣದ (ಇ) ಖಂಡದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಇ) ಸಹಕಾರಿಯ ಅಥವಾ ಯಾವುದೇ ಇತರ ಸಹಕಾರಿಯ ಅಥವಾ ಸಹಕಾರ ಸಂಘದಲ್ಲಿ ತಾನು ತೆಗೆದುಕೊಂಡ ಸಾಲದ ಯಾವುದೇ ಬಾಕಿಗಳನ್ನು ಸಂದಾಯ ಮಾಡಲು ತಪ್ಪಿದರೆ ಅಥವಾ ಸಾಲದ ನಿರಂತರ ಮೂರು ಕಂತುಗಳನ್ನು ಮರುಸಂದಾಯ ಮಾಡಲು ತಪ್ಪಿರುವಂಥ ಸಾಲಗಾರನೊಬ್ಬನಿಗೆ ಜಾಮೀನುದಾರನಾಗಿದ್ದರೆ;

(ii) (2)ನೇ ಉಪಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2) ಈ ಕೆಳಗಿನವುಗಳಿಗೆ ಜವಾಬ್ದಾರಿಯಾಗುವ ಯಾರೇ ಅಂಥ ನಿರ್ದೇಶಕರು ಸಹಕಾರಿಯ ಅಥವಾ ಸಹಕಾರ ಸಂಘದ ನಿರ್ದೇಶಕರ ಪದಾವಧಿಯಲ್ಲಿರುವಾಗ,-

(ಎ) ಯಾವುದೇ ಸಮಯದಲ್ಲಿ ಆತನು ಸದಸ್ಯನಾಗಿ ಮತನೀಡುವ ಅಥವಾ ಸದಸ್ಯನಾಗಿ ಮುಂದುವರಿಯುವ ಹಕ್ಕನ್ನು ಕಳೆದುಕೊಂಡಿದ್ದರೆ; ಅಥವಾ

(ಎ-1) ಸಹಕಾರ ವರ್ಷ ಮುಕ್ತಾಯವಾದ ಆರು ತಿಂಗಳೊಳಗೆ 34ನೇ ಪ್ರಕರಣದಡಿ ರಿಜಿಸ್ಟ್ರಾರನಿಗೆ ಹಾಗೂ ಸಂಯುಕ್ತ ಸಹಕಾರಿಗೆ ವಿಧ್ಯುಕ್ತ ವರದಿಗಳನ್ನು (ರಿಟರ್ನ್ಸ್) ಮತ್ತು ಮಾಹಿತಿಯನ್ನು ಸಲ್ಲಿಸದಿದ್ದರೆ; ಅಥವಾ

(ಎ-2) ಗಂಭೀರ ಹಣಕಾಸು ಅಕ್ರಮಗಳನ್ನು ಅಥವಾ ವಂಚನೆಯನ್ನು ಎಸಗಿರುವುದು ಕಂಡು ಬಂದರೆ; ಅಥವಾ

(ಬಿ) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಲಾಗಿರುವ ಇತರ ಯಾವುವೇ ಅನರ್ಹತೆಗಳಿಗೆ ಗುರಿಯಾಗಿದ್ದರೆ; ಅಥವಾ

(ಸಿ) ಗೈರುಹಾಜರಿ ಬಗ್ಗೆ ಅನುಮತಿಯನ್ನು ಪಡೆದುಕೊಳ್ಳದೆ ಆತನು ಮಂಡಲಿಯ ಮೂರು ನಿರಂತರ ಸಭೆಗಳಿಗೆ ಗೈರುಹಾಜರಾದರೆ; ಅಥವಾ

(ಡಿ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ನೈತಿಕ ಅಧಃಪತನವನ್ನೊಳಗೊಂಡ ಅಪರಾಧಕ್ಕಾಗಿ ಅಥವಾ ಈ ಅಧಿನಿಯಮದ ಅಡಿಯಲ್ಲಿಯ ಅಪರಾಧಕ್ಕಾಗಿ ನಿರ್ಣೀತ ಅಪರಾಧಿಯಾಗಿದ್ದರೆ; ಅಥವಾ

(ಇ) ತಾನು ತೆಗೆದುಕೊಂಡಿದ್ದ ಸಾಲದ ಯಾವುದೇ ಕಂತನ್ನು ಮರು ಸಂದಾಯ ಮಾಡಲು ತಪ್ಪಿದ್ದರೆ ಅಥವಾ ಸಾಲದ ನಿರಂತರ ಮೂರು ಕಂತುಗಳನ್ನು ಮರು ಸಂದಾಯ ಮಾಡಲು ತಪ್ಪಿರುವಂಥ ಸಾಲಗಾರನೊಬ್ಬನಿಗೆ ಜಾಮೀನುದಾರನಾಗಿದ್ದರೆ,

- ಸಹಕಾರಿಯ ಅಥವಾ ಸಹಕಾರ ಸಂಘದ ನಿರ್ದೇಶಕರಾಗಿ ಚುನಾಯಿತರಾಗಲು ಅನರ್ಹತೆಗೆ ಗುರಿಯಾಗತಕ್ಕದ್ದು ಮತ್ತು ಹಾಗೆ ಅನರ್ಹತೆಗೆ ಗುರಿಯಾದ ದಿನಾಂಕದಿಂದ ಗರಿಷ್ಠ ಐದು ವರ್ಷಗಳ ಅವಧಿಯವರೆಗೆ ಒಂದು ಸಹಕಾರಿಯ ಅಥವಾ ಯಾವುದೇ ಇತರ ಸಹಕಾರಿಯ ಅಥವಾ ಸಹಕಾರ ಸಂಘದ ನಿರ್ದೇಶಕರಾಗಿ ಮುಂದುವರೆಯಲೂ ಸಹ ಅನರ್ಹರಾಗತಕ್ಕದ್ದು."

**10. 28ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 28ನೇ ಪ್ರಕರಣದ (3)ನೇ ಉಪ ಪ್ರಕರಣದಲ್ಲಿನ ಪರಂತುಕದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಪರಂತು ಸಂಯುಕ್ತ ಸಹಕಾರಿಯ ಪದಾಧಿಕಾರಿಯ ಅಧಿಕಾರಾವಧಿಯು ಆತನು ಪ್ರತಿನಿಧಿಸುವ ಸಹಕಾರಿಯ ನಿರ್ದೇಶಕನಾಗಿರುವುದು ನಿಂತುಹೋದಲ್ಲಿ, ಮುಕ್ತಾಯಗೊಳಿಸತಕ್ಕದ್ದು."

**11. 31ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 31ನೇ ಪ್ರಕರಣದ (1)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು ಎಂದರೆ:-

"(1ಎ) ಸಹಕಾರಿಯ ಯಾರೇ ನೌಕರರು, 53ನೇ ಪ್ರಕರಣದ (7)ನೇ ಉಪಪ್ರಕರಣದ ಅಡಿಯಲ್ಲಿ ನಡೆಸಲಾದ ಕೋರ್ಸುಗಳಲ್ಲಿ ಆತನ ವೃಂದದಿಂದ ಮುಂಬಡ್ತಿಗಾಗಿ ನಿಯಮಿಸಿದ ಅಂಥ ಕೋರ್ಸುಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಹೊರತು ಮುಂದಿನ ಉನ್ನತ ಹುದ್ದೆಗೆ ಮುಂಬಡ್ತಿಗೊಳಿಸತಕ್ಕದ್ದಲ್ಲ."

**12. 35ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 35ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ,-

(i) "ಈ ಕೆಳಕಂಡ ಸನ್ನಿವೇಶಗಳಲ್ಲೂ ತ್ವರಿತವಾಗಿ ವಿಚಾರಣೆ ನಡೆಸಬಹುದು ಅಥವಾ ವಿಚಾರಣೆ ನಡೆಸುವಂತೆ ಮಾಡಬಹುದು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ii) (ಸಿ) ಖಂಡದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಸಿ) ಸಹಕಾರಿಯ ಸದಸ್ಯರ ಒಟ್ಟು ಸಂಖ್ಯೆಯ ಹತ್ತನೇ ಒಂದರಷ್ಟಕ್ಕೆ ಕಡಿಮೆಯಿಲ್ಲದ ಅಥವಾ ಸಹಕಾರಿಯ ಕನಿಷ್ಠ ಹತ್ತು ಸದಸ್ಯರು."

"(ಸಿ) ಸಹಕಾರಿಯ ಸದಸ್ಯರು ಒಟ್ಟು ಸಂಖ್ಯೆಯ ಹತ್ತನೇ ಒಂದರಷ್ಟಕ್ಕೆ ಕಡಿಮೆಯಿಲ್ಲದ ಅಥವಾ ಸಹಕಾರಿಯ ಕನಿಷ್ಠ ಹತ್ತು ಸದಸ್ಯರು."

**13. 49ನೇ ಪ್ರಕಣದ ತಿದ್ದುಪಡಿ.-** ಮೂಲ ಅಧಿನಿಯಮದ 49ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿನ (ಜಿ) ಖಂಡ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಹೆಚ್) 47ನೇ ಪ್ರಕರಣದ (4)ನೇ ಉಪ ಪ್ರಕರಣದ ಮತ್ತು 48ನೇ ಪ್ರಕರಣದ (5) ಮತ್ತು (7)ನೇ ಉಪಪ್ರಕರಣಗಳ ಅಡಿಯಲ್ಲಿ ಸೌಹಾರ್ದ ಸಹಕಾರಿ ಮತ್ತು ಸೌಹಾರ್ದ ಸಹಕಾರಿ ಬ್ಯಾಂಕುಗಳನ್ನು ಸಮಾಪನಗೊಳಿಸುವ ಪ್ರಕ್ರಿಯೆಯನ್ನು ಎರಡು ವರ್ಷಗಳೊಳಗಾಗಿ ಪೂರ್ಣಗೊಳಿಸತಕ್ಕದ್ದು, ಆದಾಗ್ಯೂ ರಿಜಿಸ್ಟ್ರಾರನು ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ ಒಂದು ವರ್ಷದ ಮತ್ತೊಂದು ಅವಧಿಗೆ ವಿಸ್ತರಿಸಬಹುದು:

ಪರಂತು ರಾಜ್ಯ ಸರ್ಕಾರವು, ರಿಜಿಸ್ಟ್ರಾರನು ಸಲ್ಲಿಸಿದ ವರದಿಯ ಮೇಲೆ, ವಿಸ್ತರಣೆಗಾಗಿ ನೈಜ ಕಾರಣಗಳಿವೆ ಎಂದು ಮನಗಂಡರೆ ದಾಖಲಿಸಬೇಕಾದ ಕಾರಣಗಳಿಗಾಗಿ ಅವಧಿಯನ್ನು ವಿಸ್ತರಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

(ಐ) ಸಮಾಪಕನು ಅಳವಡಿಸಿಕೊಳ್ಳುವ ಕಾರ್ಯವಿಧಾನವು ನಿಯಮಿಸಬಹುದಾಂತೆ ಇರತಕ್ಕದ್ದು."

**14. 53ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 53ನೇ ಪ್ರಕರಣದ (9)ನೇ ಉಪಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(9) ಸಂಯುಕ್ತ ಸಹಕಾರಿಯಲ್ಲಿ ಸದಸ್ಯ ಸಹಕಾರಿಯನ್ನು ಪ್ರತಿನಿಧಿಸಲು ನಿರ್ಣಯದ ಮೂಲಕ ಸಹಕಾರಿ ಮಂಡಳಿಯು ಚುನಾಯಿತ ನಿರ್ದೇಶಕನನ್ನು ನಾಮನಿರ್ದೇಶನ ಮಾಡಬಹುದು. ಅಂಥ ನಾಮನಿರ್ದೇಶಿತ ನಿರ್ದೇಶಕನು ಸಂಯುಕ್ತ ಸಹಕಾರಿಯಲ್ಲಿ ಅಂಥ ನಿರ್ಣಯದೊಂದಿಗೆ ಸಹಕಾರಿಯನ್ನು ಪ್ರತಿನಿಧಿಸತಕ್ಕದ್ದು."

**15. 61ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 61ನೇ ಪ್ರಕರಣದ (2)ನೇ ಉಪ ಪ್ರಕರಣದಲ್ಲಿನ (ಎಲ್-4) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-


"(ಎಲ್-5) ಸದಸ್ಯ ಸಹಕಾರಿಯ ರಚನೆ, ವ್ಯವಸ್ಥಾಪನೆ, ಕಾರ್ಯನಿರ್ವಹಣೆ ಅಥವಾ ಆರ್ಥಿಕ ಸ್ಥಿತಿಗತಿಯ ಕುರಿತಾದ ಯಾವುದೇ ನಿರ್ದಿಷ್ಟ ವಿಷಯದ ಬಗ್ಗೆ, ಸ್ವಯಂ ಪ್ರೇರಿತವಾಗಿ ವಿಚಾರಣೆಯನ್ನು ನಡೆಸಬಹುದು ಅಥವಾ ತ್ವರಿತವಾಗಿ ವಿಚಾರಣೆಯನ್ನು ನಡೆಸುವಂತೆ ಮಾಡಬಹುದು."

**16. ಸಹಕಾರಿ ಚುನಾವಣೆ ಪ್ರಾಧಿಕಾರ ಪದಾವಳಿಯ ಪ್ರತಿಯೋಜನೆ.-** ಮೂಲ ಅಧಿನಿಯಮದಲ್ಲಿ "ಸಹಕಾರಿ ಚುನಾವಣಾ ಆಯೋಗ" ಎಂಬ ಪದಾವಳಿಯು ಬರುವ ಕಡೆಗಳಲ್ಲೆಲ್ಲ, "ಸಹಕಾರಿ ಚುನಾವಣಾ ಪ್ರಾಧಿಕಾರ" ಎಂಬ ಪದಾವಳಿಯನ್ನು ಅನುಕ್ರಮವಾಗಿ ಪ್ರತಿಯೋಜಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ

## ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ 2021 ಇದಕ್ಕೆ ಟಿಪ್ಪಣಿಗಳು



**ಶ್ರೀ ಸಿ.ಎನ್ ಪರಶಿವಮೂರ್ತಿ, ಸಹಕಾರ ಸಂಘಗಳ ಅಪರ ನಿಬಂಧಕರು, (ನಿವೃತ್ತ) ಇವರು ಕರ್ನಾಟಕ ಸಹಕಾರ ಸೌಹಾರ್ದ ಸಹಕಾರ ಕಾಯ್ದೆ ತಿದ್ದುಪಡಿ ವಿಧೇಯಕ 2021 ಕ್ಕೆ ನೀಡಿರುವ ವಿವರಣೆಯನ್ನು ಓದುಗರ ಗಮನಕ್ಕಾಗಿ ಪ್ರಕಟಿಸಿದೆ.**

**2ನೇ ಪ್ರಕರಣದ ತಿದ್ದುಪಡಿ :** ಸೌಹಾರ್ದ ಕಾಯ್ದೆ ರಚನೆ ಮಾಡುವಾಗ ಉದ್ದೇಶ ಪೂರ್ವಕವಾಗಿ ಸಂಘ ವೆಂಬ ಹೆಸರನ್ನ ಕಾಯ್ದೆಯಲ್ಲಿ ಸೇರಿಸಿರಲಿಲ್ಲ. ಈಗ ಉದ್ಭವಿಸಿರುವುದು ಆದರೂ ಸಹಕಾರಿ ಎಂಬ ಪದವೇ ಸೂಕ್ತ. ಆದಾಯ ತೆರಿಗೆ ಕಾಯ್ದೆ ತೊಡಕಿನ ನಿವಾರಣೆಗಾಗಿ ಈ ತಿದ್ದುಪಡಿ ಮಾಡಲಾಗಿದೆ.

**5ನೇ ಪ್ರಕರಣದ ತಿದ್ದುಪಡಿ :** ಸಹಕಾರ ಇಲಾಖಾ ಅಧಿಕಾರಿಗಳು ಒಂದು ಸೌಹಾರ್ದ ಸಹಕಾರಿ ನೋಂದಣಿ ಮಾಡಿದ ದಿನಾಂಕದಂದೇ ನೋಂದಾಯಿತ ಉಪವಿಧಿಗಳನ್ನ ಸಂಯುಕ್ತ ಸಹಕಾರಿಗೆ ರವಾನಿಸುತ್ತಿಲ್ಲವಾದ್ದರಿಂದ ಈ ಅವಕಾಶವನ್ನ ಸ್ಪಷ್ಟವಾಗಿ ಸೇರಿಸಲಾಗಿದೆ. ಮತ್ತು ರವಾನಿಸಲು ಅವಧಿಯನ್ನು ನಿಗದಿಪಡಿಸಲಾಗಿದೆ. ಕಾಯ್ದೆಯಲ್ಲಿ ಒಂದು ಪ್ರತಿಯನ್ನ ರವಾನಿಸಬೇಕೆಂದಿದ್ದರು ಸಹಕಾರ ಇಲಾಖಾ ಅಧಿಕಾರಿಗಳು ಕಳುಹಿಸುತ್ತಿಲ್ಲವಾದ್ದರಿಂದ ಇದರ ಅವಶ್ಯಕತೆ ಇತ್ತು.

**17ಎ ಹೊಸ ಪ್ರಕರಣದ ತಿದ್ದುಪಡಿ :** ಸೌಹಾರ್ದ ಕಾಯ್ದೆಯಲ್ಲಿ ಸಹಕಾರಿಗೆ ಮತ್ತು ಆಡಳಿತ ಮಂಡಲಿಗೆ ಪೂರ್ಣ ಪ್ರಮಾಣದ ಅಧಿಕಾರ ಕೊಡುವ ಮತ್ತು ಜವಾಬ್ದಾರಿಯನ್ನ ತಿಳಿದುಕೊಳ್ಳಲು ಸದಸ್ಯರ ಶೇರು ಬಂಡವಾಳ ಮಿತಿಯನ್ನ ನಿಗದಿಪಡಿಸಿರಲಿಲ್ಲ. ಅಂದರೆ ಸೌಹಾರ್ದ ಸಹಕಾರಿಗಳು ಉಪವಿಧಿಗಳನ್ನು ರಚಿಸುವಾಗ ಜಾಗರೂಕ ಸದಸ್ಯರ ಹಿತಾಸಕ್ತಿಗೆ ಪೂರಕವಾಗಿ, ಶೇರು ಹಣದ ಗರಿಷ್ಟ ಮಿತಿಯನ್ನ ನಿಗಧಿಪಡಿಸಿಕೊಳ್ಳಬೇಕು. ಈ ಅಧಿಕಾರವನ್ನು ಕಾಯ್ದೆಯಲ್ಲಿ ಸೇರಿಸಬಾರದೆಂದು ಮೂಲ ಉದ್ದೇಶವಿತ್ತು ಆದರೆ ಹಲವಾರು ಸೌಹಾರ್ದ ಸಹಕಾರಿ ಸಂಸ್ಥೆಗಳು ಹಣಕಾಸು ವ್ಯವಹಾರ ನಡೆಸುತ್ತಿದ್ದ ವ್ಯಕ್ತಿಗಳೇ ಸೌಹಾರ್ದ ಸಹಕಾರಿ ರಚನೆ ಮಾಡಿಕೊಂಡು ಹೆಚ್ಚು ಲಾಭಾಂಶ ಗಳಿಸಲು ಹೆಚ್ಚು ಶೇರು ಬಂಡವಾಳವನ್ನ ಹೂಡಿ ಗರಿಷ್ಟ ಶೇ.25ರಷ್ಟು ಲಾಭಾಂಶ ಪಡೆಯುವ ಅವಕಾಶವನ್ನ ಉಪಯೋಗಿಸಿಕೊಳ್ಳುತ್ತಿದ್ದು, ಇದನ್ನು ಸಹಕಾರಿ ಮಿತಿಗೊಳಿಸಬಹುದೆಂದು ಸಂಯುಕ್ತ ಸಹಕಾರಿ ಮತ್ತು ಸರ್ಕಾರ ಚಿಂತನೆ ಮಾಡಿರುವುದು ಸ್ವಾಯತ್ತತೆ ತೊಡಕಾದರೂ ಈಗಿನ ವ್ಯವಸ್ಥೆ ಮತ್ತು ವ್ಯವಹಾರಕ್ಕೆ ಪೂರಕವಾಗಿ ಈ ತಿದ್ದುಪಡಿಯನ್ನು ತಂದಿರುವುದು ಸೂಕ್ತ.

**20ನೇ ಪ್ರಕರಣದ ತಿದ್ದುಪಡಿ :** ಹೊಸದಾಗಿ ಸೇರ್ಪಡೆಯಾಗಿರುವ ಅವಕಾಶಗಳು ಕೆಲವು ಸ್ಪಷ್ಟತೆಗಳನ್ನು ನೀಡಲು ಸೇರಿಸಿದ್ದು ಸೂಕ್ತವಾಗಿದೆ.

**20 ಬಿ ಪ್ರಕರಣದ ತಿದ್ದುಪಡಿ :** ಮತದಾನದ ನೀಡುವ ಬಗ್ಗೆ ಅರ್ಹತೆಗಳನ್ನು ನಿಗದಿಪಡಿಸಿರುವುದಿಲ್ಲ. ಈ ತಿದ್ದುಪಡಿ ಸದಸ್ಯರ ಮತದಾನದ ಹಕ್ಕಿಗೆ ಅರ್ಹತೆಯನ್ನ ನಿಗದಿಪಡಿಸಿದೆ. ಆದರೆ ಐದು ವರ್ಷಗಳಲ್ಲಿ ಎರಡು ವರ್ಷದ ಮಹಾಸಭೆಯಲ್ಲಿ ಹಾಜರಾತಿ ಮತ್ತು ಕನಿಷ್ಟ ಸೇವೆ ಎರಡು ವರ್ಷದ ವ್ಯವಹಾರದ ಭಾಗವಹಿಸುವಿಕೆ ನಿಗದಿಪಡಿಸಿರುವುದೇ ಸೂಕ್ತವಲ್ಲ. ಏಕೆಂದರೆ ಸಹಕಾರಿ ತತ್ವಗಳಲ್ಲಿ ಒಂದಾದ ಸಹಕಾರಿ ವ್ಯವಹಾರದಲ್ಲಿ ಸದಸ್ಯರ ಭಾಗವಹಿಸುವಿಕೆ ಸಕ್ರಿಯವಾಗಿರಬೇಕೆಂಬ ಉದ್ದೇಶದಿಂದ ಸತತ ಮೂರು ವರ್ಷಗಳ ಮಹಾಸಭೆಗಳ ಭಾಗವಹಿಸುವಿಕೆ ಮತ್ತು ಮೂರು ವರ್ಷಗಳ ವ್ಯವಹಾರ ಭಾಗವಹಿಸುವಿಕೆ ಇರುವುದಕ್ಕೆ ಬದಲಾಗಿ ಹೊಸದಾಗಿ ಸೇರ್ಪಡೆ ಮಾಡಿದ ಅವಕಾಶದಲ್ಲಿ

ಯಾವುದಾದರೂ ಎರಡೂ ವರ್ಷದ ಮಹಾಸಭೆಯ ಹಾಜರಾತಿ ಮತ್ತು ಐದು ವರ್ಷಗಳಲ್ಲಿ ಎರಡು ವರ್ಷಗಳು ವ್ಯವಹಾರದಲ್ಲಿ ಭಾಗವಹಿಸುವಿಕೆ ನಿಗದಿಪಡಿಸಿರುವುದು ಹೆಚ್ಚು ಸದಸ್ಯರನ್ನ ಚುನಾವಣೆಯಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿದಂತಾಗುತ್ತದೆ. ಸೌಹಾರ್ದ ಕಾಯ್ದೆಯಲ್ಲಿ ನೋಂದಾವಣೆಯಾದ ಹಲವಾರು ಸಹಕಾರಿಗಳು ಲೇವಿದಾರರು ನೋಂದಾಯಿಸಿದ ಸೌಹಾರ್ದ ಸಹಕಾರಿಗಳು ಇದ್ದು ಹೆಚ್ಚು ಲಾಭಗಳಿಸುವ ಉದ್ದೇಶದಿಂದ ಎಲ್ಲಾ ಸದಸ್ಯರಿಗೂ ಮತದಾನದ ಅರ್ಹತೆಯನ್ನು ತಪ್ಪಿಸಿ ಸಹಕಾರಿಯನ್ನ ನೋಂದಾಯಿಸಿದಾಗ ಇದ್ದ ಸದಸ್ಯರೇ ಮಂಡಳಿ ಸದಸ್ಯರಾಗುವ ಉದ್ದೇಶದಿಂದ ಸೀಮಿತಗೊಳಿಸಲು ಇದ್ದ ಅವಕಾಶವನ್ನ ತಪ್ಪಿಸಲು ಈ ಸೇರ್ಪಡೆ ಮಾಡಲಾಗಿದೆ.

**24ನೇ ಪ್ರಕರಣದ ತಿದ್ದುಪಡಿ :** ಸ್ಪಷ್ಟತೆಯನ್ನ ನೀಡಲು ಈ ಅವಕಾಶವನ್ನ ಕಲ್ಪಿಸಿದೆ. ಇದು ಸೂಕ್ತವಾದ ಕ್ರಮ.

**25ನೇ ಪ್ರಕರಣದ ತಿದ್ದುಪಡಿ :** ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಚುನಾಯಿತರಾದ ನಂತರ ಒಳಗಾಗುವ ಅನರ್ಹತೆಗೆ ಸಂಬಂಧಪಟ್ಟಂತೆ ಹೊಸ ಉಪಕಲಂಗಳನ್ನು ಸೇರಿಸಲಾಗಿದೆ. ಇವುಗಳು ಅನರ್ಹತೆಯನ್ನು ನಿಗದಿಸಪಡಿಲು ಅವಧಿಗೆ ಸ್ಪಷ್ಟತೆ ನೀಡಲು ಸೇರಿಸಲಾಗಿದೆ. ಇದು ಸೂಕ್ತವಾದ ತಿದ್ದುಪಡಿ.

**28ನೇ ಪ್ರಕರಣದ ತಿದ್ದುಪಡಿ :** ಸಂಯುಕ್ತ ಸಹಕಾರಿಯ ಪದಾಧಿಕಾರಿಗಳ ಅವಧಿ ಮುಕ್ತಾಯವಾಗುವುದರ ಬಗ್ಗೆ ಅವನು ಪ್ರತಿನಿಧಿಸುವ ಸಹಕಾರಿಯ ಅವಧಿಗೂ ನಿಗಧಿಪಡಿಸಿರುವುದು ಸೂಕ್ತ ತಿದ್ದುಪಡಿ.

**31ನೇ ಪ್ರಕರಣದ ತಿದ್ದುಪಡಿ :** ಸಂಯುಕ್ತ ಸಹಕಾರಿಯ ನಡೆಸುತ್ತಿರುವ ಡಿ.ಸಿ.ಬಿ.ಎಂ ಕೋರ್ಸಗೆ ಪೂರಕವಾಗಿ ಈ ಅರ್ಹತೆಯನ್ನ ನಿಗದಿಪಡಿಸಿದೆ. ಅಂದರೆ ಮುಂಬಡ್ತಿ ಪಡೆಯಲು ಈ ಡಿ.ಸಿ.ಬಿ.ಎಂ ಅರ್ಹತೆನ್ನು ನಿಗಧಿ ಪಡಿಸಿರುವುದು ಸೂಕ್ತ.

**35ನೇ ಪ್ರಕರಣದ ತಿದ್ದುಪಡಿ :** ವಿಚಾರಣೆಗೆ ಸಂಬಂಧಪಟ್ಟ ಕೆಲವು ಸ್ಪಷ್ಟೀಕರಣವನ್ನ ಸೇರಿಸಲಾಗಿದೆ ಮತ್ತು ಇದು ಸೂಕ್ತವಾದ ಕ್ರಮ.

**49ನೇ ಪ್ರಕರಣದ ತಿದ್ದುಪಡಿ :** ಸಮಾಪಣೆ ಕಾರ್ಯವನ್ನು ಮುಕ್ತಾಯ ಗೊಳಿಸಲು ಅವಧಿಯನ್ನು ನಿಗಧಿಪಡಿಸಿರುವುದು ಒಂದು ಒಳ್ಳೆಯ ಕ್ರಮ. ಎರಡು + ಒಂದು ಅವಧಿಗೆ ಸಮಾಪನೆ ಕಾರ್ಯವನ್ನ ಮುಕ್ತಾಯಗೊಳಿಸಬೇಕು. ಈ ಅವಕಾಶ ಜೊತೆ ನಿಗಧಿಪಡಿಸಿದ ಅವಧಿ ಒಳಗೆ ಸಮಾಪನಾ ಅಧಿಕಾರಿ ಮುಕ್ತಾಯ ಗೊಳಿಸದಿದ್ದರೆ ಅಂತಹ ಸಮಾಪನಾ ಅಧಿಕಾರಿಯ ಮೇಲೆ ಶಿಸ್ತು ಕ್ರಮ ಕೈಗೊಳ್ಳುವ ಅವಕಾಶ ಕಲ್ಪಸಬೇಕಿಂತ್ತು. ಈ ಬಗ್ಗೆ ಸಂಯುಕ್ತ ಸಹಕಾರಿಯ ತನ್ನ ಆಡಲಿತ ಮಂಡಳಿಯಲ್ಲಿ ನೀತಿ ರೂಪಿಸಬಹುದಾಗಿದೆ.

**53ನೇ ಪ್ರಕರಣದ ತಿದ್ದುಪಡಿ :** ಸ್ಪಷ್ಟತೆ ನೀಡಲು ಈ ಅವಕಾಶವನ್ನು ಕಲ್ಪಿಸಲಾಗಿದೆ ಇದು ಸೂಕ್ತವಾದ ತಿದ್ದುಪಡಿ.

**61ನೇ ಪ್ರಕರಣದ ತಿದ್ದುಪಡಿ :** ಸಂಯುಕ್ತ ಸಹಕಾರಿ ಸ್ವಯಂ ಪ್ರೇರಿತವಾಗಿ ವಿಚಾರಣೆ ಮತ್ತು ತ್ವರಿತ ವಿಚಾರಣೆಗೆ ಅವಕಾಶ ಕಲ್ಪಿಸಿದೆ. ಇದು ಸೂಕ್ತವಾಗಿದೆ. ಆದರೆ ಪರಿವೀಕ್ಷಣೆ ಮಾಡುವ ಅಧಿಕಾರದ ಜೊತೆಗೆ ವಿಚಾರಣೆ ಎಂದು ಸೇರಿಸಿದ್ದು, ಇದು ಹೆಚ್ಚುವರಿ ಅಧಿಕಾರವೇ ಎಂದು ಸ್ಪಷ್ಟಿ ಪಡಿಸ ಬೇಕಾಗಿತ್ತು.

**ಸಹಕಾರಿ ಚುನಾವಣೆ ಪ್ರಾಧಿಕಾರ ಪದಾವಳಿಯ ಪ್ರತಿಯೋಜನೆ :** ಚುನಾವಣಾ ಆಯೋಗಕ್ಕೆ ಬದಲಾಗಿ ಚುನಾವಣಾ ಪ್ರಾಧಿಕಾರವೆಂಬ ಪದವನ್ನು ಉಪಯೋಗಿಸಲು ಅವಕಾಶ ಕಲ್ಪಿಸಿರುವುದು ಸರಿಯಾದ ಕ್ರಮ. ಆದರೆ ಚುನವಣಾ ಆಯೋಗ ಇದ್ದರೆ ಮಾತ್ರ ಅದಕ್ಕೆ ಪೂರ್ಣ ಪ್ರಮಾಣದ ಸ್ವತಂತ್ರ್ಯ ಚುನಾವಣೆ ನಡೆಸಲು ಅಧಿಕಾರ ಪ್ರಾತ್ತವಾಗುತ್ತಿತ್ತು.





**ಹಾವೇರಿ :** 1. ಶ್ರೀ ಗುರುಸದಾನಂದ ಸೌಹಾರ್ದ ಸಹಕಾರಿ ನಿ., 2. ಶ್ರೀ ಕುರುವತ್ತೇಶ್ವರ ಕ್ಷೇಮಾಭಿವೃದ್ಧಿ ಸೌಹಾರ್ದ ಸಹಕಾರಿ ನಿ., 3. ನವಚೇತನ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಹಾವೇರಿ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಂ.ಬಿ. ಕಲಾಲ್ ಭೇಟಿ ನೀಡಿ ಆಡಳಿತ ಮಂಡಳಿಯ ಸದಸ್ಯರೊಂದಿಗೆ ಸಹಕಾರಿಯ ಕಾರ್ಯಚಟುಚಟಿಕೆಯ ಕುರಿತು ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು.






**ವಿಜಯಪುರ :** ಸಿದ್ಧಸಿರಿ ಸೌಹಾರ್ದ ಸಹಕಾರಿ ನಿ., ವಿಜಯಪುರ, ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಸಿದ್ರಾಮಪ್ಪ ಚ. ಉಪ್ಪಿನ ಭೇಟಿ ನೀಡಿ ಆಡಳಿತ ಮಂಡಳಿಯ ಸದಸ್ಯರೊಂದಿಗೆ ಸಹಕಾರಿಯ ಕಾರ್ಯಚಟುಚಟಿಕೆಯ ಕುರಿತು ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು ಮತ್ತು 1. ವೀರಶೈವ ಲಿಂಗಾಯತ ಸೌಹಾರ್ದ ಸಹಕಾರಿ ನಿ., ವಿಜಯಪುರ, 2. ಗುರು ಚಂದ್ರಶೇಖರ ಸೌಹಾರ್ದ ಸಹಕಾರಿ ನಿ., ವಿಜಯಪುರ, 3. ಕೂಡಲಸಂಗಮ ಸೌಹಾರ್ದ ಸಹಕಾರಿ ನಿ., ವಿಜಯಪುರ ಹಾಗೂ 4. ಗುರುಮಾತೆಯರ ಸೌಹಾರ್ದ ಸಹಕಾರಿ ನಿ., ವಿಜಯಪುರ ಸೌಹಾರ್ದ ಸಹಕಾರಿಗಳಿಂದ ಮಾನ್ಯ ಅಧ್ಯಕ್ಷರನ್ನು ಸನ್ಮಾನಿಸಲಾಯಿತು.

# ಸಹಕಾರ ಸಂಘಗಳು/ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಗಳ ಚುನಾವಣೆಗಳನ್ನು ನಡೆಸುವ ಬಗ್ಗೆ ಸುತ್ತೋಲೆ

ಸಹಕಾರ ಚುನಾವಣಾ ಪ್ರಾಧಿಕಾರ,
ಟಿ.ಟಿ.ಎಂ.ಸಿ.ಕಟ್ಟಡ, 3ನೇಮಹಡಿ, ಶ್ರೀ ಕೆಂಗಲ್ ಹನುಮಂತಯ್ಯರಸ್ತೆ, ಶಾಂತಿನಗರ, ಬೆಂಗಳೂರು-560027.
E-mail : coea-coop@karnataka.gov.in website: coea.karnataka.gov.in
Phone : 080-22220066 / 29709014

ಸಂಖ್ಯೆ : ಸಚುಪ್ರಾ/ಆಡಳಿತ/ಕೋವಿಡ್-19/ 6(4) /ಸುತ್ತೋಲೆ/2021 ದಿನಾಂಕ 08/10/2021

ಚುನಾವಣಾ ತುರ್ತು

## ಸುತ್ತೋಲೆ

ವಿಷಯ : ಸಹಕಾರ ಸಂಘಗಳು / ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿಗಳ ಚುನಾವಣೆಗಳನ್ನು ನಡೆಸುವ ಬಗ್ಗೆ.

ಉಲ್ಲೇಖ :
1) ಈ ಕಛೇರಿಯ ಸುತ್ತೋಲೆ ಸಂಖ್ಯೆ : ಸಚುಪ್ರಾ/ಆಡಳಿತ/ಕೋವಿಡ್-19/6(1)/ಸುತ್ತೋಲೆ/202 ದಿನಾಂಕ 26.04.2021.
2) ಈ ಕಛೇರಿಯ ಸುತ್ತೂಲೆ ಸಂಖ್ಯೆ : ಸಚುಪ್ರಾ/ಆಡಳಿತ/ಕೋವಿಡ್-19/6(2)/ಸುತ್ತೂಲೆ/2021 ದಿನಾಂಕ 21.06.2021.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು ಇವರ ಪತ್ರ ಸಂಖ್ಯೆ : ಸಿ.ಓ/40/ ಸಿ.ಎಲ್.ಎಂ/2021(ಇ) ದಿನಾಂಕ 17.07.2021.
4) ಈ ಕಛೇರಿಯ ಸುತ್ತೂಲೆ ಸಂಖ್ಯೆ : ಸಚುಪ್ರಾ/ಆಡಳಿತ/ಕೋವಿಡ್-19/6(3)/ಸುತ್ತೂಲೆ/2021 ದಿನಾಂಕ 19.07.2021.
5) ಸರ್ಕಾರದ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು ಇವರ ಪತ್ರ ಸಂಖ್ಯೆ : ಸಿ.ಓ/40/ ಸಿ.ಎಲ್.ಎಂ/2021(ಭಾಗ-1)(ಇ) ದಿನಾಂಕ : 08.10.2021.

★★★★★

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದಲ್ಲಿ ಕೊರೋನಾ ವೈರಸ್ (ಕೋವಿಡ್-19) ಸಾಂಕ್ರಾಮಿಕವಾಗಿ ಹರಡುತ್ತಿದ್ದ ಹಿನ್ನಲೆಯಲ್ಲಿ ಕೋವಿಡ್-19ರ ಸಾಂಕ್ರಾಮಿಕ ರೋಗದ ಹರಡುವಿಕೆಯನ್ನು ತಡೆಗಟ್ಟುವ ಹಿನ್ನಲೆಯಲ್ಲಿ ಚುನಾವಣೆ ನಡೆಸಲು ಬಾಕಿ ಇದ್ದ ಎಲ್ಲಾ ವಿಧದ ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಚುನಾವಣೆಗಳನ್ನು ಮುಂದಿನ ಆದೇಶದವರೆಗೆ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960ರ ನಿಯಮ 14-ಹೆಚ್ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ಮತ್ತು ನಿಯಮಗಳು 5-ಎಂ ಗಳಂತೆ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ದತ್ತವಾದ ಅಧಿಕಾರವನ್ನು ಚಲಾಯಿಸಿ ಎಲ್ಲಾ ಚುನಾವಣೆಗಳನ್ನು (ಅಧ್ಯಕ್ಷರು/ಉಪಾಧ್ಯಕ್ಷರು/ನಿರ್ದೇಶಕರ ಖಾಲಿ ಬಿದ್ದ ಸ್ಥಾನಗಳ ಚುನಾವಣೆಗಳನ್ನು ಸಹಾ) ಮುಂದಿನ 6 ತಿಂಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಉಲ್ಲೇಖ(1) ಮತ್ತು (2)ರ ಈ ಕಛೇರಿಯ ಅಧಿಸೂಚನೆಗಳಂತೆ ಮುಂದೂಡಲಾಗಿರುತ್ತದೆ.

ಈ ಮಧ್ಯೆ, ಉಲ್ಲೇಖ(3)ರ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಪತ್ರ ದಿನಾಂಕ 17.07.2021 ರಲ್ಲಿ ಸಚಿವ ಸಂಪುಟ ಸಭೆಯ ಸಂಖ್ಯೆ : 10 ಪ್ರಕರಣ ಸಂಖ್ಯೆ : ಸಿ/264/2021 ದಿನಾಂಕ 15.07.2021ರಲ್ಲಿನ ನಿರ್ಣಯದಂತೆ ಸಹಕಾರ ಸಂಘಗಳ ನಿರ್ದೇಶಕ ಸ್ಥಾನಗಳಿಗೆ ಚುನಾವಣೆ ನಡೆದು ಅಧ್ಯಕ್ಷರ / ಉಪಾಧ್ಯಕ್ಷರ / ಪದಾಧಿಕಾರಿಗಳ ಚುನಾವಣೆಗಳು ಬಾಕಿ ಇದ್ದಲ್ಲಿ ಅಂತಹ ಪ್ರಕರಣಗಳಿಗೆ ಸಂಬಂಧಿಸಿದಂತೆ ಅಧ್ಯಕ್ಷರ / ಉಪಾಧ್ಯಕ್ಷರ / ಪದಾಧಿಕಾರಿಗಳ ಚುನಾವಣೆಯನ್ನು ನಡೆಸಲು ಸೂಕ್ತ ಸುತ್ತೋಲೆಯನ್ನು ಹೊರಡಿಸುವಂತೆ ಪ್ರಾಧಿಕಾರಕ್ಕೆ ನಿರ್ದೇಶಿಸಲಾಗಿರುತ್ತದೆ.

–02–

ಆದರಂತೆ, ಉಲ್ಲೇಖ(4)ರ ಸುತ್ತೋಲೆಯಲ್ಲಿ ಈಗಾಗಲೇ ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ನಿರ್ದೇಶಕ ಸ್ಥಾನಗಳಿಗೆ ಚುನಾವಣೆ ನಡೆದು ಅಧ್ಯಕ್ಷರ / ಉಪಾಧ್ಯಕ್ಷರ / ಪದಾಧಿಕಾರಿಗಳ ಚುನಾವಣೆಗಳು ಬಾಕಿ ಇದ್ದಲ್ಲಿ ಅಂತಹ ಪ್ರಕರಣಗಳಿಗೆ ಸಂಬಂಧಿಸಿದಂತೆ ಅಧ್ಯಕ್ಷರ / ಉಪಾಧ್ಯಕ್ಷರ / ಪದಾಧಿಕಾರಿಗಳ ಚುನಾವಣೆಯನ್ನು ನಡೆಸಲು ಅನುಮತಿಸಿ ಆದೇಶಿಸಲಾಗಿತ್ತು.

ಸರ್ಕಾರದ ಕಾರ್ಯದರ್ಶಿ, ಸಹಕಾರ ಇಲಾಖೆ, ಬೆಂಗಳೂರು ಇವರ ಉಲ್ಲೇಖ(5)ರ ಪತ್ರದಲ್ಲಿ ದಿನಾಂಕ **05.10.2021** ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ "ಸಹಕಾರ ಸಂಘಗಳು, ನೋಂದಾಯಿತ ಸೊಸೈಟಿಗಳು, ಸಂಘ ಸಂಸ್ಥೆಗಳ ಕಾರ್ಯಕಾರಿ ಮಂಡಳಿ / ನಿರ್ದೇಶಕ ಮಂಡಳಿಯ (**Executive Committee / Board of Directors**) ಚುನಾವಣೆಗಳನ್ನು ನಡೆಸಲು ಸಹ ಸಂಪುಟವು ನಿರ್ಣಯ ತೆಗೆದುಕೊಂಡಿದ್ದು" ಸಚಿವ ಸಂಪುಟ ಸಭೆಯ ನಿರ್ಣಯದಂತೆ ಸೂಕ್ತ ಕ್ರಮ ಕೈಗೊಳ್ಳಲು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ದಿನಾಂಕ: 08.10.2021ರ ತಮ್ಮ ಪತ್ರದಲ್ಲಿ ನಿರ್ದೇಶನವನ್ನು ನೀಡಿರುತ್ತಾರೆ.

ಆದುದರಿಂದ, ಮೇಲ್ಕಂಡ ಉಲ್ಲೇಖ(1) ರಿಂದ (4)ರವರೆಗಿನ ಸುತ್ತೋಲೆ ಮತ್ತು ಪತ್ರಗಳಲ್ಲಿ ಸಹಕಾರ ಸಂಘಗಳು / ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ನಿರ್ದೇಶಕರ ಚುನಾವಣೆಗೆ ವಿಧಿಸಲಾಗಿದ್ದ ನಿರ್ಬಂಧವನ್ನು ತೆರವುಗೊಳಿಸಿ ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿಗೆ ಬಾಕಿ ಇರುವ ಹಾಗೂ ಅವಧಿ ಮುಗಿಯಲಿರುವ ಚುನಾವಣೆಗಳನ್ನು ನಡೆಸಲು ಅನುಮತಿಸಲಾಗಿದೆ.

ಉಲ್ಲೇಖ(4)ರ ನಿರ್ದೇಶನದನ್ವಯ ಚುನಾವಣೆಗಳನ್ನು ಮುಂದೂಡುವ ಪೂರ್ವದಲ್ಲಿ ಚುನಾವಣಾ ಪ್ರಕ್ರಿಯೆಯು ಯಾವ ಹಂತದಲ್ಲಿ ನಿಲ್ಲಿಸಲಾಗಿತ್ತೋ ಆ ಹಂತದಿಂದ ಪ್ರಾರಂಭಿಸಿ ಚುನಾವಣಾ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದು. ಮತ್ತು ಆಡಳಿತ ಮಂಡಲಿ ಅವಧಿ ಮುಕ್ತಾಯಗೊಂಡು ಚುನಾವಣಾ ಪ್ರಕ್ರಿಯೆ ಪ್ರಾರಂಭವಾಗದೆ ಆಡಳಿತಾಧಿಕಾರಿ / ವಿಶೇಷಾಧಿಕಾರಿಗಳು ನೇಮಕಗೊಂಡ ಹಾಗೂ ಆಡಳಿತ ಮಂಡಲಿಯ ಪದಾವಧಿಯು ಮುಕ್ತಾಯವಾಗುವ ಸಹಕಾರ ಸಂಘಗಳ ಚುನಾವಣೆಗಳನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ/ನಿಯಮಗಳು ಮತ್ತು ಕರ್ನಾಟಕ ಸೌಹಾರ್ದ ಸಹಕಾರಿಗಳ ಅಧಿನಿಯಮ/ನಿಯಮಗಳ ಅನುಸಾರ ಚುನಾವಣಾ ಪ್ರಕ್ರಿಯೆಯನ್ನು ಪ್ರಾರಂಭಿಸಿ ಪೂರ್ಣಗೊಳಿಸಲು ತಿಳಿಸಿದೆ.

ಚುನಾವಣೆಗಳನ್ನು ನಡೆಸುವಾಗ ಕೋವಿಡ್–19ರ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಈ ಕಛೇರಿಯಿಂದ ಹೊರಡಿಸಿರುವ ಪತ್ರ ಸಂಖ್ಯೆ : ಸಚುಪ್ರಾ/ಬೆಂಗಳೂರು/ಕೋವಿಡ್–19/ಕೊರೋನಾ/2020 ದಿನಾಂಕ 04.09.2020 ಮಾರ್ಗಸೂಚಿಗಳನ್ನು ತಪ್ಪದೆ ಪಾಲಿಸಿ ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ಚುನಾವಣೆ, ಖಾಲಿ ಬಿದ್ದ ನಿರ್ದೇಶಕರ ಸ್ಥಾನಗಳ ಚುನಾವಣೆ ಮತ್ತು ಹೊಸದಾಗಿ ನೊಂದಣಿಯಾದ ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಪ್ರಥಮ ಆಡಳಿತ ಮಂಡಲಿ ಚುನಾವಣೆಗಳನ್ನು ನಡೆಸಿ ಫಲಿತಾಂಶವನ್ನು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಿದೆ.

(ಡಾ. ಎನ್.ಎಸ್.ಚನ್ನಪ್ಪಗೌಡ)
ಆಯುಕ್ತರು,
ಸಹಕಾರಚುನಾವಣಾ ಪ್ರಾಧಿಕಾರ,
ಬೆಂಗಳೂರು–27.

<u>ಪ್ರತಿಯನ್ನು ಈ ಕೆಳಕಂಡವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ :–</u>

01. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು–01.
02. ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು–52.
03. ರಾಜ್ಯದ ಎಲ್ಲಾ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ / ಮೈಸೂರು ವಿಭಾಗ / ಬೆಳಗಾವಿ ವಿಭಾಗ / ಕಲಬುರಗಿ ವಿಭಾಗ/ ಹಾಗೂ ಅಪೆಕ್ಸ್ ಸಹಕಾರ ಸಂಘಗಳ ಚುನಾವಣಾಧಿಕಾರಿಗಳು.

# ಸಹಕಾರ ಸಂಘಗಳು, ನೋಂದಾಯಿತ ಸೊಸೈಟಿಗಳು, ಸಂಘ ಸಂಸ್ಥೆಗಳ ಕಾರ್ಯಕಾರಿ ಮಂಡಳಿ/ ನಿರ್ದೇಶಕ ಮಂಡಳಿಯ ಚುನಾವಣೆಗಳನ್ನು ನಡೆಸುವ ಬಗ್ಗೆ ಸರ್ಕಾರದ ಆದೇಶ

ಪಿ. ರವಿ ಕುಮಾರ್, ಭಾ.ಆ.ಸೇ.,
ಮುಖ್ಯ ಕಾರ್ಯದರ್ಶಿ
P. RAVI KUMAR, I.A.S.,
Chief Secretary

ಕರ್ನಾಟಕ ಸರ್ಕಾರ
Government of Karnataka

ಪತ್ರ ಸಂಖ್ಯೆ: ಸಸಂಶಾ(ಎಂ): 80/2021

ದಿನಾಂಕ: 07.10.2021

**ಟಿಪ್ಪಣಿ**

ವಿಷಯ: ಸಹಕಾರ ಸಂಘಗಳು, ನೋಂದಾಯಿತ ಸೊಸೈಟಿಗಳು, ಸಂಘ ಸಂಸ್ಥೆಗಳ ಕಾರ್ಯಕಾರಿ ಮಂಡಳಿ/ ನಿರ್ದೇಶಕ ಮಂಡಳಿಯ (Executive Committee/ Board of Directors) ಚುನಾವಣೆಗಳನ್ನು ನಡೆಸುವ ಬಗ್ಗೆ.

ಉಲ್ಲೇಖ: ಸಚಿವ ಸಂಪುಟದ ಪ್ರಕರಣ ಸಂಖ್ಯೆ: ಸಸಂಶಾ(ಸಿ): 60/2021. ದಿನಾಂಕ: 05.10.2021.

*****

ಸಚಿವ ಸಂಪುಟವು ದಿನಾಂಕ: 05.10.2021 ರಂದು ನಡೆದ ಸಭೆಯಲ್ಲಿ ವಿಷಯ ಸಂಖ್ಯೆ: ಸಿ: 335/2021ಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡಂತೆ ನಿರ್ಣಯ ತೆಗೆದುಕೊಂಡಿದೆ:

> **"…..ಮುಂದುವರೆದು, ಸಹಕಾರ ಸಂಘಗಳು, ನೋಂದಾಯಿತ ಸೊಸೈಟಿಗಳು, ಸಂಘ ಸಂಸ್ಥೆಗಳ ಕಾರ್ಯಕಾರಿ ಮಂಡಳಿ/ ನಿರ್ದೇಶಕ ಮಂಡಳಿಯ (Executive Committee/ Board of Directors) ಚುನಾವಣೆಗಳನ್ನು ನಡೆಸಲೂ ಸಹ ಸಂಪುಟವು ನಿರ್ಧರಿಸಿತು".**

ಮೇಲ್ಕಂಡ ಸಚಿವ ಸಂಪುಟದ ನಿರ್ಣಯದಂತೆ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ.

(ಪಿ. ರವಿ ಕುಮಾರ್)
ಮುಖ್ಯ ಕಾರ್ಯದರ್ಶಿ

ಇವರಿಗೆ:
1) ಶ್ರೀ ರಾಕೇಶ್ ಸಿಂಗ್, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ.
2) ಶ್ರೀ ಎಲ್.ಕೆ. ಅತೀಕ್, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3) ಶ್ರೀ ತುಷಾರ್ ಗಿರಿ ನಾಥ್, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ.
4) ಡಾ॥ ಎಸ್. ಸೆಲ್ವಕುಮಾರ್, ಸರ್ಕಾರದ ಕಾರ್ಯದರ್ಶಿ, ಸಹಕಾರ ಇಲಾಖೆ.
5) ಡಾ॥ ಎಂ.ಎನ್. ಅಜಯ್ ನಾಗಭೂಷಣ್, ಸರ್ಕಾರದ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ.

# ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ/ ಪದಾಧಿಕಾರಿಗಳ ಚುನಾವಣೆಗಾಗಿ 2022ನೇ ಸಾಲಿಗೆ ಚುನಾವಣಾಧಿಕಾರಿಗಳ ನೇಮಕಾತಿ ಆದೇಶ

**ಕರ್ನಾಟಕ ಸರ್ಕಾರ**

**ಸಹಕಾರ ಚುನಾವಣಾ ಪ್ರಾಧಿಕಾರ**

**3ನೇ ಮಹಡಿ, ಟಿ.ಟಿ.ಎಂ.ಸಿ.ಕಟ್ಟಡ "ಎ"ಬ್ಲಾಕ್, ಶಾಂತಿನಗರ, ಬೆಂಗಳೂರು-560027.**

ವಿಷಯ: ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಕಲಂ 26 ಎ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ನಿಯಮ 2(ಜಿ-2) ರಂತೆ ದಿನಾಂಕ: 01.01.2022 ರಿಂದ 31.12.2022 ರವರೆಗೆ ಎಲ್ಲಾ ರೀತಿಯ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ/ಪದಾಧಿಕಾರಿಗಳ ಚುನಾವಣೆ ನಡೆಸಲು ಚುನಾವಣಾಧಿಕಾರಿಗಳನ್ನು ನೇಮಕಾತಿ ಮಾಡುವ ಬಗ್ಗೆ.

ಉಲ್ಲೇಖ: ಸಹಕಾರ ಚುನಾವಣಾ ಪ್ರಾಧಿಕಾರದ ಆದೇಶ ಸಂಖ್ಯೆ: ಸಚುಪ್ರಾ/ಆಡಳಿತ/ಸೌ.ಸ.ಚು./35/2020-21, ದಿನಾಂಕ: 29.10.2020.

★★★

**ಪ್ರಸ್ತಾವನೆ**

ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004 (2015ರ ತಿದ್ದುಪಡಿ)ರ ನಿಯಮ 2(ಜಿ-2)ರಲ್ಲಿ ಪ್ರದತ್ತವಾದ ಅಧಿಕಾರದಂತೆ, 2022 ನೇ ಸಾಲಿನಲ್ಲಿ ಅಂದರೆ ದಿನಾಂಕ: 01.01.2022 ರಿಂದ 31.12.2022 ರವರೆಗೆ ಆಡಳಿತ ಮಂಡಲಿ ಪದಾವಧಿ ಮುಕ್ತಾಯವಾಗಲಿರುವ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿಯ ನಿರ್ದೇಶಕರ ಸಾಮಾನ್ಯ ಚುನಾವಣೆ/ಹೊಸದಾಗಿ ನೋಂದಣಿಯಾದ ಸೌಹಾರ್ದ ಸಹಕಾರಿಗಳ/ಪುನಶ್ಚೇತನಗೊಂಡ ಸೌಹಾರ್ದ ಸಹಕಾರಿಗಳ/ವಿಶೇಷಾಧಿಕಾರಿ ನೇಮಕಗೊಂಡ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ಚುನಾವಣೆ ಮತ್ತು ತತ್ಪರಿಣಾಮ ಪದಾಧಿಕಾರಿಗಳ ಚುನಾವಣೆ ಹಾಗೂ ಆಕಸ್ಮಿಕವಾಗಿ ಖಾಲಿ ಬಿದ್ದ ನಿರ್ದೇಶಕ ಸ್ಥಾನ/ಪದಾಧಿಕಾರಿಗಳ ಚುನಾವಣೆ ನಡೆಸಲು ಚುನಾವಣಾಧಿಕಾರಿಗಳನ್ನು ನೇಮಿಸಬೇಕಾಗಿರುತ್ತದೆ.

ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004, (2015ರ ತಿದ್ದುಪಡಿ)ರ ನಿಯಮ 2(ಜಿ-2) ರಂತೆ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿಯ ನಿರ್ದೇಶಕರ ಸಾಮಾನ್ಯ ಚುನಾವಣೆ/ಹೊಸದಾಗಿ ನೋಂದಣಿಯಾದ ಸೌಹಾರ್ದ ಸಹಕಾರಿಗಳ/ಪುನಶ್ಚೇತನಗೊಂಡ ಸೌಹಾರ್ದ ಸಹಕಾರಿಗಳ/ವಿಶೇಷಾಧಿಕಾರಿ ನೇಮಕಗೊಂಡ ಆಡಳಿತ ಮಂಡಲಿ ಚುನಾವಣೆ ಮತ್ತು ತತ್ಪರಿಣಾಮ ಪದಾಧಿಕಾರಿಗಳ ಚುನಾವಣೆ ಹಾಗೂ ಆಕಸ್ಮಿಕವಾಗಿ ಖಾಲಿ ಬಿದ್ದ ನಿರ್ದೇಶಕ ಸ್ಥಾನ/ಪದಾಧಿಕಾರಿಗಳ ಚುನಾವಣೆ ನಡೆಸಲು ಚುನಾವಣಾಧಿಕಾರಿಗಳನ್ನು ನೇಮಕಾತಿ ಮಾಡಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**:ಆ ದೇ ಶ:**

**ಸಂಖ್ಯೆ: ಸಚುಪ್ರಾ/ಆಡಳಿತ/ಸೌ.ಸ.ಚು.ನೇಮಕಾತಿ/23/2021-22** **ದಿನಾಂಕ: 01-10-2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004 (2015ರ ತಿದ್ದುಪಡಿ) ರ ನಿಯಮ 2(ಜಿ-2) ರಂತೆ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಡಾ. ಎನ್.ಎಸ್. ಚನ್ನಪ್ಪಗೌಡ, ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ಆದ ನಾನು ನಿಯಮ 5-ಎ ರಂತೆ ಆಯಾ ಜಿಲ್ಲೆಯಲ್ಲಿ ನೊಂದಣಿಯಾಗಿರುವ ಹಾಗೂ 2022ನೇ ಸಾಲಿನಲ್ಲಿ ಆಡಳಿತ ಮಂಡಲಿ ಪದಾವಧಿಯು ಮುಕ್ತಾಯವಾಗಲಿರುವ ಎಲ್ಲಾ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿಯ ನಿರ್ದೇಶಕರ

ಸಾಮಾನ್ಯ ಚುನಾವಣೆ/ಹೊಸದಾಗಿ ನೋಂದಣಿಯಾದ ಸೌಹಾರ್ದ ಸಹಕಾರಿಗಳ/ಪುನ:ಶ್ಚೇತನಗೊಂಡ ಸೌಹಾರ್ದ ಸಹಕಾರಿಗಳ/ವಿಶೇಷಾಧಿಕಾರಿ ನೇಮಕಗೊಂಡ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ಚುನಾವಣೆ ಮತ್ತು ತತ್ಪರಿಣಾಮ ಪದಾಧಿಕಾರಿಗಳ ಚುನಾವಣೆ ಹಾಗೂ ಆಕಸ್ಮಿಕವಾಗಿ ಖಾಲಿ ಬಿದ್ದ ನಿರ್ದೇಶಕ ಸ್ಥಾನ/ಪದಾಧಿಕಾರಿಗಳ ಚುನಾವಣೆ ನಡೆಸಲು ಈ ಕೆಳಕಂಡ ಅಧಿಕಾರಿಗಳನ್ನು ಕೋಷ್ಟಕದಲ್ಲಿ ತಿಳಿಸಿರುವ ಜಿಲ್ಲೆಗಳಿಗೆ ಚುನಾವಣಾಧಿಕಾರಿಗಳನ್ನಾಗಿ ದಿನಾಂಕ 01.01.2022 ರಿಂದ 31.12.2022 ರವರೆಗೆ ನೇಮಕಾತಿ ಮಾಡಿ ಆದೇಶಿಸಿರುತ್ತೇನೆ.

| ಕ್ರ ಸಂ. | ಜಿಲ್ಲೆಯ ಹೆಸರು | ಚುನಾವಣಾಧಿಕಾರಿಯಾಗಿ ನೇಮಿಸಲ್ಪಟ್ಟ ಅಧಿಕಾರಿ |
|---|---|---|
| | **ಬೆಂಗಳೂರು ಪ್ರಾಂತ** | |
| 1 | ಬೆಂಗಳೂರು ನಗರ ಜಿಲ್ಲೆ | ಸಹಕಾರ ಸಂಘಗಳ ಜಂಟಿ ನಿಬಂಧಕರು, (ಪಟ್ಟಣ ಬ್ಯಾಂಕುಗಳ ವಿಭಾಗ) ಕೇಂದ್ರ ಬೆಂಗಳೂರು, ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿ ಅಸ್ಕರ್ ರಸ್ತೆ, ಬೆಂಗಳೂರು. |
| 2 | ಬೆಂಗಳೂರು ಗ್ರಾಮಾಂತರ ಜಿಲ್ಲೆ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಬೆಂಗಳೂರು ಗ್ರಾಮಾಂತರ ಜಿಲ್ಲೆ |
| 3 | ರಾಮನಗರ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ರಾಮನಗರ ಜಿಲ್ಲೆ |
| 4 | ತುಮಕೂರು | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ತುಮಕೂರು ಜಿಲ್ಲೆ |
| 5 | ಚಿತ್ರದುರ್ಗ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಚಿತ್ರದುರ್ಗ ಜಿಲ್ಲೆ |
| 6 | ದಾವಣಗೆರ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ದಾವಣಗೆರೆ ಜಿಲ್ಲೆ |
| 7 | ಶಿವಮೊಗ್ಗ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪನಿರ್ದೇಶಕರು, ಶಿವಮೊಗ್ಗ ಜಿಲ್ಲೆ |
| 8 | ಕೋಲಾರ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಕೋಲಾರ ಜಿಲ್ಲೆ |
| 9 | ಚಿಕ್ಕಬಳ್ಳಾಪುರ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಚಿಕ್ಕಬಳ್ಳಾಪುರ ಜಿಲ್ಲೆ |
| | **ಮೈಸೂರು ಪ್ರಾಂತ** | |
| 10 | ಮೈಸೂರು | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ಮೈಸೂರು ಜಿಲ್ಲೆ |
| 11 | ಚಾಮರಾಜನಗರ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪನಿರ್ದೇಶಕರು, ಚಾಮರಾಜನಗರ ಜಿಲ್ಲೆ |
| 12 | ಮಂಡ್ಯ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ಮಂಡ್ಯ ಜಿಲ್ಲೆ |
| 13 | ಹಾಸನ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ಹಾಸನ ಜಿಲ್ಲೆ. |
| 14 | ಚಿಕ್ಕಮಗಳೂರು | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪನಿರ್ದೇಶಕರು, ಚಿಕ್ಕಮಗಳೂರು ಜಿಲ್ಲೆ |
| 15 | ಕೊಡಗು | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪನಿರ್ದೇಶಕರು, ಕೊಡಗು ಜಿಲ್ಲೆ, ಮಡಿಕೇರಿ. |

| ಕ್ರ. ಸಂ. | ಜಿಲ್ಲೆಯ ಹೆಸರು | ಚುನಾವಣಾಧಿಕಾರಿಯಾಗಿ ನೇಮಿಸಲ್ಪಟ್ಟ ಅಧಿಕಾರಿ |
|---|---|---|
| 16 | ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪನಿರ್ದೇಶಕರು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು |
| 17 | ಉಡುಪಿ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಉಡುಪಿ ಜಿಲ್ಲೆ |
| | **ಬೆಳಗಾವಿ ಪ್ರಾಂತ** | |
| 18 | ಬೆಳಗಾವಿ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ಬೆಳಗಾವಿ ಜಿಲ್ಲೆ |
| 19 | ವಿಜಯಪುರ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ವಿಜಯಪುರ ಜಿಲ್ಲೆ |
| 20 | ಬಾಗಲಕೋಟೆ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ಬಾಗಲಕೋಟ ಜಿಲ್ಲೆ |
| 21 | ಧಾರವಾಡ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಧಾರವಾಡ ಜಿಲ್ಲೆ |
| 22 | ಹಾವೇರಿ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪನಿರ್ದೇಶಕರು, ಹಾವೇರಿ ಜಿಲ್ಲೆ |
| 23 | ಗದಗ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಗದಗ ಜಿಲ್ಲೆ |
| 24 | ಉತ್ತರ ಕನ್ನಡ ಜಿಲ್ಲೆ, ಕಾರವಾರ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಉತ್ತರ ಕನ್ನಡ ಜಿಲ್ಲೆ |
| | **ಕಲಬುರಗಿ ಪ್ರಾಂತ** | |
| 25 | ರಾಯಚೂರು | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ರಾಯಚೂರು ಜಿಲ್ಲೆ. |
| 26 | ಕೊಪ್ಪಳ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಕೊಪ್ಪಳ ಜಿಲ್ಲೆ |
| 27 | ಕಲಬುರಗಿ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಕಲಬುರಗಿ ಜಿಲ್ಲೆ |
| 28 | ಬಳ್ಳಾರಿ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಬಳ್ಳಾರಿ ಜಿಲ್ಲೆ |
| 29 | ಬೀದರ್ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಬೀದರ್ ಜಿಲ್ಲೆ |
| 30 | ಯಾದಗಿರಿ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಯಾದಗಿರಿ ಜಿಲ್ಲೆ |

ಚುನಾವಣಾಧಿಕಾರಿಗಳು ಅವರ ಕಾರ್ಯವ್ಯಾಪ್ತಿಗೆ ಬರುವಂತಹ ಸೌಹಾರ್ದ ಸಹಕಾರಿಗಳ ಚುನಾವಣೆಯನ್ನು ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆ ಹಾಗೂ ಪ್ರಾಧಿಕಾರದಿಂದ ಕಾಲಕಾಲಕ್ಕೆ ನೀಡಲಾದ ಸುತ್ತೋಲೆ, ಅಧಿಸೂಚನೆ, ಆದೇಶ ಮತ್ತು ಮಾರ್ಗಸೂಚಿಗಳನ್ನು, (ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮಗಳು ಮತ್ತು ನಿಯಮಾನುಸಾರ) ಅನುಸರಿಸಿ ಪಾರದರ್ಶಕವಾಗಿ, ನಿಷ್ಪಕ್ಷಪಾತವಾಗಿ ಚುನಾವಣೆ ನಡೆಸಲು ಆದೇಶಿಸಿದೆ.

ಮೇಲೆ ತಿಳಿಸಿದಂತೆ ನೇಮಿಸಲ್ಪಟ್ಟ ಜಿಲ್ಲಾ ಚುನಾವಣಾಧಿಕಾರಿಗಳು, ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004 (2015ರ ತಿದ್ದುಪಡಿ)ರ ನಿಯಮ 5-ಎ ರಂತೆ ದಿನಾಂಕ:1-1-2022 ರಿಂದ 31-12-2022 ರವರೆಗೆ ನಡೆಯಬೇಕಾಗಿರುವ ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವಿಧದ ಸೌಹಾರ್ದ ಸಹಕಾರಿಗಳ ಚುನಾವಣೆಯನ್ನು ಹಾಲಿ ಇರುವ ಆಡಳಿತ ಮಂಡಲಿ ಅವಧಿ ಮುಕ್ತಾಯವಾಗುವ 15 ದಿನಗಳ ಮುಂಚಿತವಾಗಿ ಚುನಾವಣೆ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳತಕ್ಕದ್ದು.

(ಡಾ.ಎನ್.ಎಸ್. ಚನ್ನಪ್ಪಗೌಡ)
ಆಯುಕ್ತರು
ಸಹಕಾರಚುನಾವಣಾ ಪ್ರಾಧಿಕಾರ,
ಬೆಂಗಳೂರು.

ಪ್ರತಿಗಳನ್ನು ಈ ಕೆಳಕಂಡವರುಗಳಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ :-

1. ನಿರ್ದೇಶಕರು, ಸರ್ಕಾರಿ ಕೇಂದ್ರ ಮುದ್ರಣಾಲಯ, ಕೆಂಗೇರಿ, ಬೆಂಗಳೂರು ಇವರಿಗೆ ಮುಂದಿನ ಕರ್ನಾಟಕರಾಜ್ಯ ಪತ್ರದಲ್ಲಿ ಪ್ರಕಟಿಸುವ ಸಲುವಾಗಿ ಕಳುಹಿಸಿದೆ.
2. ಸಹಕಾರ ಸಂಘಗಳ ಅಪರ ನಿಬಂಧಕರು, (ಪತ್ತು), (ಕೈಗಾರಿಕೆ ಮತ್ತು ಹೈನುಗಾರಿಕೆ), (ವಸತಿ ಮತ್ತು ಇತರೆ), (ಬಳಕೆ ಮತ್ತು ಮಾರಾಟ), ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್‌ರಸ್ತೆ, ಬೆಂಗಳೂರು
3. ರಾಜ್ಯದ ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು.
4. ಸಹಕಾರ ಸಂಘಗಳ ಜಂಟಿ ನಿಬಂಧಕರು (ಪಟ್ಟಣ ಬ್ಯಾಂಕುಗಳ ವಿಭಾಗ), (ಕಾನೂನು ಕೋಶ),(ಐ.ಸಿ.ಡಿ.ಪಿ)

## 10ನೇ ವಾರ್ಷಿಕ ಸಾಮಾನ್ಯ ಸಭೆ



**ಉಡುಪಿ** : ದಿನಾಂಕ 02.10.2021 ರಂದು ನಿರ್ಮಾಣ್ ವಿವಿದೋದ್ದೇಶ ಸೌಹಾರ್ದ ಸಹಕಾರಿ, ಉಡುಪಿ ಇದರ 2020-21ನೇ ಸಾಲಿನ 10ನೇ ವರ್ಷದ ವಾರ್ಷಿಕ ಸಾಮಾನ್ಯ ಮಹಾಸಭೆಯು ದಿನಾಂಕ 02-10-2021ರ ಶನಿವಾರ. 10:30 ಘಂಟೆಗೆ ಹೋಟೇಲ್ ನೈವೇದ್ಯದ 'ಅನುಗ್ರಹ' ಸಭಾಂಗಣದಲ್ಲಿ ಜರುಗಿತು. ಅಧ್ಯಕ್ಷತೆ ವಹಿಸಿದ ಸಹಕಾರಿಯ ಅಧ್ಯಕ್ಷರಾದ ಮಂಚಿ ಶ್ರೀ ನಿತ್ಯಾನಂದ ನಾಯಕ್‌ರವರು ಸ್ವಾಗತಿಸುತ್ತಾ ಮಾತನಾಡಿ, ಸಹಕಾರಿಯು 1123 ಲಕ್ಷ ಕೋಟಿ ರೂಪಾಯಿಗೂ ಅಧಿಕ ವ್ಯವಹಾರ ನಡೆಸಿ 24.49ಲಕ್ಷ ರೂ. ಲಾಭಗಳಿಸಿದೆ ಸಹಕಾರಿಯ ಸದಸ್ಯರಿಗೆ ಶೇ. 17 ಲಾಭಾಂಶವನ್ನು ಘೋಷಿಸಿದರು. ಇದೇ ಸಂದರ್ಭದಲ್ಲಿ ಸಹಕಾರಿಯಿಂದ ಆರ್ಥಿಕವಾಗಿ ಹಿಂದುಳಿದಿರುವ ವೈದ್ಯಕೀಯ ಶಿಕ್ಷಣ ವ್ಯಾಸಂಗ ಮಾಡುತ್ತಿರುವ ಸಹಕಾರಿಯ ಇಬ್ಬರು ಸದಸ್ಯರ ಮಕ್ಕಳಿಗೆ ಪ್ರೋತ್ಸಾಹ ಧನವನ್ನು ನೀಡಲಾಯಿತು. ಸಹಕಾರಿಯ ಎಲ್ಲಾ ನಿರ್ದೇಶಕರು, ಸಿಬ್ಬಂದಿವರ್ಗ ಹಾಗೂ ಉಡುಪಿ ಜಿಲ್ಲಾ ಸಹಕಾರಿ ಅಭಿವೃದ್ಧಿ ಅಧಿಕಾರಿ ವಿಜಯ್ ಬಿ.ಎಸ್ ಉಪಸ್ಥಿತರಿದ್ದು ,

ಕು! ನವ್ಯ ನಾಯಕ್ ಶಾಂತಿನಗರ ಮಣಿಪಾಲ ಅವರ ಪ್ರಾರ್ಥನೆಯೊಂದಿಗೆ ಮಹಾಸಭೆಯು ಆರಂಭಗೊಂಡಿತು, ನಿರ್ದೇಶಕರಾದ ಶ್ರೀ ಬಿ. ಸುದರ್ಶನ ನಾಯಕ್ ವಂದಿಸಿದರು, ಮುಖ್ಯ ಕಾರ್ಯನಿರ್ವಾಹಕರಾದ ಪ್ರದೀಪ. ಕೆ ಕಾರ್ಯಕ್ರಮ ನಿರ್ವಹಿಸಿದರು.



## ಉದ್ಘಾಟನೆ

**ಬಾಗಲಕೋಟ** : ಶ್ರೀ ಗಜಾನನ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಜಮಖಂಡಿ ಸಹಕಾರಿಯ ನೂತನ ಕಟ್ಟಡವನ್ನು 12.09.2021 ರಂದು ವಿಜಯಪುರದ ಜ್ಞಾನ ಯೋಗಾಶ್ರಮದ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರು ಉದ್ಘಾಟನೆ ಮಾಡಿದರು.

## ಜುಮನಾಳ ವಿವಿದೋದ್ದೇಶ ಸೌಹಾರ್ದ ಸಹಕಾರಿಯ ನೂತನ ಕಟ್ಟಡ ಶಂಕು ಸ್ಥಾಪನೆ ಸಮಾರಂಭ



**ವಿಜಯಪುರ :** ದಿನಾಂಕ 30.09.2021 ರಂದು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ ಎಚ್ ಕೃಷ್ಣಾರೆಡ್ಡಿ ಇವರು ಜುಮನಾಳ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ನಿ., ಜುಮನಾಳ ಜಿಲ್ಲಾ ವಿಜಯಪುರ ಸಹಕಾರಿಯ ನೂತನ ಕಟ್ಟಡ ನಿರ್ಮಾಣ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿ ಗ್ರಾಮೀಣ ಪ್ರದೇಶದಲ್ಲಿ ಹಲವಾರ ಸಂಘ ಸಂಸ್ಥೆಗಳ ಸ್ಪರ್ಧೆಗಳ ಮಧ್ಯೆಯು ಜುಮನಾಳ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿಯು ನಿರಂತರ ಲಾಭಗಳಿಸಿ ಸಾಮಾಜಿಕ ಸೇವಾ ಕಾರ್ಯಗಳನ್ನು ಕೈಗೊಳ್ಳುತ್ತ ಬಂದಿರುತ್ತದೆ. ಸಹಕಾರಿಯ ಎಲ್ಲಾ ಆಡಳಿತ ಮಂಡಳಿಗೆ ಧನ್ಯವಾದ ತಿಳಿಸಿ ಸದರಿ ಸಹಕಾರಿಯ ಆಡಳಿತ ಮಂಡಳಿಯ ವತಿಯಿಂದ ಸನ್ಮಾನ ಸ್ವೀಕರಿಸಿದರು.

ನಂತರ ಮಾತನಾಡಿದ ಅಧ್ಯಕ್ಷರು ಸದರಿ ಸಹಕಾರಿಯ ಆಡಳಿತ ಮಂಡಳಿಯು ಕೋವಿಡ್ ಮೊದಲನೆ ಹಾಗೂ 2ನೇ ಅಲೆಯಲ್ಲಿ ಜುಮನಾಳ ಗ್ರಾಮಸ್ಥರ ಜನತೆಗೆ ಸಹಕಾರಿಯ ವತಿಯಿಂದ ಆಹಾರ ಧಾನ್ಯದ ಕಿಟ್ ವಿತರಿಸಿದರು. ಅಲ್ಲದೆ ಗ್ರಾಮದಲ್ಲಿ ಸಹಕಾರಿಯ ವತಿಯಿಂದ ಮೂರು ಲಕ್ಷದ ವೆಚ್ಚದಲ್ಲಿ ಶುದ್ಧ ಕುಡಿಯುವ ನೀರಿನ ಶುದ್ಧಿಕರಣ ಘಟಕದ ಯಂತ್ರ ಅಳವಡಿಸಿ ಗ್ರಾಮದ ಎಲ್ಲ ಜನತೆಗೆ ಕೇವಲ 5 ರೂಗಳಲ್ಲಿ 20 ಲೀಟರ ನೀರು ನೀಡುತ್ತಿದ್ದು ಸದರಿ ಸಹಕಾರಿಯ ಸಾಮಾಜಿಕ ಕಾರ್ಯಕ್ಕೆ ಅಭಿನಂದಿಸಿದರು. ನಂತರ 2022ನೇ ಫೆಬ್ರವರಿ ತಿಂಗಳಲ್ಲಿ ಜರುಗುವ ಸಹಕಾರಿಯ ದಶಮಾನೋತ್ಸವ ಹಾಗೂ ನೂತನ ಕಟ್ಟಡ ಉದ್ಘಾಟನೆಗೆ ಆಡಳಿತ ಮಂಡಳಿಯು ಅಧಿಕೃತವಾಗಿ ಆಹ್ವಾನ ನೀಡಿದರು. ದಶಮಾನೋತ್ಸವ ಹಾಗೂ ಸಹಕಾರಿಯ ಕಟ್ಟಡ ಉದ್ಘಾಟನೆಗೆ ಆಗಮಿಸುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಬೆಳಗಾವಿ ಪ್ರಾಂತದ ಟಾಸ್ಕಫೋರ್ಸ ಮುಖ್ಯಸ್ಥರಾದ ಶ್ರೀ ಶ್ರೀಕಾಂತ್ ಬರುವೆ ಹಾಗೂ ಸಹಕಾರಿಯ ಅಧ್ಯಕ್ಷರಾದ ಶ್ರೀ ಯಮನಪ್ಪ ವೈ ಸಾತಿಹಾಳ ಹಾಗೂ ಎಲ್ಲಾ ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.



## ಕುರಿಹಿನ ಶೆಟ್ಟಿ ಸೌಹಾರ್ದ ಸಹಕಾರಿಗೆ ಭೇಟಿ

**ಬೆಂಗಳೂರು :** ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರು ಕುರುಹಿನ ಶೆಟ್ಟಿ ಸೌಹಾರ್ದ ಸಹಕಾರಿ ನಿ. ಬೆಂಗಳೂರು ಇದರ ನಿರ್ದೇಶಕರ ಸಭೆಯಲ್ಲಿ ಭಾಗವಹಿಸಿ ಅಗತ್ಯ ಮಾರ್ಗದರ್ಶನ ಮಾಡಿದರು.



**ಶಿವಮೊಗ್ಗ :** ದಿನಾಂಕ 3–10–2010 ರಂದು ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಶಿವಮೊಗ್ಗ ಇದರ ಸಾಮಾನ್ಯ ಸಭೆಯು ಜರುಗಿತು. ಈ ಸಾಮಾನ್ಯ ಸಭೆಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರು ಹಾಗೂ ವಿಪ್ರ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ಶ್ರೀ ಎ ಆರ್ ಪ್ರಸನ್ನಕುಮಾರ್ ಅವರು ಭಾಗವಹಿಸಿದ್ದರು. ಈ ಸಮಯದಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ಅವರು ಭಾಗವಹಿಸಿದ್ದರು. ಸಾಮಾನ್ಯ ಸಭೆಯು ನಿಯಮಬದ್ಧವಾಗಿ ಉತ್ತಮ ಚರ್ಚೆ ಮೂಲಕ ಯಶಸ್ವಿಯಾಗಿ ನಡೆಯಿತು.



**ಶಿವಮೊಗ್ಗ :** ದಿನಾಂಕ 3–10–2010 ರಂದು ಸಂಜೆ 4.00 ಗಂಟೆಗೆ ಸಮ್ಮಿಲನ ಕೃಷಿ ಸಂಸ್ಕರಣ ಸೌಹಾರ್ದ ಸಹಕಾರಿ ನಿಯಮಿತ, ಕೋಟೆಗದ್ದೆ, ತೀರ್ಥಹಳ್ಳಿ, ಶಿವಮೊಗ್ಗ ಜಿಲ್ಲೆ ಇದರ ಸಾಮಾನ್ಯ ಸಭೆಯು ಜರುಗಿತು. ಈ ಸಾಮಾನ್ಯ ಸಭೆಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎ ಆರ್ ಪ್ರಸನ್ನಕುಮಾರ್ ಅವರು ಭಾಗವಹಿಸಿದ್ದರು. ಈ ಸಮಯದಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ಅವರು ಭಾಗವಹಿಸಿದ್ದರು. ಸಾಮಾನ್ಯ ಸಭೆಯು ನಿಯಮಬದ್ಧವಾಗಿ ಉತ್ತಮ ಚರ್ಚೆ ಮೂಲಕ ಯಶಸ್ವಿಯಾಗಿ ನಡೆಯಿತು.

## ಪಾವಗಡ ಸೌಹಾರ್ದ ಸಹಕಾರಿಯ ತುಮಕೂರು ಸ್ವಂತ ಕಟ್ಟಡದ ಉದ್ಘಾಟನೆ.



**ತುಮಕೂರು :** ದಿನಾಂಕ 17-09-2021ರಂದು ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ-ಆಪರೇಟಿವ್ ಲಿ., ಇದರ ತುಮಕೂರು ಶಾಖೆ-04 ರ ನೂತನ ಸ್ವಂತ ಕಟ್ಟಡ ಉದ್ಘಾಟನಾ ಸಮಾರಂಭ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ರವರು ವಹಿಸಿದ್ದರು. ಈ ಸಂದರ್ಭದಲ್ಲಿ ತುಮಕೂರು ಲೋಕಸಭಾ ಸದಸ್ಯರಾದ ಶ್ರೀ ಜಿ.ಎಸ್.ಬಸವರಾಜು ರವರು, ಮಾಜಿ ಶಾಸಕರು ಹಾಗೂ ತುಮಕೂರು ಡಿ.ಸಿ.ಸಿ ಬ್ಯಾಂಕ್ ಅಧ್ಯಕ್ಷರಾದ ಶ್ರೀ ಕೆ.ಎನ್ ರಾಜಣ್ಣ ರವರು, ಮಾಜಿ ಸಚಿವರಾದ ಶ್ರೀ ಎಸ್ ಶಿವಣ್ಣ ರವರು, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯ ರವರು, ಸಂಯುಕ್ತ ಸಹಕಾರಿಯ ತರಬೇತಿ ಅಧಿಕಾರಿಯಾದ ಶ್ರೀ ವಿ.ಜೆ ಕಾರಕೂನ ರವರು, ಜಿಲ್ಲಾ ಸಂಯೋಜಕರಾದ ಶ್ರೀ ಕುಶಾಲ್ ಹೆಚ್.ಎಂ ಹಾಗೂ ಶ್ರೀ ಉಮೇಶ್ ಎ.ಎಸ್ ರವರು ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ಸಹಕಾರಿಯ ಆಡಳಿತ ಮಂಡಳಿಯ ನಿರ್ದೇಶಕರು, ಸಹಕಾರಿ ಸದಸ್ಯರುಗಳು, ಸಹಕಾರಿ ಸಂಸ್ಥೆಯ ಸಿಬ್ಬಂದಿಗಳು ಭಾಗವಹಿಸಿದ್ದರು.

## ಶಾಖೆ ಉದ್ಘಾಟನೆ.



**ಮೈಸೂರು :** ಕದಂಬ ಸೌಹಾರ್ದ ಸಹಕಾರಿ ನಿ., ಶಿರಸಿ ಇದರ ಮೈಸೂರು ಶಾಖೆಯನ್ನು ಮಾನ್ಯ ಸಂಸದರಾದ ಹಾಗೂ ಸಹಕಾರಿಯ ಅಧ್ಯಕ್ಷರಾದ ಶ್ರೀ ಅನಂತ ಕುಮಾರ್ ಹೆಗಡೆ ಮತ್ತು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹೆಚ್. ವಿ. ರಾಜೀವ್ ರವರು ಉದ್ಘಾಟನೆ ಮಾಡಿದರು. ಈ ಸಂದರ್ಭದಲ್ಲಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ್ ಬಿರಾದಾರ ರವರು ಉಪಸ್ಥಿತರಿದ್ದರು.



**ಕೊಪ್ಪಳ :** ಸೌಭಾಗ್ಯಲಕ್ಷ್ಮಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ, ಕೊಪ್ಪಳ ಇದರ ನೂತನ 7ನೇ ಶಾಖೆಯನ್ನು ಹೂವಿನಹಡಗಲಿ ನಗರದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ವಿಶ್ವನಾಥ ಚ. ಹಿರೇಮಠರವರು ಭಾಗವಹಿಸಿದ್ದರು. ಈ ಕಾರ್ಯಕ್ರಮದ ದಿವ್ಯಸಾನಿಧ್ಯವನ್ನು ಶ್ರೀ ಮ.ನಿ.ಪ್ರ.ಡಾ॥ ಹಿರೇಶಾಂತವೀರ ಮಹಾಸ್ವಾಮಿಗಳು, ಗವಿಮಠರವರು ವಹಿಸಿದ್ದರು, ಕಾರ್ಯಕ್ರಮದಲ್ಲಿ ಸಹಕಾರಿ ಅಧ್ಯಕ್ಷರು, ಆಡಳಿತ ಮಂಡಳಿಯ ಸದಸ್ಯರು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



## ಸೌಹಾರ್ದ ಸಹಕಾರಿಗಳ ಸಭೆ

**ಹೂವಿನಹಡಗಲಿ :** ಹೂವಿನಹಡಗಲಿ ತಾಲೂಕಿನ ಸೌಹಾರ್ದ ಸಹಕಾರಿಗಳ ಸಭೆಯನ್ನು ಆಯೋಜಿಸಿದ್ದು ಸಭೆಯ ಅಧ್ಯಕ್ಷತೆಯನ್ನು ಶ್ರೀ ವಿಶ್ವನಾಥ. ಚ. ಹಿರೇಮಠರವರು ಭಾಗವಹಿಸಿ ಸಹಕಾರಿಗಳ ಗುಣಮಟ್ಟದ ಬೆಳವಣಿಗೆಗೆ ಪೂರಕವಾದ ಮಾಹಿತಿ ಮತ್ತು ಒಕ್ಕೂಟ ಕುರಿತು ಸಭೆಯನ್ನು ನಡೆಸಲಾಯಿತು. ಹೂವಿನಹಡಗಲಿ 16 ಸೌಹಾರ್ದ ಸಹಕಾರಿಯ 28 ಪ್ರತಿನಿಧಿಗಳು ಭಾಗವಹಿಸಿದ್ದರು.

## ಉದ್ಘಾಟನೆ



**ಮೈಸೂರು :** ದಿನಾಂಕ 05.09.2021 ರಂದು ಆದ್ಯ ಸೌಹಾರ್ದ ಸಹಕಾರಿ ನಿ., ಮೈಸೂರು ಇದರ ಉದ್ಘಾಟನೆಯನ್ನು ಹಾಗು ಪ್ರಥಮ ಸರ್ವ ಸದಸ್ಯರ ಸಭೆಯನ್ನು ಮಾನ್ಯ ಶಾಸಕರಾದ ಶ್ರೀ ಜಿ ಟಿ ದೇವೇಗೌಡರು ನೆರವೇರಿಸಿದರು. ನಂತರ ಮಾತನಾಡಿ ಸಹಕಾರ ಸಂಘಗಳ ಬೆಳವಣಿಗೆಗೆ ಆಡಳಿತ ಮಂಡಳಿಯು ಪ್ರಾಮಾಣಿಕವಾಗಿ ದುಡಿಯಬೇಕು, ಹಾಗೂ ಮಂಡಳಿಯು ಸದಸ್ಯರೊಂದಿಗೆ ಉತ್ತಮ ಬಾಂಧವ್ಯ ಹೊಂದಿರಬೇಕು. ಆಡಳಿತ ಮಂಡಳಿ ಜೊತೆ ಸಹಕಾರಿಯ ಸಿಬ್ಬಂದಿಗಳೂ ಸಹ ಪ್ರಾಮಾಣಿಕವಾಗಿ ದುಡಿಯಬೇಕು. ಸದಸ್ಯರಿಗೆ ನಂಬಿಕೆ ಬರುವ ರೀತಿಯಲ್ಲಿ ಸಹಕಾರಿಯು ಕಾರ್ಯನಿರ್ವಹಿಸಬೇಕು ಎಂದು ಹೇಳಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಹೆಚ್ ವಿ ರಾಜೀವ್ ರವರು ಭಾಗವಹಿಸಿದ್ದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಎಂ.ಸಿ.ಡಿ.ಸಿ.ಸಿ ಬ್ಯಾಂಕಿನ ಅಧ್ಯಕ್ಷರು ಹಾಗೂ ಅಪೆಕ್ಸ್ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಜಿ.ಡಿ. ಹರೀಶ್‌ಗೌಡ, ಅವರು ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡುತ್ತ, ಆಡಳಿತ ಮಂಡಳಿಯ ಸದಸ್ಯರು ಹಾಗೂ ಸದಸ್ಯರೊಂದಿಗೆ ಇರಬೇಕಾದ ಸಂಬಂಧ ಮತ್ತು ಸಂಘದ ವ್ಯವಹಾರದಲ್ಲಿ ಇರಬೇಕಾದ ಪಾರದರ್ಶಕತೆ ಬಗ್ಗೆ ಸುಧೀರ್ಘ ವಿವರಣೆಯನ್ನು ಭೋದಿಸಿ, ಮುಂದಿನ ಮಹಾಸಭೆಗೆ ನನ್ನನ್ನು ಕರೆಸಿ ಸಹಕಾರಿಯ ಅಭಿವೃದ್ಧಿಯ ಕುರಿತು ಲೆಕ್ಕಪತ್ರಗಳ ಅಂಕಿ ಅಂಶಗಳನ್ನು ನನ್ನ ಉಪಸ್ಥಿತಿಯಲ್ಲಿ ಮಂಡಿಸುವಂತೆ ಸಭೆಯಲ್ಲಿ ತಿಳಿಸಿ, ಸಹಕಾರಿಯು ಸದಸ್ಯರಿಂದ ಹೆಚ್ಚು ಹೆಚ್ಚು ಠೇವಣಿ ಸ್ವೀಕರಿಸಿ, ಸದಸ್ಯರಿಗೆ ಹೆಚ್ಚಿನ ಸಾಲ ನೀಡಿ ಸಹಕಾರಿಯು ಶೀಘ್ರವಾಗಿ ಅಭಿವೃದ್ಧಿ ಹೊಂದಲಿ ಎಂದು ಆಶಿಸಿದರು.



**ಅಂಕೋಲಾ :** ಪ್ರಭಾಕರ ಕೋರೆ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಸಹಕಾರಿ ವತಿಯಿಂದ ಮಾಜಿ ರಾಜ್ಯ ಸಭಾ ಸದಸ್ಯರು ಕೆ.ಎಲ್.ಇ ಸಂಸ್ಥೆಯ ಕಾರ್ಯಾಧ್ಯಕ್ಷರು ಹಾಗೂ ಸಹಕಾರಿಯ ಸಂಸ್ಥಾಪಕರಾದ ಸನ್ಮಾನ್ಯ ಶ್ರೀ ಡಾ. ಪ್ರಭಾಕರ ಅಣ್ಣಾ ಕೋರೆ ಇವರ 74ನೇ ಹುಟ್ಟು ಹಬ್ಬದ ನಿಮಿತ್ತ ಕೋವೀಡ್–19 ಮೊದಲನೆಯ ಲಸಿಕೆಯನ್ನು ಸಹಕಾರಿಯ 500 ಸದಸ್ಯರಿಗೆ ಉಚಿತವಾಗಿ ಲಸಿಕೆ ನೀಡಲಾಯಿತು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ, ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.



**ಕಲಬುರಗಿ :** ಶ್ರೀ ಧನಲಕ್ಷ್ಮೀ ಸೌಹಾರ್ದ ಸಹಕಾರಿ ನಿ., ಸರಸಂಬಾ ಇದರ ಆಳಂದ ಶಾಖೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜಾಂತಿಕರವರು ನೆರವೇರಿಸಿದರು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಶ್ರೀ ಷ.ಬ್ರ. ಶ್ರೀ ಸಿದ್ಧೇಶ್ವರ ಹಿರೇಮಠ ಶಿವಾಚಾರ್ಯರವರು, ಆಳಂದ ವಹಿಸಿದರು, ನೇತೃತ್ವ ಹಜರತ ಸೈಯದ ಶಹಾ ಮುಸ್ಥಫಾ ಖಾದರಿರವರು ವಹಿಸಿದರು. ವೇದಿಕೆ ಕಾರ್ಯಕ್ರಮದ ಉದ್ಘಾಟನೆಯನ್ನು ಆಳಂದ ತಾಲೂಕಿನ ಮಾನ್ಯ ಶಾಸಕರಾದ ಶ್ರೀ ಸುಭಾಷ ಆರ್ ಗುತ್ತೆದಾರ ರವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನರವರು ಹಾಗೂ ಕಲಬುರಗಿ ಜಿಲ್ಲಾ ಒಕ್ಕೂಟದ ಅಧ್ಯಕ್ಷರು ಶ್ರೀ ಎಸ್ ಎಸ್ ಪಾಟೀಲರವರು, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ರವರು, ಹಾಗೂ ಕಲಬುರಗಿ ಹಾಗೂ ಯಾದಗಿರಿ ಜಿಲ್ಲಾ ಡಿಸಿಸಿ ಬ್ಯಾಂಕನ ಉಪಾಧ್ಯಕ್ಷರಾದ ಶ್ರೀ ಸುರೇಶ ಸಜ್ಜನರವರು, ಬೀದರ ಒಕ್ಕೂಟದ ನಿರ್ದೇಶಕರಾದ ರಾಜಶೇಖರ ನಾಗಮೂರ್ತಿರವರು ಹಾಗೂ ಸಹಕಾರಿಯ ಅಧ್ಯಕ್ಷರಾದ ಮಹಾಂತಪ್ಪಾ ಆಲೂರೆರವರು ಉಪಸ್ಥಿತರಿದ್ದರು.



## ಉದ್ಘಾಟನೆ

**ಮಂಡ್ಯ :** ಶ್ರೀ ಶಾರದ ವಿಪ್ರ ಸೌಹಾರ್ದ ಸಹಕಾರಿ ನಿ., ಮಂಡ್ಯ ಇದರ ಕಛೇರಿ ಉದ್ಘಾಟನೆಯನ್ನು ಶ್ರೀ ಹೆಚ್. ವಿ ರಾಜೀವ್, ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ಡಾ. ವಿ ಭಾನುಪ್ರಕಾಶ್ ಶರ್ಮ, ನಿರ್ದೇಶಕರು, ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ, ಬೆಂಗಳೂರು, ಸಹಕಾರಿ ಅಧ್ಯಕ್ಷರಾದ ಶ್ರೀ ಆರ್. ರಾಮಪ್ರಸಾದ್, ಉಪಾಧ್ಯಕ್ಷರ ಶ್ರೀ ನರಸಿಂಹ ಮೂರ್ತಿ, ನಿರ್ದೇಶಕರು ಹಾಗೂ ಸಿಇಓ ರಾದ ಶ್ರೀ ಲಕ್ಷ್ಮೀ ನಾರಾಯಣ ಹಾಜರಿದ್ದರು.



## 21ನೇ ವಾರ್ಷಿಕ ಸಾಮಾನ್ಯ ಸಭೆ

**ಬೀದರ :** ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿ ನಿ., ಬೀದರ್ ಇದರ 21ನೇ ಸರ್ವ ಸದಸ್ಯರ ಸಾಮಾನ್ಯ ಸಭೆಯನ್ನು ಸಹಕಾರಿಯ ಅಧ್ಯಕ್ಷರಾದ ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಸಹಕಾರಿಯ ನಿರ್ದೇಶಕರು, ಸದಸ್ಯರು, ಮುಖ್ಯ ಕಾರ್ಯನಿರ್ವಾಹಕರು ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಸುಕೋ ಬ್ಯಾಂಕ್ 28ನೇ ಸಾಮಾನ್ಯ ಸಭೆ : ಶೇ.9 ರಷ್ಟು ಡಿವಿಡೆಂಡ್ ಘೋಷಣೆ



**ಬಳ್ಳಾರಿ :** ದಿನಾಂಕ 25.09.2021 ರಂದು ಸುಕೋ ಬ್ಯಾಂಕ್‌ನ 28ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯು ವರ್ಚ್ಯುಯಲ್ ಮೀಟಿಂಗ್ ಮೂಲಕ ಶನಿವಾರ ನಡೆದಿದ್ದು, ಶೇ. 9 ರಷ್ಟು ಡಿವಿಡೆಂಡ್ (ಲಾಭಾಂಶ) ವನ್ನು ಘೋಷಣೆ ಮಾಡಲಾಯಿತು.

ಬ್ಯಾಂಕ್‌ನ ಅಧ್ಯಕ್ಷ ಮೋಹಿತ್ ಮಸ್ಕಿ ಅವರು ಈ ಮಾಹಿತಿ ನೀಡಿದ್ದು, ಸರ್ವ ಸದಸ್ಯರ ಸಭೆಯಲ್ಲಿ ಸುಕೋ ಬ್ಯಾಂಕ್ ಅನ್ನು ಸ್ಮಾಲ್ ಫೈನಾನ್ಸ್ ಬ್ಯಾಂಕ್ ಆಗಿ ಪರಿವರ್ತನೆಗೊಳಿಸಲು ಸರ್ವ ಸದಸ್ಯರು ಸರ್ವಾನುಮತದ ಒಪ್ಪಿಗೆಯನ್ನು ನೀಡಿದ್ದಾರೆ ಎಂದರು. ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಕಾರಟಗಿಯ ಶ್ರೀ ಶರಣ ಬಸವೇಶ್ವರ ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕ್ ಸುಕೋ ಬ್ಯಾಂಕ್‌ನೊಂದಿಗೆ ವಿಲೀನಗೊಳ್ಳುವ ಪ್ರಸ್ತಾವನೆ ರಿಸರ್ವ್ ಬ್ಯಾಂಕ್‌ನ ಪರಿಶೀಲನೆಯ ಹಂತದಲ್ಲಿದ್ದು, ಶೀಘ್ರದಲ್ಲೇ ವಿಲೀನ ಪ್ರಕ್ರಿಯೆ ಪೂರ್ಣಗೊಳ್ಳುವ ಕುರಿತು ಈ ಸಭೆಯಲ್ಲಿ ಚರ್ಚೆ ನಡೆಸಲಾಯಿತು ಎಂದರು.



## ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಗೆ ಕಾರ್ಯಾನುಗುಣ ನಿರ್ದೇಶಕರಾಗಿ ಶ್ರೀ ರವೀಶ್ ಪಿ ಹಾಗೂ ಶ್ರೀ ಶ್ರೀಕಾಂತ ವಿ.ಡಿ ಆಯ್ಕೆ



ಪುತ್ತೂರು : ಪುತ್ತೂರಿನಲ್ಲಿ ಪ್ರಧಾನ ಕಛೇರಿಯನ್ನು ಹೊಂದಿ ರಾಜ್ಯವ್ಯಾಪಿ ಕಾರ್ಯಾಚರಿಸುತ್ತಿರುವ ರಾಜ್ಯದ ಪ್ರತಿಷ್ಠಿತ ಸಹಕಾರಿ ಸಂಸ್ಥೆಯಾಗಿರುವ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಕಾರ್ಯಾನುಗುಣ ನಿರ್ದೇಶಕರುಗಳಾಗಿ ಹೈಕೋರ್ಟ್ ವಕೀಲರಾಗಿರುವ ಬಂಟ್ವಾಳ ತಾಲೂಕು ಪುಣಚ ಗ್ರಾಮದ ಶ್ರೀ ರವೀಶ್ ಪಿ ಹಾಗೂ ಕೊಡಗು ಜಿಲ್ಲೆ ವಿರಾಜಪೇಟೆಯ ಖ್ಯಾತಛಾಯಾ ಚಿತ್ರಗಾರರು ಮತ್ತು ಪಕ್ಷಿತಜ್ಞರಾಗಿರುವ ಶ್ರೀ ಶ್ರೀಕಾಂತ್ ವಿ.ಡಿ ಇವರು ಸಹಕಾರಿಯ ಆಡಳಿತ ಮಂಡಲಿಗೆ ಕಾರ್ಯಾನುಗುಣ ನಿರ್ದೇಶಕರಾಗಿ ಸೇರ್ಪಡೆಗೊಂಡಿರುತ್ತಾರೆ. ಸಹಕಾರಿಯು ಪ್ರಸ್ತುತ ರಾಜ್ಯಾದ್ಯಂತ 17 ಶಾಖೆಗಳು ರೂ. 213 ಕೋಟಿ ಠೇವಣಿಹೊಂದಿದ್ದು, ರೂ. 167 ಕೋಟಿ ಸಾಲ ನೀಡಿದ್ದು, 35,000 ಸದಸ್ಯರನ್ನು ಹೊಂದಿ ಸೇವೆಗಳನ್ನು ನೀಡುತ್ತಿದೆ.



## ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆ

**ಕಲಬುರಗಿ :** ದಿನಾಂಕ 17.09.2021 ರಂದು ಪ್ರಾಂತೀಯ ಕಛೇರಿ ಕಲಬುರಗಿಯಲ್ಲಿ 73ನೇ ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆಯ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ಮತ್ತು ಶ್ರೀ ವೈ.ಟಿ ಪಾಟೀಲರವರು ನೆರವೇರಿಸಿದರು. ಈ ಸಂದರ್ಭದಲ್ಲಿ ಪ್ರಾಂತೀಯ ವ್ಯವಸ್ಥಾಪಕರು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ ಕುರಿತು ಸಭೆ



**ಹೂವಿನಹಡಗಲಿ :** ದಿನಾಂಕ 28 ಸೆಪ್ಟೆಂಬರ್ 2021ರಂದು ಹೂವಿನಹಡಗಲಿ ತಾಲೂಕಿನಲ್ಲಿ ಸೌಹಾರ್ದ ಸಹಕಾರಿಗಳಿಗಾಗಿ ಆಯೋಜಿಸಿದ್ದ ಮುಖ್ಯ ಕಾರ್ಯನಿರ್ವಾಹಕರ ಕರ್ತವ್ಯ ಹಾಗೂ ಇತ್ತೀಚಿನ ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿ ಕುರಿತು ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ವಿಶ್ವನಾಥ. ಚ.ಹಿರೇಮಠರವರು. ಮುಖ್ಯ ವಕ್ತಾರರಾಗಿ ಶ್ರೀ ಲಿಯಾಕತ್ ಅಲಿ ನಿವೃತ್ತ ಸಹಾಯಕ ನಿಬಂಧಕರು ಭಾಗವಹಿಸಿದ್ದರು ಹಾಗೂ ಹಡಗಲಿ ತಾಲೂಕಿನ 17 ಸೌಹಾರ್ದ ಸಹಕಾರಿಗಳ 24 ಪ್ರತಿನಿಧಿಗಳು ಭಾಗವಹಿಸಿದ್ದರು.

## ಸಿದ್ಧಸಿರಿ ಸೌಹಾರ್ದ ಸಹಕಾರಿಯ ವಾರ್ಷಿಕ ಶುಲ್ಕ ಮತ್ತು ಶಿಕ್ಷಣ ನಿಧಿ ಚೆಕ್ ಸಲ್ಲಿಕೆ



**ವಿಜಯಪುರ :** ಸಿದ್ಧಸಿರಿ ಸೌಹಾರ್ದ ಸಹಕಾರಿ ನಿ, ವಿಜಯಪುರ ಈ ಸಹಕಾರಿಯಿಂದ ಸಂಯುಕ್ತ ಸಹಕಾರಿಯ 2021–22ನೇ ಸಾಲಿನ ವಾರ್ಷಿಕ ಶುಲ್ಕ ರೂ 59,000/– ಹಾಗೂ ಸನ್ 2020–21ನೇ ಸಾಲಿನ ಶಿಕ್ಷಣ ನಿಧಿ ಶುಲ್ಕ ರೂ.7,99,288/– ಗಳನ್ನು ವಿಜಯಪುರ ಜಿಲ್ಲೆಯ ಜಿಲ್ಲಾ ಸೌಹಾರ್ದ ಸಂಯೋಜಕರಾದ ಶ್ರೀ ಶಿವಕಾಂತ ಎನ್ ಇವರಿಗೆ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಬಸಯ್ಯ ಹಿರೆಮಠ ಇವರು ಚೆಕ್ ನೀಡಿದರು. ಈ ಸಂದರ್ಭದಲ್ಲಿ ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ಶಿವಾನಂದ ಅಣ್ಣಿಪ್ಪವರ, ಶ್ರೀ ಸಾಯಿಬಾಬಾ ಸಿಂದಗಿರೇ, ಶ್ರೀ ಜಗದಿಶ ಕ್ಷತ್ರಿ, ಶ್ರೀ ರಮೇಶ್ ಬಿರಾದಾರ. ಶ್ರೀ ರಾಮನಗೌಡ ಪಾಟೀಲ, ಶ್ರೀಮತಿ ಸೀಮಾ ಕೋರೆ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಜೋತಿಬಾ ಖಂಡಕಾಳೆ ಮತ್ತು ಪ್ರಧಾನ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಸ್ವಾಮಿ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಕೊಡಚಾದ್ರಿ ಅಡಿಕೆ ಸೌಹಾರ್ದ ಸಹಕಾರಿಯ ಮೊದಲನೇ ವಾರ್ಷಿಕೋತ್ಸವ



**ಸಾಗರ :** ಕೊಡಚಾದ್ರಿ ಅಡಿಕೆ ಸೌಹಾರ್ದ ಸಹಕಾರಿ ನಿಯಮಿತ, ಹೊಸನಗರ ಇದರ "ಸಾಗರ ಶಾಖೆ"ಯ ಮೊದಲನೇ ವಾರ್ಷಿಕೋತ್ಸವ ಸಂದರ್ಭದಲ್ಲಿ ಸಾಗರ ತಾಲೂಕಿನಾದ್ಯಂತ ಒಟ್ಟು 10 ಸ್ಥಳಗಳಲ್ಲಿ "ಅಡಿಕೆ ಬೆಳೆಗಾರರ ಸಂಪರ್ಕ ಅಭಿಯಾನ" ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಪ್ರತಿ ಸಭೆಗಳಲ್ಲೂ ರೈತರು ಅತ್ಯಂತ ಉತ್ಸಾಹದಿಂದ ಪಾಲ್ಗೊಂಡಿದ್ದು ವಿಶೇಷವಾಗಿತ್ತು. ದಿನಾಂಕ 18–08–2021 ರಂದು ಆನಂದಪುರದಲ್ಲಿ ಆರಂಭವಾದ ಅಭಿಯಾನವು ದಿನಾಂಕ 04–09–2021ರಂದು ಅರಳಗೋಡು ಗ್ರಾಮದಲ್ಲಿ ಸಮಾರೋಪ ಸಮಾರಂಭದೊಂದಿಗೆ ಸಂಪನ್ನಗೊಂಡಿತು. ಈ ಸಭೆಗಳಲ್ಲಿ ಸಾಗರ ಶಾಖೆಯ ಉದ್ಘಾಟನೆ ದಿನಾಂಕದಿಂದ 1 ವರ್ಷದ ಅವಧಿಯಲ್ಲಿ ಸಾಗರ ಶಾಖೆಗೆ 5 ಕ್ವಿಂಟಾಲ್ ಅಡಿಕೆ ಹಾಕಿದ ಒಟ್ಟು 140 ಸದಸ್ಯರಿಗೆ ಬೆಳ್ಳಿ ನಾಣ್ಯವನ್ನು ಉಡುಗೊರೆ ನೀಡಲಾಯಿತು. ಸಭೆಗಳಲ್ಲಿ ಸ್ಥಳೀಯ ಪ್ರಗತಿಪರ ರೈತರನ್ನು ಮುಖ್ಯ ಅತಿಥಿಗಳನ್ನಾಗಿಸಿ ಗೌರವಿಸಲಾಯಿತು. ಪ್ರತಿಕಾ ಕಾರ್ಯಕ್ರಮದ ಕೊನೆಯಲ್ಲಿ ಸಹಕಾರಿಯ ಸೌಲಭ್ಯಗಳು ಹಾಗೂ ಕುಂದುಕೊರತೆಗಳ ಬಗ್ಗೆ ಸದಸ್ಯರೊಂದಿಗೆ ಸಂವಾದ ನಡೆಸಲಾಯಿತು. ಅಭಿಯಾನದ ಉದ್ಘಾಟನೆಯನ್ನು ಆನಂದಪುರದ ಖ್ಯಾತ ಉದ್ಯಮಿಗಳಾದ ಸಂತೋಷ್ ಇಂಡಸ್ಟ್ರೀಸ್‌ನ ಮಾಲೀಕರಾದ ಶ್ರೀಅಶ್ವಿನ್‌ರವರು ನೆರವೇರಿಸಿದರು. ಮಾನ್ಯ ಮುಖ್ಯಮಂತ್ರಿ ಶ್ರೀಯಡಿಯೂರಪ್ಪನವರ ವೈಯಕ್ತಿಕ ಕಾರ್ಯದರ್ಶಿ ಶ್ರೀ ಖೈರಾರಾಜಣ್ಣನವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

# ರಾಜ್ಯದ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಗಳು



**ಶಿವಮೊಗ್ಗ** : ಸರಸ್ವತಿ ಸೌಹಾರ್ದ ಸಹಕಾರಿ ನಿಯಮಿತ, ತೀರ್ಥಹಳ್ಳಿ ಸಹಕಾರಿಯ "ಹನ್ನೆರಡನೇ ಸರ್ವಸದಸ್ಯರ ಮಹಾಸಭೆ" ದಿನಾಂಕ 05-09-2021ರ ಭಾನುವಾರ ತೀರ್ಥಹಳ್ಳಿಯ ವಿದ್ಯಾಧಿರಾಜ ಸಭಾಗೃಹದಲ್ಲಿ ನಡೆಯಿತು. ಬೆಳಿಗ್ಗೆ 11.30ಗಂಟೆಗೆ ಸಹಕಾರಿಯ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಬಾಳೇಬೈಲು ರಾಘವೇಂದ್ರ ಮತ್ತು ತಾಲ್ಲೂಕಿನ ಹಿರಿಯ ಸಹಕಾರಿಗಳು ಜ್ಯೋತಿ ಬೆಳಗುವುದರ ಮೂಲಕ ಚಾಲನೆ ನೀಡಿದರು. ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಬಾಳೇಬೈಲು ರಾಘವೇಂದ್ರ ವಹಿಸಿದ್ದರು. ಉಪಾಧ್ಯಕ್ಷರಾದ ಶ್ರೀ ಸಂದೇಶ್ ಜವಳಿಸರ್ವರನ್ನೂ ಸ್ವಾಗತಿಸಿದರು. 2020-21ನೇ ಸಾಲಿನಲ್ಲಿ ಸಹಕಾರಿಯು ರೂ28,16,149/- ಲಕ್ಷಲಾಭ ಗಳಿಸಿದ್ದು, ಶೇ.15 ರಂತೆ ಸದಸ್ಯರಿಗೆ ಲಾಭಾಂಶ ಘೋಷಿಸಲಾಯಿತು. ತೀರ್ಥಹಳ್ಳಿ ಕ್ಷೇತ್ರದ ಶಾಸಕರು, ಕರ್ನಾಟಕ ಘನ ಸರ್ಕಾರದ ಗೃಹ ಮಂತ್ರಿಗಳಾದ ಶ್ರೀ ಆರಗ ಜ್ಞಾನೇಂದ್ರ ದಂಪತಿಗಳನ್ನು ಸಹಕಾರಿಯ ಪರವಾಗಿ ಅಭಿನಂದಿಸಿ ಸನ್ಮಾನಿಸಲಾಯಿತು.



**ಶಿವಮೊಗ್ಗ** : ದಿನಾಂಕ 05-09-2021 ನೇ ಭಾನುವಾರ ಬೆಳಿಗ್ಗೆ 11-00 ಗಂಟೆಗೆ ಸಾರಸ್ವತ ಸೌಹಾರ್ದ ಸಹಕಾರಿಯ ಹತ್ತೊಂಬತ್ತನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಗೌಡ ಸಾರಸ್ವತ ಕಲ್ಯಾಣ ಮಂದಿರ, ಶಿವಮೊಗ್ಗ ಇಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಎಂ.ಆರ್.ಗೋಪಾಲಕೃಷ್ಣ ಪಂಡಿತ್ ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಈ ಸಂದರ್ಭ ಸಹಕಾರಿಯ ಮಾನ್ಯ ಆಡಳಿತ ಮಂಡಲಿಯ ಎಲ್ಲಾ ಪದಾಧಿಕಾರಿಗಳು ಹಾಗೂ ಮಾನ್ಯ ಷೇರುದಾರ ಸದಸ್ಯರು ಸಹಕಾರಿಯ ಸಿಬ್ಬಂದಿ ವರ್ಗ ಹಾಗೂ ಸಹಕಾರಿಯ ಪಿಗ್ಮಿ ಆರ್.ಡಿ ಏಜೆಂಟರು ಭಾಗವಹಿಸಿ ಯಶಸ್ವಿಗೊಳಿಸಿದರು ಸದರಿ ಹಣಕಾಸು ವರ್ಷದಲ್ಲಿ ನಮ್ಮೆಲ್ಲ ಷೇರುದಾರ ಸದಸ್ಯರಿಗೆ ಶೇಕಡ 10% ಡಿವಿಡೆಂಡ್ ವಿತರಿಸಿದೆ.



**ಚಾಮರಾಜನಗರ** : ಬೀರೂರು ಪಟ್ಟಣ ಸೌಹಾರ್ದ ಪತ್ತಿನ ಸಹಕಾರಿ ನಿ., ಬೀರೂರು ಇದರ 2020-21ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಸತೀಶ್ ಎ.ಸಿ ರವರು ಉದ್ಘಾಟನೆ ಮಾಡಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಶ್ರೀ ನವೀನ್ ಜಿ.ಪಿ ರವರು ಆಡಳಿತ ಮಂಡಳಿ ನಿರ್ದೇಶಕರು, ಸಿಇಓ, ಸಿಬ್ಬಂದಿಗಳು, ಪಿಗ್ಮಿ ಸಂಗ್ರಹಕಾರರು ಉಪಸ್ಥಿತರಿದ್ದರು.



**ಚಾಮರಾಜನಗರ** : ಸ್ನೇಹಜ್ಯೋತಿ ಮಹಿಳಾ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇದರ 2020-21ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ಉದ್ಘಾಟನೆ ಮಾಡಿದರು. ವೇದಿಕೆ ಮೇಲೆ ಶ್ರೀ ಎಂ. ನಂದೀಶ್ ಗೌಡ, ಕೆಸಾಪ್ಸ್, & ಟಿ.ಎಸ್.ಯು ಕಾರ್ಯಕ್ರಮಾಧಿಕಾರಿ, ಶ್ರೀಮತಿ ಶಿವಲೀಲಾ, ಮೇಲ್ವಿಚಾರಕರು, ಮಹಿಳಾ & ಮಕ್ಕಳ ಕಲ್ಯಾಣ ಇಲಾಖೆ, ಚಾಮರಾಜನಗರ ಶ್ರೀ ಮಹದೇವ ಪ್ರಸಾದ್, ಮೇಲ್ವಿಚಾರಕರು, ಜಿಲ್ಲಾ ಏಡ್ಸ್ ನಿಯಂತ್ರಣ ಘಟಕ, ಚಾ.ನಗರ ಹಾಜರಿದ್ದರು. ಸಭೆಯ ಅಧ್ಯಕ್ಷತೆಯನ್ನು ಶ್ರೀಮತಿ ನಾಗರತ್ನ ವಹಿಸಿದ್ದರು.



**ಮಾಲೂರು** : ದಿನಾಂಕ: 28-09-2021 ರಂದು ಶ್ರೀ ವಾಸವಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಮಾಲೂರು ಸಹಕಾರಿಯ 4ನೇ ವರ್ಷದ ವಾರ್ಷಿಕ ಮಹಾಸಭೆ ಸಹಕಾರಿ ಆವರಣದಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು, ಸಹಕಾರಿಯ ಸದಸ್ಯರು ಭಾಗವಹಿಸಿದ್ದರು.



ದಿನಾಂಕ 31.08.2021 ರಂದು ವಿಶ್ವಚೇತನ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಎ. ಲಕ್ಷ್ಮೀಶ ರವರ ಅಧ್ಯಕ್ಷತೆಯಲ್ಲಿ ಜರುಗಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎಸ್ ಜೆ ರಾಘವೇಂದ್ರ, ನಿರ್ದೇಶಕರಾದ ಎ ಬಾಲಾಜಿ ಯವರು ಸಹಕಾರಿಯ ಮಾರ್ಗದರ್ಶಕರಾದ ಶ್ರೀ ಎಲ್ ಆನಂದ ಶೆಟ್ಟಿ, ಶ್ರೀ ಎಲ್ ನಾಗರಾಜ ಶೆಟ್ಟಿ ಮತ್ತು ಶ್ರೀ ಟಿ ಎಂ ಜನಾರ್ಧನ ಶೆಟ್ಟಿ ಯವರು ಹಾಗೂ ಉಪಸ್ಥಿತರಿದ್ದರು. ಸಹಕಾರಿಯು ದಿನಾಂಕ 31.03.2021 ಕ್ಕೆ ರೂ. 10,67,756.20 ನಿವ್ವಳ ಲಾಭಗಳಿಸಿದೆ.



**ಸಿದ್ದಾಪುರ** : ವಿನಾಯಕ ಕ್ರೆಡಿಟ್ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯು ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ ಸಹಕಾರಿಯ ಅಧ್ಯಕ್ಷರಾದ ಆನಂದ ನಾಯ್ಕ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ನಂತರ ಮಾತನಾಡಿ 2020–21ನೇ ಸಾಲಿನಲ್ಲಿ 33.50 ಲಕ್ಷ ರೂ ಗಳ ನಿವ್ವಳ ಲಾಭ ಗಳಿಸಿ ಉತ್ತಮ ಪ್ರಗತಿಯನ್ನು ಸಾಧಿಸಿದೆ. ವರ್ಷಾಂತ್ಯಕ್ಕೆ 15894 ಸದಸ್ಯರನ್ನು ಹೊಂದಿದ್ದು, ವರದಿ ಸಾಲಿನಲ್ಲಿ 38.7 ಕೋಟಿ ದುಡಿಯುವ ಬಂಡವಾಳವನ್ನು ಕ್ರೋಢೀಕರಿಸಿಕೊಂಡು ಸಮಾನ ಮನಸ್ಕ ನಿರ್ದೇಶಕ ಮಂಡಳಿ ಮತ್ತು ನಿಷ್ಠಾವಂತ ಸಿಬ್ಬಂದಿಗಳ ಸಹಯೋಗದೊಂದಿಗೆ ಸಂಸ್ಥೆ ಉತ್ತಮ ಸೇವೆ ನೀಡುತ್ತಾ ಬಂದಿರುತ್ತದೆ. ಈ ಸಾಲಿನಲ್ಲಿ ಸದಸ್ಯರ ಶೇರು ಹಣದ ಮೇಲೆ 15% ಡಿವಿಡೆಂಡ್ ಘೋಷಿಸಿದೆ. ಸಂಸ್ಥೆಯ ಈವರೆಗಿನ ಪ್ರಗತಿಗೆ ಜೊತೆ ಗೂಡಿ ಕೈಜೋಡಿಸಿದ ಎಲ್ಲಾ ಸದಸ್ಯರನ್ನೂ ಅಭಿನಂದನೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಸದಾನಂದ ಕಾಮತ್, ವ್ಯವಸ್ಥಾಪಕ ನಿರ್ದೇಶಕ ವಿನಾಯಕ ನಾಯ್ಕ, ನಿರ್ದೇಶಕರು ವಿ.ಬಿ. ಶೇಟ್, ಪ್ರೇಮಾನಂದ ಕಾಮತ್, ಪರಮೇಶ್ವರ ಹನುಮಂತಪ್ಪ ವಡ್ಡರ ಇತರರು ಉಪಸ್ಥಿತರಿದ್ದರು.



**ಕಲಬುರಗಿ** : ದಿನಾಂಕ 19.09.2021 ರಂದು ಶ್ರೀ ಮಹಾದೇವ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ, ಇದರ 15ನೇ ವಾರ್ಷಿಕ ಮಹಾಸಭೆಯ ದಿವ್ಯ ಸಾನಿದ್ಯ ಶ್ರೀ ಷ. ಬ್ರ. ಶ್ರೀ ವೀರತಪಸ್ವಿ ವೀರಭದ್ರ ಶಿವಾಚಾರ್ಯರು ವಹಿಸಿದರು ಮುಖ್ಯ ಅತಿಥಿಗಳಾಗಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ರವರು, ಹಾಗೂ ಕಾಡಾ ಆಡಳಿತಾಧಿಕಾರಿಯಾದ ಶ್ರೀ ಶರಣಬಸಪ್ಪ ರವರು ಹಾಗೂ ಸಹಕಾರಿಯ ಅಧ್ಯಕ್ಷರಾದ ಶ್ರೀ ಸಿದ್ರಾಮಪ್ಪ ಹರಸೂರ ಜಿಲ್ಲಾ ಸಂಯೋಜಕರು ಉಪಸ್ಥಿತರಿದ್ದರು.



**ದಾವಣಗೆರೆ** : ದಿ.ವೆಜಿಟಬಲ್ ಪ್ಲಾಂಟ್ ಸೌಹಾರ್ದ ಕೋ–ಆಪರೇಟಿವ್ ಲಿ., ಇದರ 5ನೇ ವರ್ಷದ ಮಹಾಸಭೆಯನ್ನು ದಿನಾಂಕ 09.08.2021ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ. ಸುರೇಶ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಹಕಾರಿಯ ಸದಸ್ಯರಿಗೆ ಕೋವೀಡ್ ಇರುವುದರಿಂದ ಎನ್ 95 ಮಾಸ್ಕ್ ವಿತರಣೆ ಮಾಡಲಾಯಿತು. ಸಹಕಾರಿಯ ಆರ್ಥಿಕ ಪ್ರಗತಿಯ ಅಂಕಿ ಅಂಶಗಳ ಪ್ರಕಾರ ದುಡಿಯುವ ಬಂಡವಾಳ ರೂ. 6,33,63,200, ಠೇವಣಿ ರೂ. 5,50,76,800, ಸಾಲಗಳು ರೂ. 4,99,80,200, ಲಾಭ ರೂ. 19,95,400 ಸದರಿ ಸಾಲಿನಲ್ಲಿ ಗಳಿಸಿರುತ್ತದೆ.




**ಚಿತ್ರದುರ್ಗ** : ಗಂಗೋತ್ರಿ ಸೌಹಾರ್ದ ಸಹಕಾರಿ ನಿ., ಚಳ್ಳಕೆರೆ, ಚಿತ್ರದುರ್ಗ ಸಹಕಾರಿಯ ವಾರ್ಷಿಕ ಶುಲ್ಕ ರೂ 35,400 ಮತ್ತು ಶಿಕ್ಷಣ ನಿಧಿ ರೂ 1,15,892 ಗಳ ಚೆಕ್‌ಗಳನ್ನು ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ಇವರಿಗೆ ನೀಡಲಾಯಿತು.



**ಚಾಮರಾಜನಗರ :** ಓಬಳಿ ಸೌಹಾರ್ದ ಸಹಕಾರಿ ನಿ., ಕೂಡ್ಲೂರು, ಹನೂರು ಇದರ 2020-21ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯನ್ನು ಶ್ರೀ ಎಂ. ನಂಜುಂಡ ಸ್ವಾಮಿ, ವೃತ್ತ ನಿರೀಕ್ಷಕರು, ರಾಮಾಪುರ ಪೊಲೀಸ್ ಠಾಣೆ, ಇವರು ಉದ್ಘಾಟಿಸಿದರು. ವೇದಿಕೆ ಮೇಲೆ ಶ್ರೀ ಡಾ. ಪರಮೇಶ್ವರಪ್ಪ, ಜಿಲ್ಲಾ ಅಧ್ಯಕ್ಷರು, ವೀರಶೈವ ಲಿಂಗಾಯತ ನೌಕರರ ಸಂಘ, ಚಾಮರಾಜನಗರ, ಕೆನರಾ ಬ್ಯಾಂಕ್ ಮ್ಯಾನೇಜರ್, ಶ್ರೀ ಎಸ್. ಗಂಗಾಧರ್, ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು, ಸಿಇಓ ಉಪಸ್ಥಿತರಿದ್ದರು.



**ಮೈಸೂರು :** ಭೀಮಜ್ಯೋತಿ ಸೌಹಾರ್ದ ಸಹಕಾರಿ ನಿಯಮಿತ ವತಿಯಿಂದ ಸಹಕಾರಿ ಸಮ್ಮಿಲನ ಹಾಗೂ ನೂತನ ಸದಸ್ಯರ ಸೇರ್ಪಡೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸಹಕಾರಿ ಧುರೀಣ ಜಗದೀಶ್ ಹೆಬ್ಬಾರ್ ಮುಖ್ಯ ಅತಿಥಿಯಾಗಿದ್ದರು. ಉಪಾಧ್ಯಕ್ಷ ಆರ್. ಲಕ್ಷ್ಮಣ ಪ್ರಾಸ್ತಾವಿಕ ಭಾಷಣ ಮಾಡಿದರು. ಈ ಸಂದರ್ಭದಲ್ಲಿ ಅಧ್ಯಕ್ಷ ತಿಪ್ಪಯ್ಯ, ನಿರ್ದೇಶಕರ ಸಿ.ಪಿ ರಂಗಯ್ಯ, ಪ್ರಸಾದ್ ಲಕ್ಷ್ಮೀನಾರಾಯಣ, ಮಂಜುಳಾ, ಮುಖಂಡರಾದ ಮರಿಸ್ವಾಮಿ, ಮಾರಣ್ಣ, ನಿರ್ದೇಶಕರ ಹನುಮಂತ, ಎನ್. ಆನಂದಪ್ಪ, ಕಿರಣ್, ಕಾರ್ಯದರ್ಶಿ ಸಿ. ಸಬಿತಾ ಉಪಸ್ಥಿತರಿದ್ದರು. ಸಹಕಾರಿ ಸದಸ್ಯರಿಗೆ ಶೇರು ಮತ್ತು ಸಾಲದ ಪಾಸ್ ಪುಸ್ತಕ ವಿತರಿಸಲಾಯಿತು.



**ಚಿಕ್ಕಮಂಗಳೂರು :** ಸಮಾನ ಪತ್ತಿನ ಸೌಹಾರ್ದ ಸಹಕಾರಿಯ 8ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 19.09.2021 ರಂದು ಶ್ರೀ ಮಹಾ ಗಣಪತಿ ದೇವಾಲಯದ ಆವರಣದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ.ಬಿ ದೇವರಾಜ ಇವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಹಕಾರಿಯ ಪ್ರಗತಿಯನ್ನು ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಬಿ.ವೈ ವೆಂಕಟೇಶ್, ಅಧ್ಯಕ್ಷರಾದ ಶ್ರೀ ಕೆ.ಬಿ ದೇವರಾಜು ಮತ್ತು ಉಪಾಧ್ಯಕ್ಷರಾದ ಶ್ರೀ ಡಿ.ಪಿ ಕೃಷ್ಣ ಮೂರ್ತಿ ಇವರು ವಿವರಿಸಿದರು. ಸಹಕಾರಿಯ ಒಟ್ಟು ಠೇವಣಿ 31.03.2021ಕ್ಕೆ ರೂ. 787.11 ಲಕ್ಷವಿದ್ದು ಮುಂಗಡವು ರೂ. 732.47 ಲಕ್ಷ, ಒಟ್ಟು ವಾರ್ಷಿಕ ವ್ಯವಹಾರವು 1519.58 ಲಕ್ಷ ವಿರುತ್ತದೆ. ಒಟ್ಟಾರೆ ಸಹಕಾರಿಯು ಶೇ. 21.12% ಬೆಳವಣಿಗೆಯಾಗಿದೆ ಹಾಗೂ 31.03.2021 ವಾರ್ಷಿಕ ನಿವ್ವಳ ಲಾಭ ರೂ. 25.70 ಲಕ್ಷವಿದ್ದು ಸಹಕಾರಿ ಸದಸ್ಯರಿಗೆ 12% ಡಿವಿಡೆಂಡ್ ನೀಡಲು ನಿರ್ಧರಿಸಿದೆ. ಹಾಗೂ ಮುಂದಿನ ವಾರ್ಷಿಕ ಒಟ್ಟೂ ವ್ಯವಹಾರ ರೂ. 18 ಕೋಟಿ ಗುರಿ ಹೊಂದಿದ್ದು, 28 ಲಕ್ಷ ರೂ ನಿವ್ವಳ ಲಾಭ ಗುರಿ ಹೊಂದಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಹಕಾರಿಯ ನಿರ್ದೇಶಕರುಗಳಾದ ಕೆ.ಎಸ್ ದೊಡ್ಡೇಗೌಡ, ಬಿ.ಜಿ ಸೋಮಶೇಖರಪ್ಪ, ಹೆಚ್.ಡಿ ತಮ್ಮಯ್ಯ, ಯು.ಎಂ ಜಯರಾಮೇಗೌಡ, ಬಿ.ಎ ಬಾಲಕೃಷ್ಣ, ಎಂ.ಎ ರವಿಕುಮಾರ, ಚೇತನ ಜಿ. ನಾಯಕ್ ಶ್ರೀಮತಿ ಟಿ.ಎಂ. ದೇವಿಕ ಉಪಸ್ಥಿತರಿದ್ದರು.



**ಶಿವಮೊಗ್ಗ :** ಶ್ರೀ ಭ್ರಾಂತೇಶ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ., ಶಿಕಾರಿಪುರ ತಾಲೂಕು ಶಿವಮೊಗ್ಗ ಜಿಲ್ಲೆ ಇದರ 8ನೇ ಸರ್ವ ಸದಸ್ಯರ ಸಾಮಾನ್ಯ ಸಭೆಯು ದಿನಾಂಕ 19.09.2021 ರಂದು ಅಧ್ಯಕ್ಷರಾದ ಶ್ರೀ ಶಿವಮೂರ್ತಿ ಗುಡ್ಡಳ್ಳಿ ಇವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಶ್ರೀ ಮ.ನಿ.ಪ್ರ ಚಂದ್ರಶೇಖರ ಮಾಹಾಸ್ವಾಮಿಗಳು ಇವರ ಸಾನಿಧ್ಯದಲ್ಲಿ ನಡೆಯಿತು. ಸಭೆಯಲ್ಲಿ ಮಾಜಿ ಅಧ್ಯಕ್ಷರಾದ ಶ್ರೀ ಗಿಡ್ಡಪ್ಪ ಹೆಚ್ ಜಿ (ಗಿರೀಶ್), ಮಾಜಿ ಉಪಾಧ್ಯಕ್ಷರಾಸದ ಶ್ರೀ ಪಿ.ಎಲ್.ಸುರೇಶ್ ಹಾಗು ಗೌರವಾಧ್ಯಕ್ಷರಾದ ಶ್ರೀ ಮಂಜುನಾಥ ಬಿ. ರವರಿಗೆ ಗೌರವಿಸಲಾಯಿತು ಹಾಗೂ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮಾಡಲಾಯಿತು. ಸಭೆಯಲ್ಲಿ ಆಡಳಿತ ಮಂಡಳಿ ಸದಸ್ಯರು ಕಾರ್ಯದರ್ಶಿ ಪ್ರವೀಣ್ ಕುಮಾರ್ ಆರ್.ವಿ ಮತ್ತು ಸಿಬ್ಬಂದಿ, ಸದಸ್ಯರು ಉಪಸ್ಥಿತರಿದ್ದರು.

# Loan / Credit Appraisal

**- Shri S.G.Kulkarni**

Credit Appraisal is the process by which a lender/ banker appraises the technical feasibility, economic viability and bankability including creditworthiness of the prospective borrower.

It is a very important step in determining the eligibility of a loan borrower for a loan.

"A good thing, well begun, is half done"

Just like every bank charges different rates for different loans from different customers, in the same way, each bank has its own set criteria that one must satisfy to qualify as a certified borrower of money/assets from the bank.

All banks have their own rules to decide the credit worthiness of their borrowers.

Creditworthiness of a customer lies in assessing if that customer is capable of repaying the loan amount in the stipulated time, or not.

Here also, every bank has its own methodology to determine if a borrower is creditworthy or not.

It is determined in terms of the norms and standards set by the banks. Banks employ their own unique objective, subjective, financial and non-financial techniques to evaluate the creditworthiness of their customers.

## What are Credit Scoring and Credit Rating?

Bankers talk about credit scoring and credit rating in the same breath. Therefore, it is important to clarify the difference between credit scoring and credit rating.

These are two entirely distinct concepts and are to be employed in distinctly different scenarios.

Credit scoring is a statistical technique that combines several pre-determined characteristics to form a single score to assess a borrower's credit worthiness.

The score allocated to any application is the sum of the appropriate weights given by the values that the included characteristics take for that application.

Thus, any two identical applications will always receive the same score.

Credit rating, on the other hand, is based more on the experience and judgment of the credit officer and uses financial indicators as key.

The objective of scoring is to replicate manual analysis and approval of loans at a lower cost, with greater speed, while the use of credit rating is reliant on manual analysis by credit officers to supplement the rating provided by the tool.

Credit scoring uses a retail lending approach to credit screening/decision making and is recommended for smaller ticket size loans, where adequate reliable financial data about the borrower is not available.

Credit Rating, on the other hand, is a more appropriate tool for larger, mid-segment or corporate loans which have relevant financial data/ business plans that provide the basis for further credit analysis and information.

SIDBI has developed software for Credit Appraisal called the Credit Appraisal and Rating Tool (CART).

With this software, loan proposals can be appraised on any electronic platform. This will also generate the rating of the proposal so as to decide on the pricing.

Some banks use automated processing for handling applications but use a judgmental method for the final credit decision. Approvals are followed by credit review functions including, credit extension, customer service, security and collections.

## Criteria for Credit Appraisal :

- Incomes Of Applicants And Co-applicants,
- Age Of Applicants,
- Educational Qualifications,
- Profession,
- Experience,
- Additional Sources Of Income,
- Past Loan Record,
- Family History,
- Employer/Business,
- Security of tenure,
- Tax History,
- Assets Of Applicants And Their Financing Pattern,
- Recurring Liabilities,

- Other present and future liabilities and investments (if any).

Based on these parameters, the maximum amount of loan that the bank can sanction and the customer is eligible for is worked out. The broad tools to determine eligibility remain the same for all banks.

| Technical Feasibility | What the Bank is looking for |
|---|---|
| Living Standard | Decent living standard with some tangibles like T.V. & fridge will provide assurance to bank regarding your residential status. |
| Locality | Presence of some undesirable elements like local goons or controversial areas adversely affects your loan appraisal process. |
| Telephonic Verification | At least one response is needed from person to establish the identity of the person from contact point of view. |
| Educational Qualification | Not an essential barrier but essential to understand the complex terms & conditions of bank loan. |
| Political Influence | An interesting reference point in the sense that they are one of major category of loan defaulters. |
| References | To establish the residential identity of person from human contact point of view & cross check of their loans. |

**The 3 methods used to arrive at Eligibility**

- Instalment To Income Ratio (IIR)
- Fixed Obligation To Income Ratio (FOIR)
- Loan To Cost Ratio (LOCR)

**Instalment To Income Ratio (IIR)**

This ratio is generally expressed as a percentage. This percentage denotes the portion of the customer's monthly instalment on the home loan taken. Usually, banks use 33.33 per cent to 40 per cent ratio. This is because it is has been observed that under normal circumstances, a person can pay an instalment up to 33.33 to 40 per cent of his salary towards a loan.

Example: If we consider the instalment to income ratio equal to 33.33 per cent, and assume the gross income to be Rs. 30,000 per month, then as per the ratio, the applicant is eligible for a loan with the maximum instalment of Rs. 10,000 per month or 3:1.

Fixed Obligation To Income Ratio (FOIR): This ratio signifies the importance of the regularity in the repayment of previous loans. In this calculation, the bank considers the instalments of all other loans already availed of by the customer and still due, including the home loan applied for.

In other words, this ratio includes all the fixed obligations that the borrower is supposed to pay regularly on a monthly basis to any bank. Statutory deductions from salary like provident fund, professional tax and deductions for investment like insurance premium, recurring deposit etc. are exempt from these fixed obligations.

Example: Assume that monthly income of an applicant is Rs 30,000 and the applicant has a car loan instalment of Rs 4,000 per month, a TV loan instalment of Rs 1,000 per month.

In addition to this his proposed housing loan instalment is Rs 10,000 per month. Numerically, the ratio is equal to Rs. 15,000 or 50 per cent (i.e. 50 per cent of the monthly income). If the bank has decided on the standard of 40 per cent of ratio as the criteria, then the maximum total instalments the person can pay, as per the standard, would be Rs 12,000 per month.

As he is already paying Rs 5,000 for the car and TV, he only has Rs 7,000 left out. Hence, the customer would be given only that loan for which the EMI would be equal to Rs 7,000, keeping in mind the repayment capacity of the applicant.

**Loan To Cost Ratio (LOCR) :**

This ratio is used by banks to calculate the loan amount that an applicant is eligible to pay on the basis of the total cost of the property. This ratio sets the upper limit or the maximum loan amount that a person is eligible for, irrespective of the loan eligibility under any other criteria. The maximum amount of loan the borrower is eligible to pay is pegged as equal to the cost or value of the property.

Even if the banks' calculations of eligibility, according to the above mentioned two criterions, turns out to be higher, the loan amount can't exceed the cost or value of the property. This ratio is set equal to between 70 to 90 per cent of the registered value of the property.

Hence, while deciding on the maximum amount of loan a customer can be given, the banks use these three parameters. These parameters help in computing loan eligibility, which is crucial in calculating the creditworthiness of a customer. It also acts as a guide to determine the loan amount.

| Economic Viability | Generally accepted percentage |
|---|---|
| Installment To Income Ratio | • IIR for salaried cases would be capped at 60% of Net income<br>• Pension Income cases IIR to be restricted to 40% |
| Fixed Obligation To Income Ratio | FIOR kept at 55% |
| Loan To Cost Ratio | LTC amount to 80% |

| Parameter | Norms | Checkpoints |
|---|---|---|
| Bank Statements | 6 months bank statements need to be furnished | To check the average amount client is maintaining in the account is sufficient to pay the installment amount or not. |
| Business continuity proof | Two year IT returns made compulsory | To enquire primary source of income. |
| Credit interview | For the big loan amount credit interview is necessary. | To check the general attitude of customer along with efforts are put in to understand their needs better. |
| Profile of customer | Salaried professionals get an edge over business income people. | Secured source of income give them a edge |
| Security | Asset of value equal to or more than loan amount taken has to be put as pledge or collateral. | To safeguard bank interest against any future default. |
| Ownership title | To be on the name or blood relative of applicant. | To establish the ownership claim of the loan applicant. |

However, if all the three ratios yield a different value, which is commonly the case, what do the banks do? Simple, they generally select the lowest of the three as the loan amount that the applicant is eligible to pay.

**STEP I - SUBMISSION OF LOAN APPLICATION**

The financial institutions require that an entrepreneur seeking financing assistance should furnish detail information about the project in a prescribed form the borrower submits an application form that seeks comprehensive information about the project.

**STEP II - INITIAL PROCESSING OF LOAN APPLICATION**

When the application is received, an officer of the financial institution reviews it to ascertain whether it is complete for processing. If it is incomplete the borrower is asked to provide the required additional information. When the application is considered complete, the financial institution prepares a 'flash report' which is essentially a summarization of the loan application. On the basis of the

'Flash Report', it is decided whether the project justifies a detailed appraisal or not.

**STEP III - APPRAISAL OF THE PROPOSED PROJECT**

The detailed appraisal of the project covers the Marketing, Technical, Financial, Managerial, and Economic aspects. The appraisal memorandum is normally prepared within two months after site inspection. Based on that a decision is taken whether the project will be accepted or not.

**STEP IV - ISSUE OF THE LETTER OF SANCTION**

If the project is accepted, a financial letter of sanction is issued to the borrower. This communicates to the borrower the assistance sanctioned and the terms and conditions relating thereto.

**STEP V - ACCEPTANCE OF THE TERMS & CONDITIONS BY BORROWING UNIT**

On receiving the letter of sanction from the financial institution, the borrowing unit convenes its board meeting at which the terms and conditions associated with the letter of sanction are accepted and an appropriate resolution is passed to that effect. The acceptance of the terms and conditions has to be conveyed to the financial institution within stipulated period.

**STEP VI - EXECUTION OF LOAN AGREEMENT**

The financial institution, after receiving the letter of acceptance from the borrower, sends the draft of the agreement to the borrower to be executed by the authorized persons and properly stamped as per the Indian Stamp Act, 1899. The agreement, properly executed and stamped, along with other documents as required by the financial institution must be returned to it. Once the financial institution also signs the agreement, it becomes effective.

**STEP VII – DISBURSEMENT OF LOANS**

Periodically, the borrower is required to submit information on the physical progress of the projects, financial status of the project, arrangements made for financing the project, contributions made by the promoters, projected funds flow statement, compliance with various statutory requirements, and fulfilment of the pre-disbursement conditions. Based on the information provided by the borrower, the financial institution will determine the amount of term loan to be disbursed from time to time. Before the entire term loan is disbursed, the borrower must fully comply with all the terms and conditions of the loan agreement.

**STEP VIII - CREATION OF SECURITY**

The term loans (both rupee and foreign currency) and the deferred payment guarantee assistance provided by the financial institutions are secured through the first mortgage, by way of deposit of title deeds, of immovable properties and hypothecation of movable properties. As the creation of mortgage, particularly in the case of land, tends to be a time consuming process, the institutions permit interim disbursements against alternate security (in the form of guarantees by the promoters). The mortgage, however, has to be created within a year from the date of the first disbursement. Otherwise, the borrower has to pay an additional charge of 1 per interest.

**STEP IX – MONITORING**

Monitoring of the project is done at the implementation stage as well as at the operational stage. During the implementation stage, the project is monitored through:

1. Regular reports, furnished by the promoters, which provide information about placement of orders, construction of buildings, procurement of plant, installation of plant and machinery, trial production, etc.
2. Periodic site visits
3. Discussion with promoters, bankers, suppliers, creditors, and other connected with the project
4. Progress reports submitted by the nominee directors, and
5. Audited accounts of the company.

During the operational stage, the project is monitored with the help of:

- Quarterly progress report on the project
- Site inspection
- Reports of nominee directors
- Comparison of performance with promise.

The most important aspect of monitoring, of course, is the recovery of dues represented by interest and principal repayment.

The strategic focus of the management should be upon the rate of new account growth and level of risk taken into the bank credit /loan portfolio.

The ideal would be to find the optimum balance between the approval rate and the risk level.

This is a worthy but elusive goal.

# ಮೈಸೂರು ದಸರಾ ಎಷ್ಟೊಂದು ಸುಂದರ !!

– ಶ್ರೀ ಶಂಕರ ಎಸ್, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

ವಿಜಯದಶಮಿಯ ಭವ್ಯ ದಸರ, ನಾಡಿನೆಲ್ಲೆಡೆ ಸಡಗರ ಸುಂದರ
ನವ ದಿನವೂ ಸಂತಸ ಸಂಭ್ರಮ, ವಿಶಿಷ್ಟ ವೈಭವ ಅನನ್ಯ ಅನುಪಮ॥
ವಿಜಯದ ಹಬ್ಬದ ದೀಪದ ಅಲಂಕಾರ, ನೋಡಲು ಸುಂದರ ನಯನ ಮನೋಹರ
ಜಗನ್ಮಾತೆಗೆ ಭಕ್ತಿಭಾವದ ಉಪಾಸನೆ, ಭಾರತ ಸಂಸ್ಕೃತಿ ಪರಂಪರೆಯ ಆರಾಧನೆ॥

- ಶ್ರೀಮತಿ ಸುಮಾ ಗಾಜರೆ,



ಮೈಸೂರು ದಸರಾ, ಎಷ್ಟೊಂದು ಸುಂದರ ಚೆಲ್ಲಿರಿ ನಗೆಯಾ ಪನ್ನೀರಾ.... ಯಾರಿಗೆ ತಾನೇ ತಿಳಿದಿಲ್ಲ ಈ ಹಾಡು...! ಬರೀ ಹಾಡಷ್ಟೇ ಅಲ್ಲ ನಮ್ಮ ನಾಡಿನ ಹೆಮ್ಮೆಯ ಮೈಸೂರು ದಸರಾವು ಅಷ್ಟೇ ಸುಂದರವಾಗಿದೆ. ಕನ್ನಡ ನಾಡಿನ ಕಲೆ–ಸಂಸ್ಕೃತಿ ಬಿಂಬಿಸುವ, ದೇಶ–ವಿದೇಶದ ಜನರನ್ನು ಆಕರ್ಷಿಸುವ ನವರಾತ್ರಿ, ವಿಜಯ ದಶಮಿ, ದಸರಾ ಹಬ್ಬ, ಜಂಬೂ ಸವಾರಿ ಎಂದೆಲ್ಲ ಕರೆಯಲ್ಪಡುವ "ನಾಡ ಹಬ್ಬ" ದಸರಾದಲ್ಲಿ ನವ ದಿನವೂ ಹೊಸ–ಹೊಸ ಸಂಭ್ರಮ. ಸಾಮಾನ್ಯವಾಗಿ ಈ ಸೆಪ್ಟೆಂಬರ್/ಅಕ್ಟೋಬರ್ ಮಾಸದಲ್ಲಿ ಬರುವ ಈ ಹಬ್ಬವು ನಾಡಿನ ಒಂದು ವಿಶೇಷವಾಗಿದೆ.

1799 ರವರೆಗೂ ಮೈಸೂರು ರಾಜ್ಯದ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣದಲ್ಲೇ ದಸರಾ ನಡೆಯುತ್ತಿತ್ತು. ಆದರೆ ಹೈದರಾಲಿ ಮತ್ತು ಟಿಪ್ಪುವಿನ ಆಳ್ವಿಕೆಯ ನಂತರ ಮತ್ತೆ ಅಧಿಕಾರಕ್ಕೆ ಬಂದ ಯದುವಂಶದ ಮುಮ್ಮಡಿ ಕೃಷ್ಣರಾಜ ಒಡೆಯರ್ (1799–1868) ರಾಜ್ಯದ ರಾಜಧಾನಿಯನ್ನು ಶ್ರೀರಂಗಪಟ್ಟಣದಿಂದ ಮೈಸೂರಿಗೆ ವರ್ಗ ಮಾಡಿದರು. ಅಲ್ಲಿಂದ ಮುಮ್ಮಡಿ ಕೃಷ್ಣರಾಜ ಒಡೆಯರ್ 1800ರಲ್ಲಿ ಮೈಸೂರಿನಲ್ಲಿ ದಸರಾ ಪ್ರಾರಂಭಿಸಿದರು. ಅಲ್ಲಿಂದ ಇಲ್ಲಿಯವರೆಗೆ 'ಮೈಸೂರು ದಸರಾ' ಎಂಬ ಹೆಸರಿನಲ್ಲಿ ನಾಡಹಬ್ಬ ವಿಶ್ವ ವಿಖ್ಯಾತಿ ಪಡೆದುಕೊಂಡಿದೆ.

ದಸರಾ ಸಂಭ್ರಮ ಮೈಸೂರಿನಲ್ಲಿ ಎರಡು ತಿಂಗಳ ಮುಂಚೆಯೇ ಗರಿಗೆದರಿಕೊಳ್ಳುತ್ತದೆ. ಆನೆಗಳು ಕಾಡಿನಿಂದ ಬಂದು ಅರಮನೆ ಅಂಗಳದಲ್ಲಿ ವಾಸ್ತವ್ಯ ಹೂಡುತ್ತವೆ. ಆನೆಗಳ ಆರೈಕೆಗೆ ಮಾವುತ, ಕಾವಾಡಿಗ ಕುಟುಂಬವೂ ಬರುತ್ತದೆ. ನಂತರ ರಸ್ತೆಗಳೆಲ್ಲಾ ಹೊಸ ಜೀವ ಪಡೆಯುತ್ತವೆ. ಸೊರಗಿದ್ದ ಗೋಡೆ, ಕಟ್ಟಡಗಳು ಬಣ್ಣಬಣ್ಣದ ಚಿತ್ತಾರದಲ್ಲಿ ಕಂಗೊಳಿಸುತ್ತವೆ. ಇಡೀ ನಗರಕ್ಕೆ ದೀಪಾಲಂಕಾರ ಮಾಡಲಾಗುತ್ತದೆ. ಮೈಸೂರು ನಗರವನ್ನು ದೀಪಗಳೊಟ್ಟಿಗೆ ರಾತ್ರಿ ನೋಡುವುದೇ ಒಂದು ಸೊಬಗು. ಮದುವಣಗಿತ್ತಿಯಂತೆ ನಗರ ಅಲಂಕೃತಗೊಂಡಿರುತ್ತದೆ. ನಗರದ ನಾನಾ ವೇದಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯುತ್ತದೆ ಖ್ಯಾತ ಕಲಾವಿದರು ಆಗಮಿಸುತ್ತಾರೆ. ದೇಶ–ವಿದೇಶಗಳಿಂದ ಪ್ರವಾಸಿಗರ ದಂಡೇ ಹರಿದು ಬರುತ್ತದೆ. ಮೈಸೂರಿನ ಕಲಾಮಂದಿರ, ಪುರಭವನ, ಚಿಕ್ಕಗಡಿಯಾರ, ವೀಣೆ ಶೇಷಣ್ಣ ಭವನದಲ್ಲಿ ವಿವಿಧ ನೃತ್ಯ ರೂಪಕ ಹಾಗೂ ನಾಟಕ ಪ್ರದರ್ಶನ ನಡೆಯುತ್ತವೆ. ಫಲಪುಷ್ಪ ಪ್ರದರ್ಶನ, ವಸ್ತುಪ್ರದರ್ಶನ, ಯೋಗ ದಸರಾ, ಆಹಾರ ಮೇಳ, ಯುವ ದಸರಾ, ಯುವ ಸಂಭ್ರಮ, ಮಹಿಳಾ ದಸರಾ, ಹಸಿರು ಸಂತೆ, ಚಿತ್ರಸಂತೆ, ಕ್ರೀಡಾಸ್ಪರ್ಧೆ, ಪಂಜಿನ ಕವಾಯತು, ಕವಿ ಗೋಷ್ಠಿ, ರೈತ ದಸರಾ, ಕುಸ್ತಿ ಸ್ಪರ್ಧೆಗಳು, ಕರಕುಶಲ ಮೇಳ, ಓಪನ್ ಬಸ್, ಏರ್ ಶೋ, ಗಾಳಿಪಟ ಉತ್ಸವ, ಹೆಲಿಕಾಪ್ಟರ್ ರೈಡ್, ಕ್ರೀಡೆಯನ್ನು ಪ್ರೋತ್ಸಾಹಿಸಲು ರಾಜ್ಯಮಟ್ಟದ ಕ್ರೀಡೋತ್ಸವ ನಡೆಯುತ್ತದೆ. ಗೊಂಬೆಗಳ ಪ್ರದರ್ಶನ ನೋಡಲು ಎರಡು ಕಣ್ಣು ಸಾಲದು. ಮೈಸೂರು ಈ ವೇಳೆ ಅಕ್ಷರಶಃ ದೇವಲೋಕದಂತೆ ಕಂಗೊಳಿಸುತ್ತಿರುತ್ತದೆ.

ಮೈಸೂರಿನ ಸುತ್ತಮುತ್ತಲಿನ ನಾನಾ ಕಾಲೇಜು ವಿದ್ಯಾರ್ಥಿಗಳು ನೃತ್ಯ ಪ್ರದರ್ಶನ ನೀಡಿ ಗಮನ ಸೆಳೆಯುತ್ತಾರೆ. ಡೊಳ್ಳು, ವೀರಗಾಸೆ, ಪೂಜಾ ಕುಣಿತ, ಕಂಸಾಳೆ, ಚಂಡೆ ಮುಂತಾದ ಜನಪದ ಕಲಾವಿದರು ದಸರಾದಲ್ಲಿ ತಮ್ಮ ಪ್ರತಿಭೆ ಅನಾವರಣಗೊಳಿಸುತ್ತಾರೆ. ಸ್ಥಳೀಯ ಸಂಗೀತ ಕಲಾವಿದರು ಕೂಡ ಇದಕ್ಕೆ ಹೊರತಾಗಿಲ್ಲ. ಚೆನ್ನಾಗಿ ಅಡುಗೆ ಮಾಡುವವರು, ಪ್ರಗತಿಪರ ರೈತ, ಗಿಟಾರ್ ನುಡಿಸುವ ಕಲಾವಿದ, ಪುಸ್ತಕ ಮಾರಾಟಗಾರ, ವಸ್ತ್ರ ವಿನ್ಯಾಸಕ ಎಲ್ಲರೂ ದಸರಾದ ಭಾಗವಾಗಿ ಕೆಲಸ ಮಾಡುತ್ತಾರೆ. ನಮ್ಮ ಮನೆಹಬ್ಬ ಎಂಬಂತೆ ವಿಜೃಂಭಿಸುತ್ತಾರೆ. ಹಾಗಾಗಿ ದಸರಾ ಬರೀ ಅದ್ಧೂರಿ ಆಚರಣೆಯಾಗಿ ಉಳಿಯದೇ ಸಮಾನವಾಗಿ ಎಲ್ಲರನ್ನೂ ಒಳಗೊಳ್ಳುವ, ಎಲ್ಲರಿಗೂ ಸಮಾನ ಅವಕಾಶ ಕೊಡುವ ನಾಡಹಬ್ಬವಾಗಿ ರೂಪುಗೊಂಡಿದೆ.

ಮೈಸೂರಿನ ದಸರಾ ರಾಜಪ್ರಭುತ್ವದ ಸಂಕೇತವೂ ಹೌದು, ತಾಯಿ ಚಾಮುಂಡೇಶ್ವರಿ ಮಹಿಷಾಸುರನೆಂಬ ಅಸುರನನ್ನು ವಧಿಸಿದ ವಿಜಯೋತ್ಸವನ್ನಾಗಿ ನವರಾತ್ರಿಗಳ ಆಚರಣೆಯ ಹತ್ತನೇ ದಿನವನ್ನು ವಿಜಯದಶಮಿಯನ್ನಾಗಿ ಆಚರಿಸಲಾಗುತ್ತದೆ. ಅಂದಿನ ದಿನ ಚಾಮುಂಡೇಶ್ವರಿ ದೇವಿಯ ವಿಗ್ರಹವನ್ನು 750 ಕೆ.ಜಿ ತೂಕದ ಚಿನ್ನದ ಅಂಬಾರಿಯ ಮೇಲೆ ಇರಿಸಿ ಮೆರವಣಿಗೆ ಮಾಡಲಾಗುತ್ತದೆ. ಅನೇಕ ರೋಮಾಂಚಕ ಟ್ಯಾಬ್ಲೋಲ್‌ಗಳು, ನೃತ್ಯ ಗುಂಪುಗಳು, ಸಂಗೀತ ತಂಡಗಳು, ಸಾಂಪ್ರದಾಯಿಕ ಬ್ಯಾಂಡ್‌ಗಳು, ಅಲಂಕರಿಸಿದ ಆನೆಗಳು ಮತ್ತು ಕುದುರೆಗಳು ಎಲ್ಲವೂ ಮೆರವಣಿಗೆಯ ಭಾಗವಾಗಿದೆ. ಮೆರವಣಿಗೆ ಮೈಸೂರು ಅರಮನೆಯಿಂದ ಪ್ರಾರಂಭವಾಗಿ ಪ್ರಸಿದ್ಧವಾದ 'ಬನ್ನಿ' ಮರವನ್ನು ಪೂಜಿಸುವ 'ಬನ್ನಿಮಂಟಪ್' ದಲ್ಲಿ ನಿಲ್ಲುತ್ತದೆ.

ವಿಜಯ ದಶಮಿಯ ರಾತ್ರಿ ಬನ್ನಿಮಂಟಪದಲ್ಲಿ ನಡೆಯುವ ಪಂಜಿನಾ ಕವಾಯತು (ಟಾರ್ಚ್‌ಲೈಟ್ ಪೆರೇಡ್) ಕಾರ್ಯಕ್ರಮದಲ್ಲಿ ಲೇಸರ್ ಪ್ರದರ್ಶನ ಮತ್ತು ಸಿಡಿಮದ್ದು ಪ್ರದರ್ಶನ, ಸಾಂಸ್ಕೃತಿಕ ಕಾರ್ಯಕ್ರಮಗಳು, ಕುದುರೆ ಸವಾರಿ ಮತ್ತು ಮೋಟಾರ್‌ಸೈಕಲ್ ಸಾಹಸಗಳು, ತರಬೇತಿ ಪಡೆದ ಪೋಲೀಸ್ ಸಿಬ್ಬಂದಿಗಳಿಂದ ಪಂಜಿನಾ ಸಾಹಸಗಳು ನಡೆಯುವುದರೊಂದಿಗೆ ಕಾರ್ಯಕ್ರಮ ಮುಕ್ತಾಯವಾಗುತ್ತದೆ. ಆದರೆ ಈ ಬಾರಿ ಕೊರೊನಾ ಮಹಾಮಾರಿಯಿಂದಾಗಿ ಸರಳವಾಗಿ ಮೈಸೂರು ದಸರಾವನ್ನ ಆಚರಿಸಲಾಗುತ್ತಿದೆ.

ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2020-2022 RNI NO. KARBIL-2004/18001/Pages 46
Licensed to post without Prepayment License No. PMG BG/WPP-384/2020-2022.

# ರಾಜಕೀಯ ಮತ್ತು ಆರ್ಥಿಕ ಸ್ವಾತಂತ್ರ್ಯ ಎರಡಕ್ಕೂ ಬುನಾದಿ ಸಹಕಾರ ಚಳುವಳಿ

**– ಶ್ರೀ ಶಂಕರ ಹೆಗಡೆ**

**ಹಿನ್ನೆಲೆ :**

ಈಗ ಪ್ರಪಂಚದಲ್ಲಿ ಹಲವು ಆರ್ಥಿಕ ಪದ್ಧತಿಗಳು ಜಾರಿಯಲ್ಲಿದೆ. ಅವುಗಳಲ್ಲಿ ಬಂಡವಾಳವಾದ ಮತ್ತು ಸಾಮ್ಯವಾದಗಳು ಪ್ರಭಲವಾಗಿವೆ ಈ ಎರಡು ಆರ್ಥಿಕ ಪದ್ಧತಿಗಳಲ್ಲಿ ಅನೇಕ ನ್ಯೂನತೆಗಳು ಕಂಡುಬರುತ್ತಿವೆ. ಇಂದಿನದು "ವಾದಗಳ" ಯುಗ ಜೊತೆಗೆ "ವಾದಿಗಳ" ಯುಗವೂ ಹೌದು ವಾದಗಳು ಬೆಳೆದಷ್ಟು ಅವುಗಳ ಪರವಾಗಿ ವಾದಿಸುವವರ ಸಂಖ್ಯೆಯೂ ಬೆಳೆದಿದೆ.

ಸಹಕಾರ ಒಂದು ಆರ್ಥಿಕ ಪದ್ಧತಿಯಾಗಿ ಪ್ರಪಂಚದಲ್ಲಿ ಅಸ್ಥಿತ್ವಕ್ಕೆ ಬಂದಿದ್ದು 1844 ರಲ್ಲಿ ಇಂಗ್ಲೇಂಡ್ ದೇಶದಲ್ಲಿ ಸಹಕಾರ ಚಳುವಳಿ ಇಂದು ಕೇವಲ ತತ್ವಾದರ್ಶ ವ್ಯವಹಾರ ಮಾತ್ರವೇ ಉಳಿದಿಲ್ಲ. ಅದು ಜೀವನದ ಅವಿಭಾಜ್ಯ ಅಂಗವಾಗಿದೆ "ಆಡು ಮುಟ್ಟದ ಸೊಪ್ಪಿಲ್ಲ" ಎನ್ನುವಂತೆ ಸಹಕಾರ ವ್ಯವಸ್ಥೆ ಸಮಾಜದ ಎಲ್ಲಾ ಆಯಾಮಗಳನ್ನು ಆವರಿಸಿದೆ ಮತ್ತು ಆರ್ಥಿಕ ಚಟುವಟಿಕೆಗಳ ಪ್ರೇರಕ ಶಕ್ತಿಯಾಗಿ ಸಹಕಾರ ವ್ಯವಸ್ಥೆ ಬಂಡವಾಳ ಶಾಹಿ ಮತ್ತು ಸಮತಾವಾದದ ನಡುವಿನ ಸುವರ್ಣ ಮಾಧ್ಯಮ ವೆನಿಸಿದೆ ಭಾರತದಲ್ಲಿ 115 ವರ್ಷಗಳ ಭವ್ಯ ಇತಿಹಾಸವುಳ್ಳ ಈ ಸಹಕಾರ ಚಳುವಳಿ ಮೂಲತಃ ರೈತರಿಗೆ ಸಾಲವನ್ನು ಒದಗಿಸುವ ಸಾಧನವಾಗಿ ಪ್ರಾರಂಭಗೊಂಡರೂ ಇಂದು ಅದು ಕೃಷಿ, ಪತ್ತು, ಮಾರಾಟ, ಹೈನುಗಾರಿಕೆ, ಬ್ಯಾಂಕಿಂಗ್, ಗೃಹ ನಿರ್ಮಾಣ, ಸಕ್ಕರೆ ಕೃಷಿಯೇತರ ಪತ್ತು, ಗ್ರಾಹಕ ಮುಂತಾದ ಕ್ಷೇತ್ರಗಳಲ್ಲಿ ರಾಷ್ಟ್ರದ ಆರ್ಥಿಕ ಅಭಿವೃದ್ಧಿಯ ಪಾಲುದಾರ ವ್ಯವಸ್ಥೆಯಾಗಿ ಮುಂದುವರೆದಿದೆ. ಸಹಕಾರವು ಸಮಾಜವನ್ನು ಮತ್ತು ರಾಷ್ಟ್ರವನ್ನು ಭದ್ರ ಬುನಾದಿಯ ಮೇಲೆ ನಿರ್ಮಾಣ ಮಾಡಬಲ್ಲ ಅದ್ಭುತ ಶಕ್ತಿಯನ್ನು ಹೊಂದಿದೆ.

"ತಾನು ಎಲ್ಲರಿಗಾಗಿ ಹಾಗೂ ಎಲ್ಲರೂ ತನಗಾಗಿ" ಎಂಬುದು ಸಹಕಾರದ ಮೂಲ ಮಂತ್ರ ಆದರೆ ಒಬ್ಬ ಎಲ್ಲರಿಗಾಗಿ ಎಲ್ಲರೂ ಒಬ್ಬರಿಗಾಗಿ ಎಂಬುದು ಬಂಡವಾಳ ವಾದದ/ ಸಾಮ್ಯವಾದದ ಕೂಗು.

ಶೋಷಣೆ ರಹಿತ ಮತ್ತು ವರ್ಗ ರಹಿತ ಸಮಾಜದ ನಿರ್ಮಾಣವೇ ಸಹಕಾರದ ಮೂಲ ಉದ್ದೇಶ ಅಲ್ಲದೇ ಸಂಪತ್ತಿನ ಸಮ ವಿತರಣೆಯನ್ನು ಸಾಧಿಸುವ ಗುರಿಯನ್ನು ಹೊಂದಿದೆ.

**ಪ್ರಜಾ ಪ್ರಭುತ್ವ ಪದ್ಧತಿ :**

ಇದು ಸಹಕಾರ ತತ್ವದ 2ನೇ ಅತಿ ಪ್ರಾಮುಖ್ಯವಾದ ತತ್ವವಾಗಿದ್ದು ಸಹಕಾರದ ಪದ್ಧತಿ ಒಂದು ಉತ್ತಮ ಪ್ರಜಾಪ್ರಭುತ್ವದ ಪದ್ಧತಿಯಾಗಿ ಸದಸ್ಯರುಗಳಿಗೆ ಸಮನಾದ ರಾಜಕೀಯ ಮತ್ತು ಆರ್ಥಿಕ ಹಕ್ಕುಗಳನ್ನು ನೀಡುತ್ತದೆ ಪ್ರಜಾಪ್ರಭುತ್ವದ ಆಡಳಿತ ಪದ್ಧತಿಯಲ್ಲಿ ದೇಶದ ಆಗು ಹೋಗುಗಳನ್ನು ನಿರ್ಧರಿಸುವ ಹಕ್ಕು ಜನತೆಯದು. ಅಂತೆಯೇ ಸಹಕಾರಿ ಸಂಸ್ಥೆಯಲ್ಲಿ ಆಗು–ಹೋಗುಗಳನ್ನು ನಿರ್ಧರಿಸುವ ಪರಮೋಚ್ಛ ಅಧಿಕಾರ ಸಾಮಾನ್ಯ ಸದಸ್ಯರುಗಳದ್ದು ಸದಸ್ಯರುಗಳೇ ಸಹಕಾರ ಸಂಘಗಳ ನಿಜವಾದ ಒಡೆಯರು ಅಥವಾ ಮಾಲೀಕರು.

ಆದರೆ ಇತ್ತೀಚಿನ ದಿನಗಳಲ್ಲಿ ಸರಕಾರದ ಅನಪೇಕ್ಷಿತ ಹಸ್ತಕ್ಷೇಪದಿಂದ ಸದಸ್ಯರ ಅಧಿಕಾರಗಳನ್ನು ಮೊಟಕುಗೊಳಿಸಲಾಗುತ್ತಿದೆ. 97ನೇಯ ಸಂವಿಧಾನ ತಿದ್ದುಪಡಿ ಹಾಗೂ ಸೌಹಾರ್ದ ಸಹಕಾರಿ ವ್ಯವಸ್ಥೆ ತುಸು ಮಟ್ಟಿಗೆ ಸದಸ್ಯರುಗಳಿಗೆ ಹೆಚ್ಚಿನ ಅಧಿಕಾರ ನೀಡುವಲ್ಲಿ ತಕ್ಕ ಮಟ್ಟಿಗೆ ಯಶಸ್ವಿಯಾಗಿದೆ. ಆದರೆ ಸರಕಾರದ ಹಸ್ತಕ್ಷೇಪ ಸಾರ್ವಭೌಮತ್ವ ಆಗಾಗ ಎದ್ದು ಕಾಣುತ್ತದೆ. ಸಹಕಾರಿ ಕಾನೂನು ರೂಪಿಸುವಾಗ ಇಲ್ಲವೇ ತಿದ್ದುಪಡಿ ಮಾಡುವಾಗ ಹಿರಿಯ ಹಾಗೂ ತಜ್ಞ ಸಹಕಾರಿಗಳ ಅಭಿಪ್ರಾಯ ಹಾಗೂ ಅನುಭವಗಳಿಗೆ ಮನ್ನಣೆ ಸಿಗುತ್ತಿಲ್ಲ ಎಂಬ ಧ್ವನಿ ಕೇಳಿ ಬರುತ್ತದೆ. ಈ ಬಗ್ಗೆ ಸಂಬಂಧ ಪಟ್ಟವರು ಆದ್ಯ ಗಮನ ನೀಡಲು ಈ ಮೂಲಕ ಕೋರಿದೆ.

**ಸಮಾನತೆ :**

ಸಹಕಾರ ಪದ್ಧತಿಯಲ್ಲಿ ಮೇಲು ಕೀಳೆಂದು ಭೇಧವೆಣಿಸುವುದಿಲ್ಲ ಅದು ಎಲ್ಲರನ್ನು ಸಮಾನ ದೃಷ್ಠಿಯಿಂದಲೇ ಕಾಣುವುದು. ಇದು ಈ ಪದ್ಧತಿಯ ಒಂದು ವೈಶಿಷ್ಠಯಿದೆ ರಾಜಕೀಯ ಧಾರ್ಮಿಕ ಜಂಜಾಟದಲ್ಲಿ ಸೇರದಿರುವುದು ಸಹಕಾರದ ಇನ್ನೊಂದು ದೊಡ್ಡ ಗುಣ ಸಹಕಾರಿಯಾದವನು ಯಾವ ರಾಜಕೀಯ ತತ್ವದ ಪ್ರತಿಪಾದಕನಾದರೂ ಆಗಿರಬಹುದು. ಆದರೆ ಸಹಕಾರಿ ಸಂಸ್ಥೆಯಲ್ಲಿ ರಾಜಕೀಯ ವಿಚಾರಗಳನ್ನು ತರಕೂಡದು ಅಂತಯೇ ಧಾರ್ಮಿಕ ವಿಚಾರಗಳಲ್ಲಿ ಸಹಕಾರಿ ಸಂಸ್ಥೆ ಸಂಪೂರ್ಣ ನಿರ್ಲಿಪ್ತತೆ ಹೊಂದಿದೆ.

**ಉಪ ಸಂಹಾರ :**

ಒಟ್ಟಿನಲ್ಲಿ ಸಹಕಾರಿ ತತ್ವ ಮೌಲ್ಯಗಳ ಬಗೆಗೆ ಇನ್ನೂ ಹೆಚ್ಚಿನ ವ್ಯಾಪಕ ಅರಿವು ಮೂಡಿಸಬೇಕಾಗಿದೆ ಜೊತೆಯಲ್ಲಿ ಉತ್ತಮ ನಾಯಕತ್ವ ಪ್ರಮಾಣಿಕತೆ ಬದ್ಧತೆ ಮುಂತಾದ ಗುಣಗಳುಳ್ಳ ಸಹಕಾರಿ ನಾಯಕತ್ವ ಕೆಳಮಟ್ಟದಿಂದಲೂ ಬೆಳೆದು ಬರಬೇಕಾಗಿದೆ. ಸ್ವಾಭಿಮಾನಿ ಸಹಕಾರಿ ಸಂಸ್ಥೆಗಳು ಹಾಗೂ ಮಾನ್ಯ ಪ್ರಧಾನ ಮಂತ್ರಿಗಳ ಆತ್ಮ ನಿರ್ಭರತೆಯ ಅಂಶಗಳು ಈ ಸಂಸ್ಥೆಗಳಲ್ಲಿ ಹಾಸು ಹೊಕ್ಕಾಗಿ ಬೆಳೆಯಬೇಕಾಗಿದೆ. ವಿದೇಶಗಳ ಸಹಕಾರ ಚಳುವಳಿಗಳ ಮಾದರಿಯಲ್ಲಿ ನಮ್ಮ ದೇಶದಲ್ಲಿಯೂ ಸಹ ಸಹಕಾರ ಕಾನೂನು/ ಇಲಾಖೆ ಇಲ್ಲದ ಸಹಕಾರ ಸಂಸ್ಥೆಗಳ ಬೆಳೆದು ಬರಬೇಕಾದರೆ ಇನ್ನೆಷ್ಟು ಕಾಲ ಕಾದು ನೋಡಬೇಕಾಗಿದೆ ಎಂಬುದು ಒಂದು ಯಕ್ಷ ಪ್ರಶ್ನೆಯಾಗಿದೆ.

**ಸಹಕಾರ ಚಿರಾಯುವಾಗಲಿ,**

ಕೇಂದ್ರ ಕಛೇರಿ: ದೂರವಾಣಿ ಸಂಖ್ಯೆಗಳು : 080–23378375–80, 23474408, 23573291

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ: ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ (ಮಾರ್ಗೋಸಾ ರಸ್ತೆ), ಪೈಪ್‌ಲೈನ್ ರಸ್ತೆ ಮಲ್ಲೇಶ್ವರಂ, ಬೆಂಗಳೂರು–560010 ದೂ: 080 23449933/34

ಬೆಂಗಳೂರು ಪ್ರಾಂತೀಯ ಕಛೇರಿ: ನಂ 141, 1ನೇ ಮೇನ್, 11ನೇ ಕ್ರಾಸ್, ಡಾ. ರಾಜ್‌ಕುಮಾರ ರಸ್ತೆ, 1–ಕೆ–ಬ್ಲಾಕ್, ರಾಜಾಜಿನಗರ, ಬೆಂಗಳೂರು–560010 ದೂ: 080 23525546.

ಮೈಸೂರು ಪ್ರಾಂತೀಯ ಕಛೇರಿ: ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821 2332299

ಬೆಳಗಾವಿ ಪ್ರಾಂತೀಯ ಕಛೇರಿ: ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831 – 2401551.

ಕಲಬುರಗಿ ಪಾಂತೀಯ ಕಛೇರಿ: ಡಾ. ಎನ್. ಎಸ್. ಪಾಟೀಲ, ಶಿವಶರಣ ನಿಲಯ, ದೇವತಾ ಆಸ್ಪತ್ರೆ ಎದುರುಗಡೆ, ಖೂಬಾ ಪ್ಲಾಟ್, ಕಲಬುರಗಿ – 585102 ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010